

ಗೌರಿ ಲಂಕೇಶರ

ಲಂಕೇಶ್

ಮಾರ್ಚ್ 14, 2007 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ




ಾಡಲ್ ಬೆಡಗಿಗೆ
ಕೋಟಿಯ
ಉಂಗುರ?



ಗೌಡ-ಸೋನಿಯಾ ಭೇಟಿ ಹಿನ್ನೆಲೆ

ರೆಡ್ಡಿ ಬಾಂಬ್!

CBI ತನಿಖೆಗೆ ಆದೇಶ?



ಸರು
ದ್ದೆಯಲ್ಲಿ ರೈ

ಸಾಲಮನ್ನಾ: ಬಜೆಟ್‌ಗೆ ಮುನ್ನ ವಾಸ್ತವ ಮತ್ತು ಭ್ರಾಂತಿ

ಈಗಾಗಲೇ ಇದೇ ಅಂಕಣದಲ್ಲಿ ಹಲವಾರು ಬಾರಿ ಈ ಸಮ್ಮಿಶ್ರ ಸರ್ಕಾರ ಘೋಷಿಸುತ್ತಿರುವ ಸಾಲಮನ್ನಾದ ಸತ್ಯಾಸತ್ಯತೆಗಳ ಬಗ್ಗೆ ಬರೆಯಲಾಗಿದೆ. ಈಗ ಯಡಿಯೂರಪ್ಪನವರ ಎರಡನೇ ಬಜೆಟ್ ಮಂಡನೆ ಹತ್ತಿರ ಬರುತ್ತಿರುವ ವೇಳೆಯಲ್ಲಿ ಮತ್ತೊಮ್ಮೆ ಬರೆಯಲೇಬೇಕಾದ ಪ್ರಸಂಗ ಬಂದಿದೆ.

ಕಳೆದ ಆರು ತಿಂಗಳಿಂದಲೂ ತಮ್ಮ ಸಮ್ಮಿಶ್ರ ಸರ್ಕಾರ ಬಡವರ ಆತ್ಮಹತ್ಯೆಗಳನ್ನು ತಡೆಗಟ್ಟಲು ಸಾಲ ಮನ್ನಾ ಮಾಡುವುದಕ್ಕೆ ಬದ್ಧವಾಗಿದೆ ಎಂದು ಘೋಷಿಸುತ್ತಲೇ ಬರುತ್ತಿಲ್ಲವೇ? ಮೊದಲಿಗೆ ನಮ್ಮ ಮುಖ್ಯಮಂತ್ರಿಗಳು ರೈತರ ಎಲ್ಲಾ ಬಗೆಯ ಸಾಲಗಳನ್ನೂ ಮನ್ನಾ ಮಾಡುತ್ತೇವೆ ಎಂದು ಒಂದು ಸಭೆಯಲ್ಲಿ ಘೋಷಿಸಿಬಿಟ್ಟರು. ನಂತರ ಅವರನ್ನು ಬೆಂಬಿಡದ ಪತ್ರಕರ್ತರು ಎಲ್ಲಾ ಸಾಲ ಮನ್ನಾ ಎಂದರೆ ವಿವರಿಸಿ ಎಂದು ಪೀಡಿಸಲಾರಂಭಿಸಿದರು. ಇದನ್ನೇ ಒಂದು ರಾಜಕೀಯ ಆಯುಧ ಮಾಡಿಕೊಂಡ ಮುಖ್ಯಮಂತ್ರಿಗಳು "ರೈತರ ಒಟ್ಟು ಸಾಲ ಎಂದರೆ ಕೋ-ಆಪರೇಟಿವ್ ಬ್ಯಾಂಕ್ ಸಾಲ, ನ್ಯಾಷನಲ್ ಬ್ಯಾಂಕ್‌ಗಳಲ್ಲಿ ಮಾಡಿರುವ ಸಾಲ ಎಲ್ಲವೂ ಸೇರುತ್ತದೆ. ಅದೆಲ್ಲಾ ಒಟ್ಟು ಸೇರಿ ಅಬ್ಬಬ್ಬಾ ಎಂದರೆ 19,000 ಕೋಟಿ ರೂಪಾಯಿಗಳಾಗುತ್ತದೆ, ಅಷ್ಟೆ. ಅಷ್ಟನ್ನು ಸರ್ಕಾರ ಮನ್ನಾ ಮಾಡಲು ಬದ್ಧವಾಗಿದೆ" ಎಂದು ವೀರಾವೇಶದಲ್ಲಿ ಘೋಷಿಸಿಬಿಟ್ಟರು. ಅದೂ ಪಾಲುದಾರ ಪಕ್ಷ ಬಿಜೆಪಿಯನ್ನು ಹಾಗೂ ಹಣಕಾಸು ಮಂತ್ರಿಯೂ ಆಗಿರುವ ಯಡಿಯೂರಪ್ಪನವರನ್ನು ಸಂಪರ್ಕಿಸದೇ..



ಸಾಲಮನ್ನಾ ಎಂದು ಭರವಸೆ ನೀಡಿ ರೈತರ ಓಟನ್ನು ಕುಮಾರಸ್ವಾಮಿಯವರ ಜನತಾದಳವೇ ಸುಲಭವಾಗಿ ಪಡೆದುಕೊಳ್ಳುತ್ತಿರುವುದನ್ನು ನೋಡಿ ಕರುಬಲಾರಂಭಿಸಿದ ಯಡ್ಡಿ ತನ್ನ ನಿಷ್ಠ ಪತ್ರಕರ್ತರ ಮೂಲಕ ಅಷ್ಟು ಹಣ ಮನ್ನಾ ಮಾಡಲೂ ಹಣ ಎಲ್ಲಿಂದ ತರುತ್ತಾರಂತೆ ಎಂದು ಕೇಳಿಸಲಾರಂಭಿಸಿದರು. ಅದಕ್ಕೂ ನಮ್ಮ ಉತ್ತರ ಕುಮಾರನ ಹತ್ತಿರ ಸಿದ್ಧ ಉತ್ತರವಿತ್ತು. "ಬೆಂಗಳೂರಿನಲ್ಲಿ ಭೂಕಬಳಿಕೆ ಮಾಡಿರುವ ಜಮೀನನ್ನು ವಶಪಡಿಸಿಕೊಂಡು ಅದರಿಂದ ಬಂದ ಹಣದಿಂದ ಸಾಲ ಮನ್ನಾ ಮಾಡುತ್ತೇವೆ" ಎಂಬ ಸೂರ್ಯ ಪಶ್ಚಿಮದಲ್ಲಿ ಹುಟ್ಟುವ ಮಾತುಗಳನ್ನಾಡಲಾರಂಭಿಸಿದರು.

ಸಾಲಮನ್ನಾ ಮಾಡಲು ಬೇಕಿರುವ ಹೆಚ್ಚುವರಿ ಹಣ ಸಂಪನ್ಮೂಲದ ಮಾರ್ಗದ ಬಗ್ಗೆ ಸರ್ಕಾರದ ಈ ಯೋಜನೆ ಪ್ರಕಟವಾದ ನಂತರ ಬಹಳಷ್ಟು ರೈತರಿಗೆ ಇದು ಬರಿ ಪುಗಸಟ್ಟೆ ಭರವಸೆ ಎಂದು ಅರಿವಾಗತೊಡಗಿತು. ನಂತರದಲ್ಲಿ ನಡೆದ ಕ್ಯಾಬಿನೆಟ್ ಸಭೆಯಲ್ಲಿ ಜನತಾದಳ ಮತ್ತು ಬಿಜೆಪಿಗಳು ಕಿತ್ತಾಡಿಕೊಂಡರು. ರೈತರ ಸಾಲ ಮನ್ನಾ ಮಾಡುವುದು ಹೇಗೆ ಎಂಬ ಬಗ್ಗೆ ಅಲ್ಲ, ಬದಲಿಗೆ ಯಾರು ಈ ಪೊಳ್ಳು ಭರವಸೆಯ ಲಾಭ ಪಡೆದುಕೊಳ್ಳಬೇಕು ಎಂಬ ಬಗ್ಗೆ. ಆ ನಂತರ ಹಣಕಾಸು ಮಂತ್ರಿಯೂ ಆಗಿರುವ ಬಿಜೆಪಿಯ ಯಡಿಯೂರಪ್ಪ ಅತ್ಯಂತ ಸ್ಪಷ್ಟವಾಗಿ ತಾನೂ ರೈತರ ಎಲ್ಲಾ ಸಾಲಮನ್ನಾದ ಪರವೇ. ಆದರೆ ಸರ್ಕಾರದ ಹತ್ತಿರ ಅಷ್ಟು ಹಣವಿಲ್ಲ, ಆದ್ದರಿಂದ ಕೋ-ಆಪರೇಟಿವ್ ಬ್ಯಾಂಕ್‌ಗಳಲ್ಲಿ ರೈತರು ಮಾಡಿದ ಸಾಲ ಸಂಪೂರ್ಣವಾಗಿ ಮನ್ನಾ ಮಾಡಲು ಮಾತ್ರ ತಮ್ಮ ಸರ್ಕಾರ ನಿಜಕ್ಕೂ ಬದ್ಧವಾಗಿದೆ ಎಂಬ ಹೊಸ ವರಸೆ ತೆಗೆದರು. ಹಾಗಿದ್ದಲ್ಲಿ ರಾಷ್ಟ್ರೀಯ ಬ್ಯಾಂಕ್‌ಗಳಲ್ಲಿ ಮಾಡಿದ ಸಾಲ? ಅದರ ಬಗ್ಗೆ ಮಾತೇ ಇಲ್ಲ.

ಈಗ ಬಜೆಟ್ ಮಂಡನೆಯ ದಿನಗಳು ಹತ್ತಿರ ಬರುತ್ತಿದ್ದಂತೆ ಕೋ-ಆಪರೇಟಿವ್ ಸಾಲವನ್ನು ಮನ್ನಾ ಮಾಡುವ ಬಗ್ಗೆಯೂ ಸರ್ಕಾರ ಅಪಸ್ವರ ತೆಗೆದಿದೆ. ಮೊನ್ನೆ ಇದರ ಬಗ್ಗೆ ತಮ್ಮ ಹೇಳಿಕೆ ನೀಡಿರುವ ಮಾನ್ಯ ಹಣಕಾಸು ಮಂತ್ರಿಗಳು ಕೋ-ಆಪರೇಟಿವ್ ಬ್ಯಾಂಕ್‌ಗಳ ಸಾಲವೆಲ್ಲವನ್ನು ಮನ್ನಾ ಮಾಡಲು ಆಗುವುದಿಲ್ಲ, ಬದಲಿಗೆ ಕೋ-ಆಪರೇಟೀವ್ ಬ್ಯಾಂಕ್ ಸಾಲವನ್ನು ಎಷ್ಟರಮಟ್ಟಿಗೆ ಮನ್ನಾ ಮಾಡಬೇಕೆಂಬ ಬಗ್ಗೆಯೂ ಯೋಚಿಸಲಾಗುವುದು ಎಂದು ಹೇಳಿದ್ದಾರೆ. ಸಾಲ ಮನ್ನಾ ಬಗ್ಗೆ ಯೋಚನೆಯನ್ನು ಸರ್ಕಾರ ದಶಕಗಳಿಂದ ಮಾಡುತ್ತಲೇ ಬಂದಿದೆ. ಈ ಸರ್ಕಾರವೂ ಯೋಚನೆಯನ್ನು ಮುಂದುವರೆಸುತ್ತದೆ. ಯೋಜನೆಯನ್ನಲ್ಲ. ಇದೇ ಸತ್ಯ. ಬಜೆಟ್‌ಗೆ ಮುನ್ನ ಸಾಲಮನ್ನಾ, ಬಜೆಟ್ ಹತ್ತಿರ ಬರುತ್ತಿದ್ದಂತೆ ಸಾಲಮನ್ನಾದ ಭರವಸೆಯೂ ಮನ್ನಾ!

ಚಾರ್ವಾಕ

- ಶಿವಸುಂದರ್-

ಈಗ ನಮ್ಮ ಕರ್ನಾಟಕ ಸಾರಿಗೆ ಸಂಸ್ಥೆಯ ಹೆಮ್ಮೆಯ ಹೆಗ್ಗಳಿಕೆ ಎಂದರೆ ಆ ಸಂಸ್ಥೆಯಲ್ಲಿರುವ ವೋಲ್ವೋ ಬಸ್ಸುಗಳು. ಐರಾವತ ಎಂಬ ಕನ್ನಡೀಕೃತ ಹೆಸರಲ್ಲಿ ಸಾರಿಗೆ ಸಂಸ್ಥೆ ಸೇರಿರುವ ಈ ವಿದೇಶಿ ಕಂಪನಿಯ ಬಸ್ಸಲ್ಲಿ ಪ್ರಯಾಣಿಕರಿಗೆ ವಿಮಾನದಲ್ಲಿರುವ ಸೌಲಭ್ಯಗಳನ್ನು ಸರ್ಕಾರ ಒದಗಿಸುತ್ತದೆ. ಕುಡಿಯಲು ನೀರು, ಹೊದಿಕೆ, ಪತ್ರಿಕೆ, ಮನರಂಜನೆ, ಸಿನಿಮಾ ಸಂಗೀತ ಇತ್ಯಾದಿ. ಈಗ ಸ್ನಾಕ್ಸ್ ಕೊಡುವ ಯೋಚನೆ ಕೂಡ ನಡೆಯುತ್ತಿದೆ. ಕೊಡಲಿ. ಹೇಗಿದ್ದರೂ ಅದಕ್ಕೆ ದುಪ್ಪಟ್ಟು ದರವನ್ನು ಪ್ರಯಾಣಿಕರಿಂದ ವಸೂಲಿ ಮಾಡುತ್ತದೆ. ದುಡ್ಡಿದ್ದವರು ಕೊಡುತ್ತಾರೆ. ಅದಕ್ಕೆ ನಮ್ಮ ತಕರಾರೇನೂ ಇಲ್ಲ.

ತಕರಾರಿರುವುದು ಈ ಸರ್ಕಾರಿ ಸಂಸ್ಥೆ ವೋಲ್ವೋ ಪ್ರಯಾಣಿಕರ ಜೀವವನ್ನು ಹಾಗೂ ಆದ್ದರಿಂದಲೇ ಅದರ ಚಾಲಕರ ಸಂಕ್ಷೇಮವನ್ನು ಮಾತ್ರ ಅತ್ಯಂತ ಜತನದಿಂದ ರಕ್ಷಿಸಲು ಕಾರ್ಯಕ್ರಮಗಳನ್ನು ಹಾಕಿಕೊಂಡು ಉಳಿದ ಪ್ರಯಾಣಿಕರ ಜೀವಕ್ಕೆ ಬೆಲೆಯೇ ಇಲ್ಲದಂತೆ ವರ್ತಿಸುತ್ತಿರುವುದು..

ನಿಜ. ವೋಲ್ವೋ ಸೌಲಭ್ಯಗಳನ್ನು ನೋಡಿ ಕರುಬಬೇಕಿಲ್ಲ, ಆದರೆ ಸಂಸ್ಥೆ ಇತ್ತೀಚಿಗೆ ತನ್ನ ಎಲ್ಲಾ ವಾಹನಗಳಲ್ಲಿ ಪ್ರಯಾಣಿಕರ ಸನ್ನದನ್ನು ತೂಗು ಹಾಕಿದೆ. ಅದು ಸಂವಿಧಾನಬದ್ಧವೂ ಆಗಿದೆ. ಸರ್ಕಾರವೇ ಆಗಲಿ ಸರ್ಕಾರೀ ಸಂಸ್ಥೆಯೇ ಆಗಲಿ ತನ್ನ ಸೇವೆಗಳನ್ನು ನೀಡುವಾಗ ವರ್ಗ, ಲಿಂಗ, ಪ್ರದೇಶ ಆಧಾರದಲ್ಲಿ ಭೇದಭಾವ ತೋರಬಾರದೆಂಬ ನಿರ್ದೇಶನದ ಭಾಗವಾಗಿಯೇ ತನ್ನೆಲ್ಲಾ ಪ್ರಯಾಣಿಕರಿಗೆ ಕನಿಷ್ಠ ಸೌಕರ್ಯ ಮತ್ತು ಸುರಕ್ಷಿತ ಪ್ರಯಾಣವನ್ನು ಖಾತರಿಗೊಳಿಸುವ ಭರವಸೆ ನೀಡಿದೆ.

ಆದರೆ ವೋಲ್ವೋ ಬಗೆಯ ಸೌಕರ್ಯಗಳನ್ನು ಕೊಡದಿದ್ದರೂ ವೋಲ್ವೋ ಬಸ್ ಪ್ರಯಾಣದ ಸುರಕ್ಷತೆಗೆ ತೆಗೆದುಕೊಳ್ಳುವ ಎಲ್ಲಾ ಕ್ರಮಗಳನ್ನು ಅಂದರೆ ಬಸ್‌ನ ಸುಸ್ಥಿತಿ ಮತ್ತು ಚಾಲಕರ ಸುಸ್ಥಿತಿ ಮತ್ತು ಹಾಗಿರುವಂತೆ ನೋಡಿಕೊಳ್ಳುವ ಭತ್ಯೆ ಎಲ್ಲವನ್ನು ಕೊಡಲೇಬೇಕಲ್ಲವೆ? ಎಲ್ಲಾ ಬಸ್‌ಗಳ ಪರಿಸ್ಥಿತಿಯೂ ಪ್ರಯಾಣ ಮಾಡುವಷ್ಟು

ವೋಲ್ವೋ ಪ್ರಯಾಣಿಕರೂ ಮತ್ತು ಹುಣಸೇ ಬೀಜವೂ

ಒಂದು ವೋಲ್ವೋ ಬಸ್ಸು ಹೊರಡುವುದಕ್ಕೆ ಕನಿಷ್ಠ ಮೂರು ಗಂಟೆ ಮುಂಚೆ ಅದು ಎಲ್ಲಾ ರೀತಿಯಲ್ಲೂ ಸುಸ್ಥಿತಿಯಲ್ಲಿದೆಯೇ ಎಂದು ಚಾಲಕ ಮತ್ತು ಮೆಕ್ಯಾನಿಕ್ ಪರೀಕ್ಷಿಸುತ್ತಾರಂತೆ. ಅಲ್ಪಸ್ವಲ್ಪ ಹೆಚ್ಚು ಕಡಿಮೆ ಇದ್ದರೂ ಪರ್ಯಾಯ ಪ್ರಯಾಣ ವ್ಯವಸ್ಥೆಯನ್ನು ಮಾಡುತ್ತಾರಂತೆ. ಆದ್ದರಿಂದಲೇ ವೋಲ್ವೋ ಬಸ್ ಸಂಚಾರದಲ್ಲಿ ಅಪಘಾತವೇ ಸಂಭವಿಸುವುದಿಲ್ಲವಂತೆ. ಅದಕ್ಕೆ ಇನ್ನೊಂದು ಮುಖ್ಯ ಕಾರಣ ವೋಲ್ವೋ ಬಸ್‌ನ ಚಾಲಕರಾಗಿ ನೇಮಕಗೊಳ್ಳುವವರು ಹೊಸಬರಲ್ಲ, ಈಗಾಗಲೇ ಕಳಂಕರಹಿತ ಚಾಲನೆ ಮಾಡಿ ಹತ್ತಾರು ವರ್ಷ ಅನುಭವವಿರುವವರು ಮಾತ್ರ ವೋಲ್ವೋ ಚಾಲಕರಾಗಲು ಸಾಧ್ಯ. ಅಷ್ಟು ಮಾತ್ರವಲ್ಲ, ಒಂದು ಟ್ರಿಪ್‌ಗೆ ಚಾಲಕನಿಗೆ ನೂರು ರೂಪಾಯಿ ಮತ್ತು ನಿರ್ವಾಹಕನಿಗೆ 75 ರೂಪಾಯಿ ಬಾಟ. ದೂರದ ಪ್ರಯಾಣವಾದರೆ ಇಬ್ಬರು ಚಾಲಕರಿರಬೇಕಾದ್ದು ಕಡ್ಡಾಯ. ಹೀಗಾಗಿ ಸಿಬ್ಬಂದಿಯ ಮೇಲೆ ವಿಶೇಷ ಪ್ರೀತಿಯಿಂದಲ್ಲವಾದರೂ ವೋಲ್ವೋ ಬಸ್ಸಿನಲ್ಲಿ ಪ್ರಯಾಣ ಮಾಡುವ ಶ್ರೀಮಂತ ಪ್ರಯಾಣಿಕರ ಹಿತಾಸಕ್ತಿಯಿಂದ ಬಸ್ಸನ್ನು ಮತ್ತು ಅದರ ಚಾಲಕರನ್ನು ಸಂಸ್ಥೆ ಚೆನ್ನಾಗಿ ನೋಡಿಕೊಳ್ಳುತ್ತಿದೆ.



ಸುಸ್ಥಿತಿಯಲ್ಲಿದೆಯೇ ಎಂದು ಚೆಕ್ ಮಾಡಲೇಬೇಕಲ್ಲವೆ? ಕರ್ನಾಟಕ ಸಾರಿಗೆ, ಸುವರ್ಣ ಸಾರಿಗೆ ಇತ್ಯಾದಿ ಬಸ್‌ಗಳಲ್ಲಿ ರಾತ್ರಿ ಹೊತ್ತು ದೂರದ ಪ್ರಯಾಣ ಮಾಡುವವರ ಪಾಡು ನೋಡಿದರೆ ಸಾಕು ಈ ತಾರತಮ್ಯ ಅರ್ಥವಾಗುತ್ತದೆ. ಇಡಿ ರಾತ್ರಿ ಕೊರೆವ ಚಳಿಯಲ್ಲಿ ಸರಿದು ಹೋಗುವ ಕಿಟಕಿಯನ್ನು ಪದೇ ಪದೇ ಸರಿಸುತ್ತಾ ಸರ್ಕಾರಿ ಬಸ್ಸನ್ನು ಶಪಿಸುತ್ತಲೇ ನರಕಪ್ರಾಯ ಪ್ರಯಾಣ ಕಳೆಯುತ್ತದೆ. ಕೆಲವೊಮ್ಮೆ ಸತತ 24 ಗಂಟೆ ಡ್ಯೂಟಿಯಲ್ಲಿರುವ ಚಾಲಕರೇ ಅದರ ಸಿಬ್ಬಂದಿಯೂ ಆಗಿರುತ್ತದೆ. ಸಿಬ್ಬಂದಿಯೇ ಆಗಲೀ, ಬಸ್ ಆಗಲೀ ಸುಸ್ಥಿತಿಯಲ್ಲಿದೆಯೋ ಇಲ್ಲವೋ ಎಂಬುದನ್ನೂ ಗಮನಿಸದೇ ರಸ್ತೆಯ ಮೇಲೆ ಬಿಟ್ಟರಲಾಗುತ್ತದೆ. ಇದು ಈ ದೇಶದ ನಾಗರಿಕರ ಪ್ರಾಣದ ಕುರಿತಾಗಿ ಸರ್ಕಾರ ತೋರಿಸುತ್ತಿರುವ ತಾರತಮ್ಯವಲ್ಲವೆ? ಹಣವೇ ಪ್ರಧಾನವಾದ ಮಾರುಕಟ್ಟೆ ವ್ಯವಸ್ಥೆಯ ಪರಿಣಾಮವಲ್ಲವೇ? ಹಂಗಾದರೂ ಅವರು ಕೊಡುವುದು ಹಣ, ಇತರರು ಕೊಡುವುದು ಹುಣಸೇ ಬೀಜವೇ?

ಕೊನೆ ಮಾತು

ಕೇಂದ್ರ ಬಜೆಟ್: ಬಡ ಜನ ಶ್ರೀಮಂತರ ನಾಯಿಗಳಿಗಿಂತ ಕಡೆಯೇ?

ವಿಶ್ವ ವಾಣಿಜ್ಯ ಸಂಸ್ಥೆಯ ಆದೇಶದಂತೆ ತಯಾರಾಗಿರುವ ಕೇಂದ್ರ ಬಜೆಟ್ಟಿನಲ್ಲಿ ಏನೇನು ಜನಪರ ಅಂಶಗಳಿವೆ ಎಂದು ಹುಡುಕುವುದು ಕಕ್ಕಸಿನಲ್ಲಿ ಅಕ್ಕಿ ಕಾಳು ಹುಡುಕಿದಂತೆ.... ಜೀರ್ಣವಾಗದ ಅಕ್ಕಿಕಾಳು ಸಿಗಬಹುದು! ಆದರೆ ಅದೂ ಅಮೇಧ್ಯದ ಭಾಗವಾಗಿರುತ್ತದಷ್ಟೆ!! ಇದೇನೂ ಹೊಸದಲ್ಲ, ಮೊದಲಿಂದಲೂ ಇದಿರುವುದು ಹೀಗೆ. ಆದರೆ ಅದರ ಮೇಲೆ ಜನಪರ ಘೋಷಣೆಗಳ ಮಖ್‌ಮಲ್ ಹೊದಿಕೆ ಹೊದಿಸಿ ಜನರ ದಾರಿ ತಪ್ಪಿಸಲಾಗುತ್ತಿತ್ತು, ಈ ಬಾರಿ ಅಂಥ ಕಷ್ಟವನ್ನೂ ಸರ್ಕಾರ ತೆಗೆದುಕೊಂಡಿಲ್ಲ.

ಉದಾಹರಣೆಗೆ ಹಣದುಬ್ಬರದಿಂದ ಮತ್ತು ಆಹಾರಧಾನ್ಯಗಳ ಮುಕ್ತ ರಫ್ತಿನಿಂದಾಗಿ ದೇಶದಲ್ಲಿ ಒಂದೇ ಸಮನೆ ಆಹಾರಧಾನ್ಯಗಳ ಬೆಲೆ ಏರಿಕೆಯಾಗುತ್ತಿದೆ. ಹೀಗಾಗಿ ಬಜೆಟ್ಟನಲ್ಲಿ ಜನರು ತಿನ್ನುವ ಆಹಾರಧಾನ್ಯಗಳ ಬೆಲೆ ಇಳಿಕೆ ಆಗುವುದನ್ನು ಜನ ನಿರೀಕ್ಷಿಸುತ್ತಿದ್ದರು. ಆದರೆ ಚಿದಂಬರಂ ಇಳಿಸಿದ್ದು ಜನರು ತಿನ್ನುವ ಆಹಾರಧಾನ್ಯದ ಬೆಲೆಯನ್ನಲ್ಲ, ಶ್ರೀಮಂತರು ಮೋಜಿಗೆಂದು ಸಾಕುವ ನಾಯಿಗಳ ಆಹಾರದ ಬೆಲೆಯನ್ನು. ಈ ಸರ್ಕಾರಕ್ಕೆ ಶ್ರೀಮಂತರ ಸಾಕುನಾಯಿಯ ಬಗ್ಗೆ ಇರುವಷ್ಟು ಕಾಳಜಿಯಲ್ಲಿ ಅರ್ಧ ಬಾಗದಷ್ಟು ಈ ದೇಶದ ಬಡವರ ಮೇಲಿದ್ದಿದ್ದರೆ?



No Comments

"ಜಿಯೋನಿಸ್ಟರು (ಯಹೂದಿಗಳೇ ಶ್ರೇಷ್ಠ ಎಂದು ವಾದಿಸುವವರು) ಸೈತಾನನ ನಿಜವಾದ ಅವತಾರಿಗಳು."



-ಅಹ್ಮದಿನೆಜಾದ್, ಇರಾನಿನ ಅಧ್ಯಕ್ಷ

"ಬೆಂಗಳೂರಿನ ಭೂಮಿ ಕದಿಯುವಲ್ಲಿ ಕನಿಷ್ಠ 1[illegible] ಅಧಿಕಾರಿಗಳು ಮತ್ತು ಹಲವಾರು ಮಂತ್ರಿ ಹಾಗು[illegible] ಶಾಸಕರೂ ಶಾಮೀಲಾಗಿದ್ದಾರೆ."

-ಪತ್ರಿಕಾ [illegible]


"ಇಪ್ಪತ್ತು ತಿಂಗಳ ನಂತರ ಜನತಾದಳ ಅಧಿಕಾರ[illegible] ಬಿಟ್ಟುಕೊಡದಿದ್ದರೆ ಜನರೇ ಅಧಿಕಾರ ಕೊಡಿಸುತ್ತಾರೆ[illegible]"

-ಸದಾನಂದ ಗೌಡ, ಬಿಜೆಪಿ ಅ[illegible]

ನಂಬಿದ್ರೆ ನಂಬಿ ಬಿಟ್ರೆ ಬಿಡಿ

"ಜಾತ್ಯತೀತ ಜನತಾದಳದ ಜೊತೆ ಮತ್ತೆ ಸಖ್ಯ ಸಾಧ್ಯವೇ ಇಲ್ಲ."


- ಮಲ್ಲಿಕಾರ್ಜುನ ಖರ್ಗೆ



"ಈ ಬಾರಿ ಸಬ್ಸಿಡಿ ಪಡೆದ ಚಿತ್ರಗಳು - ಈಶ, 7 ಓ ಕ್ಲಾಕ್, ರಾಕ್ಷಸ, ಪಾಂಡು ರಂಗ ವಿಠಲ, ಮಲ್ಲ.."!!!

- ಪತ್ರಿಕಾ ವರದಿ

"ಸರ್ಕಾರ ಎಲ್ಲಾ ಕೋಮು ಗಲಭೆಗಳನ್ನು ಯಶಸ್ವಿಯಾಗಿ ನಿರ್ವಹಿಸಿದೆ."



- ಹೆಚ್. ಡಿ. ಕುಮಾರಸ್ವಾಮಿ

"ಈ ಬಾರಿ ರೈತ ಹಾಗೂ ಶ್ರೀಸಾಮಾನ್ಯನ ಪರವಾದ ಬಜೆಟ್ಟನ್ನೇ ಮಂಡಿಸಲಾಗುವುದು."



- ಯಡಿಯೂರಪ್ಪ

'ಆವರಣ' ಕಾದಂಬರಿಯನ್ನು ಜನ ಬಹಳ ಇಷ್ಟಪಟ್ಟಿದ್ದಾರೆ. ಏಕೆಂದರೆ ಜನ ಸತ್ಯವನ್ನು ಹುಡುಕುತ್ತಿದ್ದಾರೆ."



- ಎಸ್. ಎಲ್. ಭೈರಪ್ಪ

ವಾರದ ಎಚ್ಚರಿಕೆ

"ಜಗತ್ತಿನಲ್ಲಿ ಅತಿ ತೀವ್ರವಾಗಿ ಹವಾಮಾ[illegible] ಬದಲಾವಣೆ ನಡೆಯುತ್ತಿದೆ. ಅದರ ದುಷ್ಟ ಪ್ರಭಾ[illegible] ಭಾರತದ ಮೇಲೆ ಅತಿ ಹೆಚ್ಚು ಸಂಭವಿಸಲಿದೆ. ಭಾರತ[illegible] ಜಿ.ಡಿ.ಪಿಯು ಶೇ 5.1 ರಷ್ಟು ನಷ್ಟವಾಗಲಿದೆ. ಬಡವ[illegible] ಕುಡಿಯುವ ನೀರು, ಕೃಷಿ ಭೂಮಿ ಇತ್ಯಾದಿಗಳ[illegible] ತೀವ್ರ ಸಂಕಷ್ಟಕ್ಕೆ ಸಿಲುಕಬೇಕಾದ ಪರಿಸ್ಥಿ[illegible] ಎದುರಾಗಲಿದೆ."

- ರವೀಂದ್ರ ನಾಥ್, ವಿಜ್ಞಾ[illegible]


ವಾರದ ವಿವೇಕ

"ಕೊಲ್ಕತ್ತಾದ ಕೈಗಾಡಿ ರಿಕ್ಷಾಗಳ ನಿಷೇಧಕ್ಕೆ ನನ್ನ ವಿರೋಧವಿಲ್ಲ. ಆದರೆ ಅದಕ್ಕೆ ಮುಂಚೆ ಪಶ್ಚಿಮ ಬಂಗಾಳ ಸರ್ಕಾರ ಅವರ ಬದುಕಿಗೆ ಪರ್ಯಾಯ ಕಲ್ಪಿಸಿ ಆ ಕ್ರಮಕ್ಕೆ ಮುಂದಾಗಲಿ."



-ದೊಮಿನಿಕ್ ಲಾಪ್ಯೆರ್, 'ಸಿಟಿ ಆಫ್ ಜಾಯ್' ಕಾದಂಬರಿಯ ಕರ್ತ[illegible]

ವಾರದ ಘೋಷಣೆ



"ಏಕ ಧ್ರುವ ರಾಷ್ಟ್ರ ಎಂದರೇನು? ಜಗತ್ತಿಗೆಲ್ಲಾ ಒಬ್ಬನೇ ಮಾಸ್ಟರ್ ಎಂದು.... ಇದು ನಮಗೆ ಸಮ್ಮತವಲ್ಲ. ಅಮೆರಿಕ ಇದನ್ನು ಸಾಧಿಸಲು ಎಲ್ಲಾ ರಾಜಕೀಯ, ರಾಜತಾಂತ್ರಿಕ ಮತ್ತು ಆರ್ಥಿಕ ಹದ್ದುಗಳನ್ನು ಮೀರುತ್ತಿದೆ. ಇದನ್ನು ನಾವು ವಿರೋಧಿಸುತ್ತೇವೆ."

- ಪುಟಿನ್, ರಷ್ಯಾದ ಅಧ್ಯಕ್ಷ

ತಾಯಿಯ ಸಂಕಟವನ್ನು ಪಿಶಾಚಿಯ ಕೂಗೆಂದರೆ....

ಆಕೆಯನ್ನು ಊರಿನವರೆಲ್ಲ ಶವಭಕ್ಷಕ ಪಿಶಾಚಿ ಎಂದು ಕರೆಯುತ್ತಾರೆ. ಆವಳ ಕಣ್ಣು ತಮ್ಮ ಮಕ್ಕಳ ಮೇಲೆ ಬೀಳಬಾರದೆಂದು ದೇವರಲ್ಲಿ ಪ್ರಾರ್ಥಿಸುತ್ತಾರೆ. ಆದ್ದರಿಂದಲೇ ಆಕೆ ಊರಿನಿಂದ ದೂರದಲ್ಲಿ ಏಕಾಂಗಿಯಾಗಿ, ನಿರ್ಗತಿಕಳಾಗಿ, ಅರೆಹುಚ್ಚಿಯಾಗಿ ಜೀವಿಸುತ್ತಿದ್ದಾಳೆ.

ಒಮ್ಮೆ ಹತ್ತು ವರ್ಷದ ಹುಡುಗನನ್ನು ಆಕೆ ನೋಡುತ್ತಾಳೆ. ಆಕೆಯ ಕಣ್ಣು ತನ್ನ ಮೇಲೆ ಬಿತ್ತೆಂದು ಹೆದರುವ ಹುಡುಗ ತನ್ನ ತಂದೆಗೆ ಹೇಳುತ್ತಾನೆ. ಆದರೆ ತಂದೆ "ಆಕೆ ನಿನಗೆ ಏನನ್ನೂ ಮಾಡುವುದಿಲ್ಲ, ಹೆದರಬೇಡ" ಅಂತ ಹೇಳುತ್ತಾನೆ. "ಯಾಕೆ ನನಗೇನೂ ಆಗುವುದಿಲ್ಲ, ಆಕೆ ಮಕ್ಕಳ ಶವಗಳನ್ನು ತಿನ್ನುವ ಪಿಶಾಚಿ ಅಲ್ಲವೇ?" ಎಂದು ಕೇಳಿದಾಗ "ಯಾಕೆ ನಿನಗೇನು ಮಾಡುವುದಿಲ್ಲ ಯಾಕೆಂದರೆ ಆಕೆ ನಿನ್ನ ತಾಯಿ, ಅದಕ್ಕೆ" ಅಂತ ಉತ್ತರಿಸುತ್ತಾನೆ.

ಆ ಹುಡುಗನಿಗೆ ಶಾಕ್ ಆಗುತ್ತೆ. ಬುದ್ಧಿವಂತನೂ, ತನ್ನ ಶಾಲೆಯಲ್ಲಿ ಮೇಷ್ಟ್ರ ಮೆಚ್ಚುಗೆಯನ್ನೂ ಪಡೆದಿರುವ ಹುಡುಗನನ್ನು "ಪಿಶಾಚಿಯೊಬ್ಬಳು ಹೇಗೆ ತಾಯಿ ಆಗಲು ಸಾಧ್ಯ?" ಎಂಬ ಪ್ರಶ್ನೆ ಕಾಡುತ್ತದೆ. ಒಂದು ದಿನ "ನನ್ನ ತಾಯಿ ಆಗಿದ್ದವಳು ಹೇಗೆ ಶವಭಕ್ಷಕ ಪಿಶಾಚಿ ಆದಳು ಹೇಳು" ಎಂದು ತಂದೆಯನ್ನು ಕೇಳುತ್ತಾನೆ. ತಂದೆ ಆ ಕತೆಯನ್ನು ಹೇಳುತ್ತಾ ಹೋದಂತೆ ನಮ್ಮ ಸಮಾಜದಲ್ಲಿನ ಜಾತಿ ವ್ಯವಸ್ಥೆ, ಮೂಢನಂಬಿಕೆ, ಮಹಿಳೆಯರ ಶೋಷಣೆ ಎಲ್ಲವೂ ಅನಾವರಣಗೊಳ್ಳುತ್ತಾ ಹೋಗುತ್ತದೆ.

ಆಕೆಯ ಹೆಸರು ಚಂಡಿ. ಸುಂದರಿಯೂ, ದಿಟ್ಟೆದೆಯ ಹುಡುಗಿಯೂ ಆಗಿರುವ ಚಂಡಿ ಊರಿನ ಸ್ಮಶಾನವನ್ನು ನೋಡಿಕೊಳ್ಳುತ್ತಿರುವವನ ಏಕೈಕ ಪುತ್ರಿ. ತಮ್ಮ ಜನಾಂಗಕ್ಕೆ ಸತ್ಯ ಹರಿಶ್ಚಂದ್ರ ಎಲ್ಲಾ ಸ್ಮಶಾನಗಳ ಉಸ್ತುವಾರಿಯನ್ನು ನೀಡಿದ್ದ, ಶವಗಳನ್ನು ಹೂಳುವ ತಮ್ಮ ವೃತ್ತಿ ದೇವರ ಕಾರ್ಯ ಎಂದೇ ನಂಬಿರುವ ಚಂಡಿ, ತನ್ನ ತಂದೆಯ ಮರಣಾನಂತರಸ್ಮಶಾನದ ಜವಾಬ್ದಾರಿ ಹೊರುತ್ತಾಳೆ. ಆಕೆ ನೋಡಿಕೊಳ್ಳುತ್ತಿರುವುದು ಮಕ್ಕಳ ಸ್ಮಶಾನವನ್ನು. ಗುಂಡಿ ತೋಡುವುದರಿಂದ ಹಿಡಿದು, ರಾತ್ರಿ ಕಾವಲು ನಿಲ್ಲುವ ಕೆಲಸವನ್ನೂ ಈ ದಲಿತ ಮಹಿಳೆ ನಿಭಾಯಿಸುತ್ತಿರುತ್ತಾಳೆ.

ಆ ಊರಿನಲ್ಲಿ ಸರ್ಕಾರಿ ಕೆಲಸ ಪಡೆದಿರುವ, ಒಂದಿಷ್ಟು ಓದು ಬರಹ ಬಲ್ಲ ಏಕೈಕ ಪುರುಷ ನರಸು. ಚಂಡಿ ಮತ್ತು ನರಸು ನಡುವೆ ಪ್ರೇಮಾಂಕುರವಾಗಿ ಮದುವೆ ಆಗುತ್ತಾರೆ, ಅವರಿಗೆ ಒಂದು ಗಂಡು ಮಗುವೂ ಜನಿಸುತ್ತದೆ.

ಆಗ ಚಂಡಿಯ ಸಮಸ್ಯೆಗಳು ಪ್ರಾರಂಭವಾಗುತ್ತವೆ. ಹಸುಗೂಸಿನ ತಾಯಿಯಾಗಿರುವ ಚಂಡಿಗೆ ಮಕ್ಕಳ ಶವಗಳನ್ನು ಹೂಳುವುದು ಅಸಾಧ್ಯವಾಗುತ್ತದೆ. ತನ್ನ ಮಗುವನ್ನೇ ಹೂಳುತ್ತಿದ್ದೇನೆ ಎಂದು ಭಾಸವಾಗುತ್ತದೆ. ಈ ವೃತ್ತಿ ಇನ್ನು ತನಗೆ ಬೇಕಿಲ್ಲ ಅನ್ನಿಸುತ್ತೆ. ಆದರೆ ಇದು ವಂಶಪಾರಂಪರ್ಯವಾಗಿ ತನ್ನ ಸಮುದಾಯ ಮಾಡಿಕೊಂಡು ಬಂದಿರುವ ದೇವರ ಕಾರ್ಯ; ಇದನ್ನು ತ್ಯಜಿಸುವುದಾದರೂ ಹೇಗೆ ಎಂಬ ಗೊಂದಲ ಪ್ರಾರಂಭವಾಗುತ್ತದೆ.

ತನ್ನ ತಳಮಳವನ್ನು ಗಂಡನೊಂದಿಗೆ ಹಂಚಿಕೊಳ್ಳಲು ಪ್ರಯತ್ನಿಸುತ್ತಾಳೆ. ಆದರೆ ಆತ ಕಿವಿಗೊಡುವುದಿಲ್ಲ. ಒಂದು ದಿನ ಆಕೆ ಕುಂಬಾ ಹಚ್ಚಿಕೊಂಡಿರುವ ಸಂಬಂಧಿಕರ ಪುಟ್ಟ ಮಗಳು ತೀರಿಹೋಗುತ್ತಾಳೆ. ಆಕೆಯನ್ನು ತನ್ನ ಮಗಳೆಂದೇ ಭಾವಿಸಿದ್ದ ಚಂಡಿಗೆ ಆ ಬಾಲಕಿಯ ಶವವನ್ನೂ ಹೂಳುವ ದೌರ್ಭಾಗ್ಯ ಎದುರಾಗುತ್ತದೆ.

ಮನೆಯಲ್ಲಿ ತನ್ನ ಎದೆ ಹಾಲು ಕುಡಿಯುತ್ತಿರುವ ಕೂಸು. ಸ್ಮಶಾನದಲ್ಲಿ ಕೆಲಸ ಮಾಡುತ್ತಿರುವ ಚಂಡಿಯ ಎದೆಯಿಂದ ತೊಟ್ಟಿಕುತ್ತಿರುವ ಹಾಲು. ಮಕ್ಕಳನ್ನು ದಫನ್ ಮಾಡುವ ತನ್ನ ಕರ್ಮದ ಬಗ್ಗೆ ಅಸಹನೆ. ಆದರೆ ವಂಶದ ಕರ್ತವ್ಯ ಎಂಬ ಮೂಢನಂಬಿಕೆಯ ಹಿಡಿತ. ಇವೆಲ್ಲ ಗೊಂದಲಗಳನ್ನು ಯಾರ ಮುಂದೆಯೂ ಹೇಳಿಕೊಳ್ಳಲಾಗದೆ ಚಂಡಿ ತತ್ತರಿಸುತ್ತಾಳೆ.

ಸೂಕ್ಷ್ಮ ಸ್ವಭಾವದ ಬಾಣಂತಿಯರಿಗೆ ಕೆಲವೊಮ್ಮೆ ಸನ್ನಿ ಆಗುವಂತೆ ಚಂಡಿಯಲ್ಲೂ ವಿಚಿತ್ರ ನಡವಳಿಕೆಗಳು ಕಂಡುಬರುತ್ತವೆ. ಯಾರದೋ ದನಿ ಕೇಳಿಸಿದಂತೆ, ತನ್ನ ಕರ್ತವ್ಯದ ಬಗ್ಗೆ ತನ್ನ ತಂದೆ ಎಚ್ಚರಿಸಿದಂತೆ ಆಕೆಗೆ ಭಾಸವಾಗುತ್ತದೆ. ಅವಳಲ್ಲಾಗುತ್ತಿರುವ ಬದಲಾವಣೆಗಳನ್ನು ಕಂಡು ಆಕೆಗೆ ಸಹಾಯ ಮಾಡುವ ಬದಲು ಗಂಡ ನರಸು ಕಂಗೆಡುತ್ತಾನೆ.

ಈ ಮಧ್ಯೆ ಚಂಡಿ ತುಂಬಾ ಪ್ರೀತಿಸುತ್ತಿದ್ದ ಸಂಬಂಧಿಕರ ಮಗಳನ್ನು ಚಂಡಿಯೇ ಕೊಂದಳೆಂದೂ, ಆ ಬಾಲಕಿಯ ಶವಕ್ಕೆ ತನ್ನ ಎದೆಯಿಂದ ತೊಟ್ಟಿಕ್ಕುತ್ತಿದ್ದ ಹಾಲನ್ನು ಕುಡಿಸಿದಳೆಂದೂ ಜನ ಆರೋಪಿಸುತ್ತಾರೆ. ಆಕೆಗೆ ಭೂತ



ಹಿಡಿದಿದೆ ಎಂದೂ, ಆಕೆ ಮಕ್ಕಳನ್ನು ಜೀವಂತ ಭಕ್ಷಿಸುತ್ತಾಳೆಂದೂ ಸುಳ್ಳುಗಳು ಊರಲ್ಲಿ ಹಬ್ಬುತ್ತವೆ. ಇದರಿಂದಾಗಿ, ಚಂಡಿಯನ್ನು ಮಾತ್ರವಲ್ಲ ಅವಳ ಗಂಡ ನರಸುನನ್ನೂ ಜನ ವಿಚಿತ್ರವಾಗಿ ನೋಡಲಾರಂಭಿಸುತ್ತಾರೆ. ಇದರ ವಿರುದ್ಧ "ನಾನು ಹಸಿ ಬಾಣಂತಿ. ನನ್ನ ಮಗುವಿಗೆ ಕುಡಿಸಬೇಕಿರುವ ಹಾಲನ್ನು ಮಕ್ಕಳ ಶವಗಳಿಗೆ ಯಾಕೆ ನೀಡಲಿ? ನಾನೆಂದೂ ಯಾರಿಗೂ ನೋವು ಕೂಡ ಮಾಡಿದವಳಲ್ಲ, ಇನ್ನು ಮಕ್ಕಳನ್ನು ಬಲಿ ತೆಗೆದುಕೊಳ್ಳುವ ಪ್ರಶ್ನೆ ಎಲ್ಲಿ" ಎಂದು ಚಂಡಿ ಜಗಳಕ್ಕೆ ನಿಂತರೆ, ನರಸು ಕೂಡ ತನ್ನ ಹೆಂಡತಿಯ ಬಗ್ಗೆಯೇ ಸಂಶಯಪಡಲಾರಂಭಿಸುತ್ತಾನೆ.

ಒಂದು ರಾತ್ರಿ ಚಂಡಿ ಸ್ಮಶಾನದಲ್ಲಿದ್ದಾಗ ಅಲ್ಲಿಗೆ ಆಗಮಿಸುವ ಹಳ್ಳಿಯ ಜನ ಆಕೆ ಶವಗಳನ್ನು ಹೊರತೆಗೆದು ತಿನ್ನುತ್ತಿದ್ದಳು ಎಂದು ಆರೋಪಿಸಿ 'ಶವಭಕ್ಷಕ ಪಿಶಾಚಿ' ಎಂದು ಕೂಗಲಾರಂಭಿಸುತ್ತಾರೆ. "ಇಲ್ಲಿ ನರಿಗಳು ಬಂದು ಗುಂಡಿಯನ್ನು ತೋಡಿದ್ದವು. ಅವುಗಳನ್ನು ಓಡಿಸುತ್ತಿದ್ದೆ. ನರಸು ನೀನಾದರೂ ಹೇಳು ನಾನು ಪಿಶಾಚಿ ಅಲ್ಲ" ಎಂದು ಚಂಡಿ ಬೇಡುತ್ತಾಳೆ. ಆದರೆ ಅವಳಿಂದಾಗಿ ಸಮಾಜದಲ್ಲಿ ತನಗಿದ್ದ ಕಿಂಚಿತ್ತು ಮರ್ಯಾದೆಯೂ ಕರಗುತ್ತದೆ ಎಂದು ಭಾವಿಸುವ ನಸು "ನೀನು ಪಿಶಾಚಿ" ಎಂದು ಹೇಳಿ ತನ್ನ ಹೆಂಡತಿಯನ್ನೇ ಜೀವಂತ ನರಕಕ್ಕೆ ದೂಡುತ್ತಾನೆ.

ಅಂದಿನಿಂದ ಚಂಡಿ ಯಾರಿಗೂ ಬೇಡವಾಗಿರುವ, ಎಲ್ಲರೂ ಹೆದರುವ 'ಶವಭಕ್ಷಕ ಪಿಶಾಚಿ'ಯಾಗಿ ಸಾಮಾಜಿಕ ಬಹಿಷ್ಕಾರದ ಬದುಕು ಸಾಗಿಸುತ್ತಿದ್ದಾಳೆ.

ಹಿಂದೊಮ್ಮೆ ಆಕೆ ಸುಂದರವಾಗಿದ್ದಳು, ತನ್ನನ್ನು ಪ್ರೀತಿಸುತ್ತಿದ್ದ ತಾಯಿಯಾಗಿದ್ದಳು ಎಂದು ಅರಿತ

ಕಂಡಹಾಗೆ



ಅವಳ ಹತ್ತು ವರ್ಷದ ಮಗ ಚಂಡಿಯನ್ನು ಮಾತನಾಡಿಸಲು ಹೋಗುತ್ತಾನೆ. "ನೀನು ಮುಂಚೆ ತುಂಬಾ ಚೆನ್ನಾಗಿದ್ದೆ ಅಲ್ಲಾ ನೋಡಕ್ಕೆ? ನಿನ್ನ ಹತ್ರ ಇರೋದು ಅದೊಂದೇ ಸೀರೆನಾ? ನಿನ್ನೆ ಮನೆಯಲ್ಲಿ ಹಬ್ಬ ಇತ್ತು, ತಗೋ ನಿಂಗೆ ತಿನ್ನೋಕೆ ಮಾಂಸ ತಂದಿದ್ದೀನಿ" ಎಂದೆಲ್ಲಾ ಹೇಳಿ ತನ್ನ ತಾಯಿಯೊಂದಿಗೆ ಮಾತನಾಡಲು ಪ್ರಯತ್ನಿಸುತ್ತಾನೆ.

ಹುಡುಗ ಹೋದ ನಂತರ ಆತನಿಗೆ ಈ ವಿಷಯವೆಲ್ಲಾ ಹೇಗೆ ಗೊತ್ತಾಯಿತು? ತನ್ನ ಗಂಡನೇ ಹೇಳಿರಬೇಕು. ಆದರೆ ಯಾಕೆ ಹೇಳಿದ ಎಂದು ಚಿಂತಿಸುತ್ತಾ ಗಂಡನನ್ನು ತರಾಟೆಗೆ ತೆಗೆದುಕೊಳ್ಳಲು ಚಂಡಿ ಹೊರಡುತ್ತಾಳೆ. ಆದರೆ ಆಕೆ ಹಾದುಹೋಗಬೇಕಿರುವ ರೈಲಿನ ಹಳಿ ಮೇಲೆ ಢಕಾಯಿತರು ಮರಗಳನ್ನು ಪೇರಿಸಿಟ್ಟು ಟ್ರೈನಿನಲ್ಲಿರುವ ಹಣವನ್ನು ದೋಚಲು ಸಜ್ಜಾಗಿರುತ್ತಾರೆ.

ಆದರೆ 'ಶವಭಕ್ಷಕ ಪಿಶಾಚಿ' ಚಂಡಿಯನ್ನು ಕಂಡು ಅವರೆಲ್ಲ ಓಡಿ ಹೋಗುತ್ತಾರೆ. ರೈಲು ಅಪಘಾತವನ್ನು ತಪ್ಪಿಸಲು ಚಂಡಿ ಪೇರಿಸಿಟ್ಟಿರುವ ಮರಗಳನ್ನು ಸರಿಸಲು ಯತ್ನಿಸುತ್ತಾಳೆ. ಆದರೆ ಅವಳಿಂದಾಗುವುದಿಲ್ಲ, ತನ್ನತ್ತ ದಾವಿಸುತ್ತಿರುವ ಟ್ರೈನ್ ಚಾಲಕನಿಗೆ ಗಾಡಿಯನ್ನು ನಿಲ್ಲಿಸುವಂತೆ ಸೂಚಿಸಲು ಆಕೆ ಟ್ರೈನಿನತ್ತ ಓಡುತ್ತಾಳೆ. ಆದರೆ ಚಾಲಕನಿಗೆ ಆಕೆ ಕಾಣದೆ ಚಂಡಿ ಟ್ರೈನಿನಡಿ ಸಿಕ್ಕು ಸತ್ತು ಹೋಗುತ್ತಾಳೆ.

ಢಕಾಯಿತರಿಂದ ಟ್ರೈನನ್ನು ರಕ್ಷಿಸಿದ್ದಕ್ಕೆ ಸರ್ಕಾರ ಅವಳ ಸಂಸಾರಕ್ಕೆ ಪರಿಹಾರ ಧನ ನೀಡಲು ಮುಂದಾಗುತ್ತದೆ. "ಈ ಊರಿನಲ್ಲಿ ಅವಳ ಸಂಬಂಧಿಕರು ಯಾರಾದರೂ ಇದ್ದಾರೆಯೇ?" ಎಂದು ಅಧಿಕಾರಿ ಕೇಳಿದಾಗ, ಎಲ್ಲರೂ ಸುಮ್ಮನಿರುತ್ತಾರೆ. ಹುಡುಗ ತನ್ನ ತಂದೆಯತ್ತ ನೋಡುತ್ತಾನೆ; ಸಾವಿನಲ್ಲಾದರೂ ಆಕೆ ತನ್ನ ಹೆಂಡತಿಯಾಗಿದ್ದಳು ಎಂದು ಒಪ್ಪಿಕೊಳ್ಳಲಿ ತನ್ನ ತಂದೆ ಎಂಬ ಆಶೆಯಿಂದ. ಆದರೆ ನರಸು ಕೂಡ ತುಟಿಪಿಟಿಕ್ ಅನ್ನುವುದಿಲ್ಲ.

ಕೊನೆಗೆ ಹುಡುಗನೇ ಬಾಯಿಬಿಟ್ಟು "ಆಕೆ ನನ್ನ ತಾಯಿ" ಅಂತಾನೆ....

ಇದು 'ಮಾತಿ ಮಾಯ್' (ನನ್ನ ತಾಯಿ) ಎಂಬ ಮರಾಠಿ ಚಿತ್ರದ ಕತೆ. ಇದು ಪ್ರಖ್ಯಾತ ಬೆಂಗಾಲಿ ಲೇಖಕಿ ಮಹಾಶ್ವೇತಾ ದೇವಿ ಅವರು ಬರೆದಿರುವ ಕತೆಯನ್ನು ಆಧರಿಸಿ ಚಿತ್ರಾ ಪಾಳೇಕರ್ ನಿರ್ದೇಶಿಸಿರುವ ಚಿತ್ರ.

ಚಂಡಿ ಎಂಬ ಮಹಿಳೆಯ ದುರಂತದ ಕತೆಯನ್ನು ಹೇಳುವ ಮೂಲಕ ನಮ್ಮ ಸಮಾಜದಲ್ಲಿ ದಲಿತರು ಅನುಭವಿಸುವ ಅವಮಾನ, ಅದರಲ್ಲೂ ಮಹಿಳೆಯರಿಗಾಗುವ ಅನ್ಯಾಯ, ವೈಯಕ್ತಿಕ ನೆಮ್ಮದಿಗಿಂತ ಸಾಮಾಜಿಕ ಸ್ಥಾನಮಾನಗಳಿಗೆ ಹೆಚ್ಚು ಬೆಲೆ ಕೊಡುವ ಪುರುಷ ಚಿಂತನೆ, ಇವೆಲ್ಲಾವನ್ನೂ ಚೆನ್ನಾಗಿ ಸೆರೆಹಿಡಿದಿದೆ 'ಮಾತಾ ಮಾಯಿ.'

ಅಂದಹಾಗೆ ನನ್ನ ತಂಗಿ ಬೇಬಿ (ಕವಿತಾ) ಪ್ರತಿ ವರ್ಷ ಅಪ್ಪನ ಹೆಸರಲ್ಲಿ ಅತ್ಯುತ್ತಮ ಚೊಚ್ಚಲ ನಿರ್ದೇಶನ ಮಾಡಿರುವ ಭಾರತೀಯರಿಗೆ ನೀಡುವ 'ಲಂಕೇಶ್ ಚಿತ್ರ ಪ್ರಶಸ್ತಿ' ಈ ವರ್ಷ 'ಮಾತಿ ಮಾಯ್' ಚಿತ್ರದ ನಿರ್ದೇಶಕಿ ಚಿತ್ರಾ ಪಾಳೇಕರ್ ರವರಿಗೆ ಲಭಿಸಿದೆ.

ಈ ವರ್ಷ ಅರುಣಾಚಲ ಪ್ರದೇಶದಿಂದ ಮೊಂಪ ಭಾಷೆಯ (ಇದು ಆ ಭಾಷೆಯಲ್ಲಿ ನಿರ್ಮಾಣವಾಗಿರುವ ಪ್ರಪ್ರಥಮ ಚಿತ್ರ ಕೂಡ!) ಚಿತ್ರದಿಂದ ಹಿಡಿದು ದೇಶದ ವಿವಿಧ ಕಡೆಗಳಿಂದ ವಿವಿಧ ಭಾಷೆಯ ಒಟ್ಟು 18 ನಿರ್ದೇಶಕರು ತಮ್ಮ ಪ್ರಥಮ ಚಿತ್ರವನ್ನು ಕಳುಹಿಸಿದ್ದರು. ಜ್ಯೂರಿಯ ಸದಸ್ಯರಾದ ಬಿ. ಸುರೇಶ್, ಗಂಗಾಧರ ಮೊದಲಿಯಾರ್, ಚಂದ್ರಿಕಾ ಮತ್ತು ನನ್ನ ತಂಗಿ ಎಲ್ಲಾ ಸಿನಿಮಾಗಳನ್ನು ನೋಡಿದ ನಂತರ 'ಮಾತಿ ಮಾಯ್' ಚಿತ್ರದ ಚಿತ್ರಾ ಪಾಳೇಕರ್ ಮತ್ತು 'ಅನುರನನ್' ಎಂಬ ಬೆಂಗಾಲಿ ಚಿತ್ರದ ನಿರ್ದೇಶಕ ಅನಿರುದ್ಧ್‌ರಾಯ್ ಚೌಧುರಿ ನಡುವೆ ಯಾರನ್ನು ಆಯ್ಕೆ ಮಾಡಬೇಕೆಂಬ ಜಿಜ್ಞಾಸೆಗೆ ಬಿದ್ದರು. ಏಕೆಂದರೆ 'ಅನುರನನ್' ಕೂಡ ಉತ್ತಮ ಚಿತ್ರವೇ. ಮನುಷ್ಯ ಸಂಬಂಧಗಳು, ಮದುವೆ ಎಂಬ ಬಂಧನ ಮತ್ತು ಪ್ರೀತಿ ಎಂಬ ಬಿಡುಗಡೆ ಸುತ್ತ ಸಾಗುವ 'ಅನುರನನ್' ಚಿತ್ರ ತುಂಬಾ ಸುಂದರವಾಗಿಯೂ, ನೈಜವಾಗಿಯೂ ಇದೆ. ಆದರೆ ಅದು ನಮ್ಮ ಸಮಾಜದ ಮೇಲ್‌ಸ್ತರದ, ಉಳ್ಳವರ ಬದುಕಿನ ಕತೆಯಾಗಿದೆ.

ಆದ್ದರಿಂದ ಲಂಕೇಶರ ಹೆಸರಲ್ಲಿ ಕೊಡುವ ಪ್ರಶಸ್ತಿಯನ್ನು ನಮ್ಮ ಸಮಾಜದಲ್ಲಿ ಇಂದಿಗೂ ಶೋಷಣೆಗೆ ಒಳಗಾಗಿರುವ, ದೌರ್ಜನ್ಯಕ್ಕೆ ತುತ್ತಾಗಿರುವ ದಲಿತರ-ಅದರಲ್ಲೂ ದಲಿತ ಮಹಿಳೆಯ-ಕತೆಯನ್ನು ಹೇಳುವ 'ಮಾತಿ ಮಾಯ್'ಗೆ ಕೊಡುವುದೇ ಸೂಕ್ತ ಅನ್ನಿಸಿತು ಜ್ಯೂರಿ ಸದಸ್ಯರಿಗೆ.

ಅಂದಹಾಗೆ, ಮಾರ್ಚ್ 8 ಅಪ್ಪನ ಹುಟ್ಟಿದ ಹಬ್ಬ. ಅಂದು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕೂಡ. ಅವತ್ತು ಅಪ್ಪನ ಹೆಸರಲ್ಲಿ ಅವರ ಮಗಳು ನೀಡುವ ಪ್ರಶಸ್ತಿ ಮಹಿಳಾ ನಿರ್ದೇಶಿಕೆಗೆ ಸಲ್ಲುತ್ತಿರುವುದು ಕಾಕತಾಳೀಯ. ಆದರೆ 'ಮಾತಾ ಮಾಯಿ'ಯಲ್ಲಿರುವ ದಲಿತರ ಬದುಕಿಗೂ, ಏಳು ವರ್ಷಗಳ ಹಿಂದೆ ಕಂಬಾಲಪಳ್ಳಿಯಲ್ಲಿ ಜೀವಂತ ದಹನವಾದ ದಲಿತರಿಗೂ, ಅದನ್ನು ಇದೇ ಮಾರ್ಚ್ 11 ರಂದು 'ಕರಾಳ ದಿನ'ವಾಗಿ ಆಚರಿಸುತ್ತಿರುವುದೂ ಕಾಕತಾಳೀಯವಾದರೂ ಅದು ಕಟುವಾಸ್ತವ....

ಇದೇ ಗುರುವಾರ ಮಾರ್ಚ್ 8 ರಂದು 'ಲಂಕೇಶ್ 72' ಕಾರ್ಯಕ್ರಮದ ಅಂಗವಾಗಿ 'ಮಾತಾ ಮಾಯಿ' ಚಿತ್ರದ ಪ್ರದರ್ಶನವಿದೆ. ಸದಭಿರುಚಿ ಸಿನಿಮಾ ಆಸಕ್ತರು, ಅಪ್ಪನ ಅಭಿಮಾನಿಗಳು, 'ಲಂಕೇಶ್' ಓದುಗ ಮಿತ್ರರು, ಪ್ರಗತಿಪರ ಹೋರಾಟಗಾರರು ಅವತ್ತು ಬಂದು ಕಾರ್ಯಕ್ರಮದಲ್ಲಿ ಭಾಗವಹಿಸಿ ಈ ಮನಮುಟ್ಟುವ ಚಿತ್ರವನ್ನು ನೋಡಬೇಕೆಂದು ಆಹ್ವಾನಿಸುತ್ತಿದ್ದೇನೆ. ನನ್ನ ಮನಸ್ಸನ್ನು ಕಲಕಿದ ಈ ಚಿತ್ರವನ್ನು ನೀವೊಮ್ಮೆ ನೋಡಿ, ಬನ್ನಿ.

-ಗೌರಿ ಲಂಕೇಶ್

ಲಂಕೇಶ್ ವಿಶೇಷಾಂಕ

ನಿಮ್ಮ ನೆಚ್ಚಿನ 'ಲಂಕೇಶ್' ವಾರಪತ್ರಿಕೆಯ ವಿಶೇಷಾಂಕ!

ಕನ್ನಡದ ಶ್ರೇಷ್ಠ ಸಾಹಿತಿಗಳ ಕತೆ, ಕವನ, ಲೇಖನ, ವಿನೋದ!

ಎಲ್ಲರ ಮನ, ಒಲವು, ಒನಪು ಬಿಂಬಿಸುವ ಸಮೃದ್ಧ ಸಂಚಿಕೆ!

ಮಾರ್ಚ್ 19 ಯುಗಾದಿಗೆ ಮಾರುಕಟ್ಟೆಯಲ್ಲಿ


ನಿಮ್ಮ ಪ್ರತಿಯನ್ನು ಇಂದೇ ಕಾಯ್ದಿರಿಸಿ



ಕೆಸರುಗದ್ದೆಯಲ್ಲಿ ಮುತ್ತಪ್ಪ ರೈ

ಮಾಜಿ ಡಾನ್ ಮುತ್ತಪ್ಪ ರೈ ತಲೆಯಲ್ಲಿ ಯಾವ ಸ್ಕೆಚ್ ಇದೆಯೋ ಈ ತಕ್ಷಣಕ್ಕೆ ಸ್ಪಷ್ಟವಾಗುತ್ತಿಲ್ಲ. ಆದರೂ ಶ್ರೀರಂಗಪಟ್ಟಣದ ರೆಸಾರ್ಟ್‌ನಿಂದ ಹಿಡಿದು ಪುತ್ತೂರಿನ ಕೆಸರು ಗದ್ದೆವರೆಗೂ ರೈ ಹೆಸರು ಓಡಾಡುತ್ತಿದೆ. ಸಮಾಜ ಸೇವೆ, ಸಾಮೂಹಿಕ ಮದುವೆಗಳಿಂದ ಶುರುವಾಗಿ ಗರ್ಭಭರಿತ ಪತ್ರಕರ್ತನ ಗಟ್ಟಿಸ್ಸುವರೆಗೂ ರೈ ಇಮೇಜನ್ನು ಬೆಳೆಸಲಾಗುತ್ತಿದೆ. ಈ ಮಧ್ಯೆ ಬೆಂಗಳೂರಿನಲ್ಲಿ ರೈನ ರಿಯಲ್ ಎಸ್ಟೇಟ್ ವ್ಯವಹಾರಗಳೂ ಹೈ ಸ್ಪೀಡಿನಲ್ಲಿ ನಡೆಯುತ್ತಿವೆ. ಇಲ್ಲಿ ರೈ ಬಂಟರಾದ ಶಾಜಿ, ದಿನೇಶ್ ಕಾಮತ್, ಅರುಣ್, ಸದಾಶಿವನಗರದ ಸಂಗೀತ ಮುಂತಾದವರು ರೈ ಬೇನಾಮಿಗಳಾಗಿ ಭೂ ಖರೀದಿಯಲ್ಲಿ ಬ್ಯುಸಿಯಾಗಿ ಬಿಟ್ಟಿದ್ದಾರೆ.

ಫಾಸ್ಟ್ ಟ್ರ್ಯಾಕ್ ಕೋರ್ಟಿನಲ್ಲಿ ತನ್ನ ಮೇಲಿದ್ದ ಕೇಸ್‌ಗಳನ್ನೆಲ್ಲಾ ಕ್ಲಿಯರ್ ಮಾಡಿಸಿಕೊಂಡು ನಿರಾಳವಾಗಿದ್ದ ರೈಗೆ ಈಗಿರುವ ಸಣ್ಣ ತೊಂದರೆ ಏನೆಂದರೆ ರಾಜ್ಯ ಸರ್ಕಾರ ಇದೇ ಕೇಸ್‌ಗಳಿಗೆ ಸಂಬಂಧಿಸಿದಂತೆ ಹೈಕೋರ್ಟಿಗೆ ಅಪೀಲು ಹೋಗಿರುವುದು ಮಾತ್ರ. ಪೊಲೀಸರೂ ಕೂಡ ರೈ ಒಬ್ಬ ಹಿಂದೂ ದೇಶಭಕ್ತ ನೆನ್ನುವಂತೆ ಭಕ್ತಿಭಾವ ಪ್ರದರ್ಶಿಸುತ್ತಿರುವುದರಿಂದ ಈ ಕೇಸ್‌ಗಳ ಗತಿ ಏನಾಗಲಿದೆ ಎಂದು ಯಾರು ಬೇಕಾದರೂ ತರ್ಕಿಸಬಹುದು ಬಿಡಿ. ಈ ಹಿಂದೂ ಮೇನಿಯಾದ ಅಂಶವೇ ರೈನನ್ನು ಇನ್ನೊಂದು ಹೆಜ್ಜೆ ಮುಂದೆ ಬರುವಂತೆ ಮಾಡಿ ಪತ್ರಕರ್ತನನ್ನಾಗಿಸಿಬಿಟ್ಟಿದೆ. ಒಂದು ಕಾಲದಲ್ಲಿ ಫುಲ್‌ಟೈಂ ಚಿಡ್ಡಿಗಳೇ ಪ್ರಕಟಿಸುತ್ತಿದ್ದ ಗರ್ವ ಎಂಬ ಪತ್ರಿಕೆ ಇತ್ತು. ದಲಿತರು, ಹಿಂದುಳಿದವರು ಹಾಗೂ ಮುಸ್ಲಿಮರ ಮೇಲೆ ಪ್ರತಿವಾರ ವಿಷಕಾರುತ್ತಿದ್ದ ಹಾಗೂ ಕರ್ನಾಟಕದ ಪ್ರಗತಿಪರರ ವಿರುದ್ಧ ಬಿಟ್ಟೂಬಿಡದೇ ಚಿಲ್ಲರೆ ಲೇಖನಗಳನ್ನು ಪ್ರಕಟಿಸುತ್ತಿದ್ದ ಈ ಗರ್ವರ ದನಿ ನಂತರ ಉಡುಗಿ ಹೋಗಿತ್ತು.


ಮುತ್ತಪ್ಪ ರೈ

ಮಾಜಿ ಡಾನ್ ರೈ ಈಗ ಅದರ ಸಾರಥ್ಯ ವಹಿಸಿಕೊಂಡಿದ್ದಾನೆ. ಗರ್ವ ಈಗ ಮತ್ತೆ ಪ್ರಕಟಣೆ ಆರಂಭಿಸಿದ್ದು ರೈ ಅದರಲ್ಲಿ ತನ್ನ ಆತ್ಮಕತೆ ಬರೆಸುತ್ತಿದ್ದಾನೆ. ಇನ್ನೂ ತಮಾಷೆ ಏನೆಂದರೆ ಬೆಂಗಳೂರು ಮೈಸೂರು ರಸ್ತೆಯ ದಾರಿಯುದ್ದಕ್ಕೂ ಈಗ ಮುತ್ತಪ್ಪ ರೈ ಕಟೌಟ್‌ಗಳು ರಾರಾಜಿಸುತ್ತಿವೆ. ರೈ ಒಬ್ಬ ಲೋಕನಾಯಕನೇನೋ ಎಂಬಂತೆ ಅಭಿಮಾನಿ ಸಂಘಗಳೂ ಹುಟ್ಟಿಕೊಂಡಿವೆ. ಬಹುಶಃ ಈ ಅಭಿಮಾನಿ ದೇವರುಗಳ ಶಾಖಾಯ ಲವಣಾಯುಗಳಿಗೆಲ್ಲಾ ರೈಯೇ ದುಡ್ಡು ಕೊಡುತ್ತಿರಬಹುದು. ತನ್ನ ಸ್ವಂತದ ಸೆಕ್ಯುರಿಟಿಗೆಂದೇ ತಿಂಗಳಿಗೆ ಒಂದೂವರೆ ಲಕ್ಷ ಖರ್ಚು ಮಾಡುವ ರೈ ಇನ್ನು ತನ್ನ ಇಮೇಜು ಬೆಳೆಸಲು ಶ್ರಮಿಸುವ ಭಂಟರಿಗೆ, ಪತ್ರಕರ್ತರಿಗೆ ಇನ್ನೊಂದೆರಡು ಲಕ್ಷ ಖರ್ಚು ಮಾಡದಿರುತ್ತಾನೆಯೇ?

ಕೆಟ್ಟ ಇಮೇಜು ಇರುವವರು ತಾನೇ ಹೊಸ ಇಮೇಜು ಗಳಿಸಲು ಸರ್ಕಸ್ ಮಾಡಬೇಕು?

ಈ ಮಧ್ಯೆ ರೈ ಗಮನ ತನ್ನ ಸ್ವಂತ ಊರಾದ ಪುತ್ತೂರಿನತ್ತಲೂ ತಿರುಗಿದೆ.

ಕೆಸರುಗದ್ದೆಯಲ್ಲಿ ಮುತ್ತಪ್ಪ ರೈ!

ಪುತ್ತೂರಿನಲ್ಲಿ ಮತ್ತೆ ಮುತ್ತಪ್ಪ ರೈ ಸಕ್ರಿಯನಾಗುತ್ತಾನಾ? ರೈಯ ರಾಜಕೀಯ ಅರಂಗ್ರೇಟಂಗೆ ಕಾಲ ಸನ್ನಿಹಿತವಾಯಿತೇ? ಇಂತಹ ಪ್ರಶ್ನೆಗಳನ್ನು ಹುಟ್ಟು ಹಾಕುತ್ತಿರುವುದು ಪುತ್ತೂರಿನ ಕೋಟಿಚೆನ್ನಯ ಜೋಡುಕರೆ ಕಂಬಳ ಮತ್ತದರ ಸಾರಥ್ಯ ವಹಿಸಿಕೊಂಡಿರುವ ಮುತ್ತಪ್ಪ ರೈ ವಿಜೃಂಭಣೆ!

ಜಮಾನಾದಲ್ಲಿ ಪುತ್ತೂರು ಮಹಾಲಿಂಗೇಶ್ವರ ದೇವಳದ ಆಡಂಬೋಲವಾಗಿರುವ ದೇವರ ಮಾರುಗದ್ದೆಯಲ್ಲಿ ಕಂಬಳಕೂಟವು ಒಂದು ಸಂಪ್ರದಾಯ ಎಂಬಂತೆ ಅನೂಚಾನವಾಗಿ ನಡೆದುಕೊಂಡು ಬಂದಿತ್ತು. ಭೂಮಸೂದೆ ಪ್ರಕ್ರಿಯೆಗಳ ನಡುವೆ ನಿಂತುಹೋಗಿದ್ದ ಈ ಕಂಬಳಕೂಟಕ್ಕೆ ಮತ್ತೆ ಚಾಲನೆ ಕೊಟ್ಟವರು ಇದೇ ಮುತ್ತಪ್ಪ ರೈಯ ಬಲಗೈ ಬಂಟ ಕಜೆಮಾರ್ ಜಯಂತ್ ರೈ ಮತ್ತು ವಿನಯಕುಮಾರ್ ಸೊರಕೆ.

ಪುತ್ತೂರಿನಲ್ಲಿ ಏನೇ ಮಾಡಿದರೂ ಅದಕ್ಕೆ ರಾಜಕೀಯ ಖದರು ಮೂಡುವುದರಿಂದ ಕಾಂಗ್ರೆಸ್ಸಿಗರೇ ಕೂಡಿ ಸಂಘಟಿಸಿದ ಕೋಟಿಚೆನ್ನಯ ಕಂಬಳಕ್ಕೆ ಕಾಂಗ್ರೆಸ್ ಕಂಬಳ ಎನ್ನುವ ಅನ್ವರ್ಥನಾಮ ಆರಂಭದಲ್ಲಿಯೇ ಅಂಟಿ ಕೊಂಡಿತ್ತು. ಮುಂದೆ ಜಯಂತ್ ರೈ ಹತ್ಯೆಯಾದಾಗ ಆತನ ಸ್ಥಾನಕ್ಕೆ ರೈಯ ಇನ್ನೋರ್ವ ಶಿಷ್ಯ ಪ್ರವೀಣ್ ನಾಯಕ್ ಅಧ್ಯಕ್ಷನಾದ. ಅಂತೂ ಪುತ್ತೂರಿನ ಕಂಬಳದ ಹಿನ್ನೆಲೆಯಲ್ಲಿ ಮುತ್ತಪ್ಪ ರೈಯ ರಿಮೋಟ್ ಕಂಟ್ರೋಲ್ ಇದ್ದೇ ಇತ್ತು.

ವಸೂಲಿಗಿರಿಯ ರೋಲ್‌ಕಾಲ್ ವೈಖರಿ ಮುಚ್ಚಿಡುವ ಲೆಕ್ಕಪತ್ರದ ಗುಮಾನಿಗಳ ನಡುವೆ ಕಂಬಳವಂತೂ ಅತ್ಯಂತ ಯಶಸ್ವಿಯಾಗಿ ವಿಜೃಂಭಣೆಯಿಂದ ವರ್ಷಂಪ್ರತಿ ನಡೆಯುತ್ತಲೇ ಇತ್ತು. ಅದೇ ಹೊತ್ತಿಗೆ ಮುತ್ತಪ್ಪ ರೈಯ ಸಾಂಪ್ರದಾಯಿಕ ಶತ್ರುವೆಂದು ಬಿಂಬಿತವಾಗಿರುವ ರಮಾನಾಥ್ ರೈ ಮೂಡೂರು-ಪುತ್ತೂರು ಕಂಬಳ ಮಾಡಿ, ಕಂಬಳಕ್ಕಿಂತ ಮಿಕ್ಕೆಲ್ಲವನ್ನೂ ಜೋರಾಗಿ ಮಾಡಿ, ಸುದ್ದಿ ಮಾಡುತ್ತಿದ್ದರು. ಹೀಗಿರುವಾಗ ದುಬೈನಿಂದ ಬೆಂಗಳೂರಿಗೆ ಬಂದು ಹಳೆಯ ಕೇಸುಗಳನ್ನೆಲ್ಲಾ ಚುಕ್ತಾ ಮಾಡಿ ಕುಳಿತ ಮುತ್ತಪ್ಪ ರೈಗೂ ತನ್ನ ಕಂಟ್ರೋಲ್‌ನಲ್ಲಿಯೇ ನಡೆಯುವ ಪುತ್ತೂರು ಕಂಬಳವನ್ನು 'ನಂಬರ್ ಒನ್' ಮಾಡಿ ಮಿಂಚುವ ಆಸೆ ಮೂಡಿತು. "13 ನೇ ವರ್ಷದ ಕಂಬಳಕ್ಕೆ ನನ್ನದೇ ಸಾರಥ್ಯ. ಖರ್ಚು ಎಷ್ಟಾದರೂ ಪರವಾಗಿಲ್ಲ" ಎಂದು ರೈ ಅಂದದ್ದೇ ಕಂಬಳದ ಖದರ್ರೇ ಬದಲಾಯಿತು. ಒಂದೆರಡು ಲಕ್ಷದಲ್ಲಿ ನಡೆಯುವ ಕಂಬಳಕ್ಕೆ ಆ ವರ್ಷ 15 ಲಕ್ಷಕ್ಕೂ ಹೆಚ್ಚು ಖರ್ಚಾಗಿ, ಯಾರ್‍ಯಾರೋ ಮಿಂಚಿದ್ದು ರೈಯ ಗಮನಕ್ಕೆ ಬಂತು. ಅದೇ ಗುಮಾನಿಯಲ್ಲಿ ಪ್ರವೀಣ್ ನಾಯಕ್‌ನನ್ನು ಅಧ್ಯಕ್ಷ ಸ್ಥಾನದಿಂದ ಕಿತ್ತ ರೈ 14 ನೇ ವರ್ಷದ ಕಂಬಳದ ಜವಾಬ್ದಾರಿಯನ್ನು ತನ್ನ ಇನ್ನೋರ್ವ ಶಿಷ್ಯ ಸತೀಶ್ ನಾಯಕ್‌ಗೆ ಕೊಟ್ಟಿದ್ದ. ಈ ಬಾರಿ ರೈ ಪತ್ನಿ ರೇಖಾ ಕಂಬಳದ ವೇದಿಕೆಯಲ್ಲಿ ಕಾಣಿಸಿಕೊಂಡರು.

ಇದೀಗ ನಡೆಯುತ್ತಿರುವ 15 ನೇ ವರ್ಷದ ಕಂಬಳಕ್ಕೂ ಮುತ್ತಪ್ಪ ರೈ ಸಾರಥ್ಯ. ಆದರೆ ಇದರ ವಿಶೇಷ ಯಾವುದೆಂದರೆ ಈ ಬಾರಿಯ ಕಂಬಳದಲ್ಲಿ ಮುತ್ತಪ್ಪ ರೈಯೇ ವೇದಿಕೆಯಲ್ಲಿ ಕಾಣಿಸಿಕೊಳ್ಳುವುದು. ಅರ್ಥಾತ್ ಹದಿನೈದು ವರ್ಷಗಳ ಬಳಿಕ ಪ್ರಪ್ರಥಮ ಬಾರಿ ಪುತ್ತೂರಿನಲ್ಲಿ ಮುತ್ತಪ್ಪ ರೈ ಸಾರ್ವಜನಿಕವಾಗಿ ಕಾಣಿಸಿಕೊಳ್ಳುವುದು! ಡಿಸೆಂಬರ್‌ನಲ್ಲಿ ನಡೆದ ಹಿಂದೂ ಸಮಾಜೋತ್ಸವ, ಆನಂತರ ನಡೆದ ಶ್ರೀರಾಮ ಸೇನೆಯ ಶನಿಪೂಜೆಯಿಂದ ಕೇಸರಿಮಯವಾಗಿ ಕಂಗೊಳಿಸಿದ ಪುತ್ತೂರಿನಲ್ಲಿ ಇದೀಗ ಮುತ್ತಪ್ಪ ರೈ ಮೇನಿಯಾ. ಪೇಟೆಗಳಲ್ಲಿ ಹೆಜ್ಜೆಹೆಜ್ಜೆಗೂ ರೈಯ ಮತ್ತಾತನ ಪತ್ನಿಯ ಕಟೌಟ್‌ಗಳು, ಬ್ಯಾನರ್‌ಗಳು ತಾಲ್ಲೂಕಿನಾದ್ಯಂತ ರಾರಾಜಿಸುತ್ತಿವೆ. ಇದೆಲ್ಲ ತಲೆಗಿಂತ ಮುಂಡಾನೆ ಭಾರ ಎನ್ನುವಂತಾಗಿದ್ದು ರೈ ಮೇಲೋ ಕಂಬಳ ಮೇಲೋ ಎನ್ನುವ ಜಿಜ್ಞಾಸೆ ಸಾರ್ವಜನಿಕ ವಲಯದಲ್ಲಿ ಹುಟ್ಟಿ ಕೊಂಡಿದೆ. ಪುತ್ತೂರು ಶ್ರೀ ಮಹಾಲಿಂಗೇಶ್ವರನ ಎದುರು ಇದು ಸ್ವಲ್ಪ ಅತಿಯಾಯಿತು ಎಂದು ಆಸ್ತಿಕರು ಆಡಿಕೊಳ್ಳ ತೊಡಗಿದ್ದಾರೆ.

ಈಗ ಸಾರ್ವಜನಿಕ ಸೇವೆ, ಸಿನಿಮಾ, ಪತ್ರಿಕೆ ಎಂದೆಲ್ಲಾ ಸುದ್ದಿ ಮಾಡುತ್ತಿರುವ ರೈಗೆ ಸಾರ್ವಜನಿಕವಾಗಿ ಕಾಣಿಸಿಕೊಳ್ಳುವ ಗೀಳಂತೂ ಹುಟ್ಟಿದೆ. ಕೆಲ ದಿನಗಳ ಹಿಂದೆ ಸಕಲೇಶಪುರದಲ್ಲಿ ನಡೆದ ಬಸವ ಸಾಹಿತ್ಯ ಸಮ್ಮೇಳನಕ್ಕೆ ಮುತ್ತಪ್ಪ ರೈ ಊಟದ ವ್ಯವಸ್ಥೆ ಕೂಡಾ ಮಾಡಿದ್ದ. ಇದು ತಿಳಿದು ಮುಜುಗರ ಪಟ್ಟ ಸಾಹಿತಿಗಳು ಊಟ ಮಾಡದೇ ತೆರಳಿದ್ದರು. ಇದೀಗ ಕಂಬಳದ ನೆಪದಲ್ಲಿ ಉತ್ಸವಮೂರ್ತಿಯಾಗುತ್ತಿರುವ ಮುತ್ತಪ್ಪ ರೈ ಸುಖಾಸುಮ್ಮನೆ ಲಕ್ಷಗಟ್ಟಲೆ ಹಣ ನೀರಿನಂತೆ ಖರ್ಚು ಮಾಡುತ್ತಿದ್ದಾನೆಂದರೆ ನಂಬುವವರಿಗೆ ಬಿಟ್ಟ ವಿಚಾರ.

15 ವರ್ಷಗಳ ಹಿಂದೆ-ಅಂದರೆ ರೈ ದುಬೈಗೆ ಹಾರುವ- ಮುನ್ನ ತನ್ನ ಸ್ವಂತ ಊರಾದ ಕೆಯ್ಯೂರಿನಲ್ಲಿ "ಸಮುದ್ರ ಮಥನ" ಎನ್ನುವ ಯಕ್ಷಗಾನ ಬಯಲಾಟವನ್ನು ಇದೇ ಶೈಲಿಯಲ್ಲಿ ಆಡಿಸಿದ್ದ. ಶ್ರೀದುರ್ಗಾಪರಮೇಶ್ವರಿ ದೇವಿಯ ಜಾತ್ರೆಯ ದಿನ ವೈಭವದಿಂದ ನಡೆದ ಯಕ್ಷಗಾನ ಬಯಲಾಟದ ಅಬ್ಬರಕ್ಕೆ ಜಾತ್ರೆಯೇ ಕಳೆಗುಂದಿತ್ತು. ಬಯಲಾಟದ ಕೊನೆಯಲ್ಲಿ ಸಿಡಿಸಿದ ಪಟಾಕಿ. ದಲಿತ ಮಹಿಳೆಯೋರ್ವಳ ಹೊಟ್ಟೆಯನ್ನೇ ಸೀಳಿ ಕರುಳು ಹೊರಬಿದ್ದಿತ್ತು. ಆಕೆಯ ವೈದ್ಯಕೀಯ ಖರ್ಚು ಪೂರ್ತಿ ನೀಡಿ, ಮನೆ ಖರ್ಚಿಗೂ ಹಣ ನೀಡಿದ ಮುತ್ತಪ್ಪ ರೈ ಅಂದು ಸಾರ್ವಜನಿಕ ಪ್ರಶಂಸೆಗೆ ಈಡಾಗಿದ್ದ. ಇದೀಗ ರೈ ಮತ್ತೆ ಸಾರ್ವಜನಿಕವಾಗಿ ಕಾಣಿಸಿಕೊಳ್ಳುತ್ತಿದ್ದಾರೆ ಎಂದು ಹಳೆಯದನ್ನು ಮೆಲುಕು ಹಾಕುತ್ತಾರೆ ಹಿರಿಯರು.


ಹೀಗೆ ತನಗೊಂದು ಹೊಸ ಗೆಟಪ್ ಪಡೆದುಕೊಳ್ಳಲು ಕೋಣಗಳ ಕಂಬಳದ ಗದ್ದೆಗೂ ರೈ ಇಳಿಯುತ್ತಿದ್ದಾನೆಂದರೆ ಅದು ವಿನಾಃಕಾರಣ ಮಾಡುತ್ತಿರುವುದಿಲ್ಲ ಅನ್ನಿಸುತ್ತಿದೆ. ಇಷ್ಟರ ನಡುವೆ ಕೇಳಿಬರುವವರಿಗೆಲ್ಲಾ ದುಡ್ಡೆತ್ತಿ ಕೊಡುವ ದಡ್ಡನೇನಲ್ಲ ರೈ. ಧನರಾಜ್ ಎಂಬ ನಿರ್ಮಾಪಕನೊಬ್ಬ 'ರೈ' ಹೆಸರಿನ ಸಿನಿಮಾ ಮಾಡುತ್ತೇನೆಂದು ಹೇಳಿಕೊಂಡು ಕೆಲದಿನ ಓಡಾಡುತ್ತಿದ್ದ. ಕೊನೆಗೆ ಧನರಾಜ್ ರೈ ಹತ್ತಿರಾನೇ ಕಾಸು ಕೇಳಲು ಹೋಗಿ ಬೈಯ್ಸಿಕೊಂಡು ಬಂದಿದ್ದ.

ಹೀಗೆ ರೈ ತನಗೆ ಉಪಯೋಗವಾಗದ ಏನನ್ನು ಉತ್ತೇಜಿಸುವುದಿಲ್ಲ. ಅದೇ ರೀತಿ ತನ್ನ ಇಮೇಜ್ ಬೆಳೆಸುವ ಯಾವ ಅವಕಾಶ ಸಿಕ್ಕರೂ ಬಿಡುವುದಿಲ್ಲ. ಇಷ್ಟು ಲೆಕ್ಕಾಚಾರಗಳು ಕೈಗೆ ಖಚಿತವಾಗಿ ಗೊತ್ತಿವೆಯೆಂದರೆ ಇವೆಲ್ಲಾ ಸಣ್ಣಪುಟ್ಟ ಕಾರಣಗಳಿಗಾಗಿ ಆಗುತ್ತಿಲ್ಲ ಎಂದುಕೊಳ್ಳಲೇಬೇಕು ತಾನೆ?

-ವರದಿಗಾರ

ಈಶ್ವರಪ್ಪರ ಬುಡಕ್ಕೆ ಆಯನೂರು ಬಾಂಬ್!

ಶಿವಮೊಗ್ಗದ ಚೆಡ್ಡಿ 'ಪುಂಡ' ಆಯನೂರು ಮತ್ತೆ ಬಜೆಪಿ ಸೇರುತ್ತಿದ್ದಾರೆ. ಸೇರುತ್ತಿದ್ದಾರೆ ಎನ್ನುವುದಕ್ಕಿಂತ ಉಪಮುಖ್ಯಮಂತ್ರಿ ಶ್ರೀಮಾನ್ ಯಡಿಯೂರಪ್ಪನವರು ಈತನನ್ನು ಕರೆತರುತ್ತಿದ್ದಾರೆ ಎನ್ನುವುದು ಸರಿ. ಆಯನೂರು ಮಂಜುವನ್ನು ಪಕ್ಷಕ್ಕೆ ಸೇರಿಸಿಕೊಳ್ಳುವುದರ ಮೂಲಕ ಯಡಿಯೂರಪ್ಪ ತಮ್ಮ ಜಿಲ್ಲೆಯ, ತಮ್ಮ ಪಕ್ಷದ, ತಮ್ಮ 'ಗೆಳೆಯ' ಹರಕುಬಾಯಿಯ ಈಶ್ವರಪ್ಪಗೆ ಬಲವಾದ ಏಟು ನೀಡ ಹೊರಟದ್ದಾರೆ! ಈ ಸುದ್ದಿ ಕೇಳಿ ಈಶ್ವರಪ್ಪ ಬಿಟ್ಟಬಾಯನ್ನು ಇನ್ನೂ ಮುಚ್ಚಿಲ್ಲವಂತೆ!



ಆತನನ್ನು ಪಕ್ಷಕ್ಕೆ ಮತ್ತೆ ಸೇರಿಸಿಕೊಂಡರೆ ರಾಜೀನಾಮೆ ಕೊಡುತ್ತೇನೆ ಎಂದು ಬೆಂಗಳೂರಿನಲ್ಲಿ ನಡೆದ ಬಜೆಪಿ ಸಭೆಯಲ್ಲಿ ಕೂಗಾಡಿರುವ ಈಶ್ವರಪ್ಪ ಶಿವಮೊಗ್ಗ ನಗರ ಬಜೆಪಿ ಇವರ ಸೇರ್ಪಡೆಯನ್ನು ವಿರೋಧಿಸಿ ತೀರ್ಮಾನ ತೆಗೆದುಕೊಳ್ಳುವಂತೆ ಮಾಡಿದ್ದಾರೆ. ಶನಿವಾರ ನಡೆದ ಜಿಲ್ಲಾ ಬಜೆಪಿ ಸಭೆಯಲ್ಲಿ ಕೂಡ ಆಯನೂರು ಸೇರ್ಪಡೆಗೆ ತೀವ್ರ ವಿರೋಧ ವ್ಯಕ್ತವಾಗಿದೆ. ಕೊನೆಗೆ ಈ ಬಗ್ಗೆ ನಿರ್ಧರಿಸುವ ಅಧಿಕಾರವನ್ನು ಜಿಲ್ಲೆಯ ತ್ರಿಮೂರ್ತಿಗಳಿಗೆ ಬಿಡಲಾಗಿದೆ.

ಕಳೆದ ಮೂರು ವರ್ಷದಲ್ಲಿ ಆಯನೂರು ಮೂರು ಪಕ್ಷ ಬದಲಾಯಿಸಿದ್ದಾರೆ. ಎರಡು ಲೋಕಸಭಾ ಚುನಾವಣೆಯಲ್ಲಿ ಸೋತಿದ್ದಾರೆ. ಆದರೆ ಸಾಲವೆಲ್ಲಾ ತೀರಿಸಿ, ಒಂದಿಷ್ಟು ದುಡ್ಡುಮಾಡಿಕೊಂಡು ಜೀವನದಲ್ಲಿ ಗೆದ್ದಿದ್ದಾರೆ!


ಸಾಲಮಾಡಿಕೊಂಡು, ಇತ್ತ ಬಜೆಪಿಯಲ್ಲಿಯೂ ಲಾಭವಿಲ್ಲದೆ ನಾಶವಾಗುವ ಹಂತದಲ್ಲಿ ಆಯನೂರು, ಉದ್ಯಮಿ ವಿಜಯ ಮಲ್ಯ ನೇತೃತ್ವದ ಜನತಾಪಕ್ಷ ಸೇರಿ, ಪಕ್ಷದ ಕಾರ್ಯಾಧ್ಯಕ್ಷರಾಗಿ ರಾಜ್ಯದ ಗಮನ ಸೆಳೆದಿದ್ದರು. ಮಲ್ಯ ಕಾರ್ಪೊರೇಟ್ ಶೈಲಿಯಲ್ಲಿ ಪಕ್ಷ ನಡೆಸುತ್ತಿದ್ದರಿಂದ ಅಲ್ಲಿ ಹೆಚ್ಚೇನೂ ಗಿಟ್ಟುತ್ತಿರಲಿಲ್ಲ. ಯಾವಾಗ ಬಂಗಾರಪ್ಪ ಕಾಂಗ್ರೆಸ್ ಬಿಟ್ಟು ಬಿಜೆಪಿ ಸೇರಿದರೋ, ಖಾಲಿಜಾಗ ಭರ್ತಿಮಾಡುವಂತೆ ಚಕ್ಕನೆ ಕಾಂಗ್ರೆಸ್‌ಗೆ ಜಿಗಿದರು.

ಕಾಂಗ್ರೆಸ್ ಅಭ್ಯರ್ಥಿಯಾಗಿ ಬಂಗಾರಪ್ಪರನ್ನು ಎದುರಿಸಿದರೂ, ಗೆಲ್ಲುವುದಕ್ಕಿಂತ ತಮ್ಮ ಸಾಲ ತೀರಿಸುವುದೇ ಮುಖ್ಯವೆಂಬಂತೆ ನಡೆದುಕೊಂಡರು. ಮತ್ತೆ ಬಂಗಾರಪ್ಪ ಬಿಜೆಪಿ ತೊರೆದು ಸಮಾಜವಾದಿ ಪಕ್ಷ ಸೇರಿದ್ದರಿಂದಾಗಿ ನಡೆದ ಉಪಚುನಾವಣೆಯಲ್ಲಿ ಮತ್ತೆ ಆಯನೂರು ಕಾಂಗ್ರೆಸ್ ಅಭ್ಯರ್ಥಿಯಾದರು. ಹಿಂದಿನ ಚುನಾವಣೆಯಲ್ಲಿನ ಅವರ ವರ್ತನೆ ಬಗ್ಗೆ ಅನುಮಾನಗಳಿದ್ದುದರಿಂದ ಟಿಕೆಟ್ ನೀಡಲು ಪಕ್ಷ ಹಿಂದೆ-ಮುಂದೆ ನೋಡಿದಾಗ ದಿಲ್ಲಿಗೆ ಹೋಗಿ ಕುಳಿತು ಯಾರದ್ದೋ ಕಾಲು ಹಿಡಿದು ಟಿಕೆಟ್ ಪಡೆದುಕೊಂಡು ಬಂದಿದ್ದರು. ಈ ಪಕ್ಷದಿಂದ ಇದೇ ತಮ್ಮ ಕೊನೆಯ ಚುನಾವಣೆ ಎಂದು ಲೆಕ್ಕಹಾಕಿದ್ದ ಆಯನೂರು ಬಂದ ದುಡ್ಡನ್ನೆಲ್ಲಾ ಸೇರಿಸಿಟ್ಟು, ಬಂಗಾರಪ್ಪಗೆ ತಾವು ಪ್ರಬಲ ಪೈಪೋಟಿ ನೀಡುತ್ತಿರುವಂತೆ ತೋರಿಸಿಕೊಂಡಿದ್ದರು.

ಕಾಂಗ್ರೆಸ್‌ನ ಸಂಪ್ರದಾಯ ಓಟುಗಳು ಅವರಿಗೆ ಬಿದ್ದುದ್ದರಿಂದ ಅವರ ಈ ನಾಟಕ ಬಹಿರಂಗವಾಗಿರಲೇ ಇಲ್ಲ. ಈಗ ಕಾಂಗ್ರೆಸ್ ನಿಷ್ಕ್ರಿಯವಾಗಿದೆ ಎಂಬ ಕಾರಣ ನೀಡಿ ಪಕ್ಷ ತೊರೆದಿದ್ದಾರೆ. ಜೊತೆಗೆ ಪಕ್ಷದ ದುಡ್ಡೂ ಹೊತ್ತಿದ್ದಾರೆ.

ಯಡ್ಡಿ ಸುಮ್ಮನಿದ್ದಿದ್ದರೆ, ಆಯನೂರು ಕಾಂಗ್ರೆಸ್‌ನಲ್ಲಿಯೇ ಕಾಲಹರಣ ಮಾಡುತ್ತಾ ಇರುತ್ತಿದ್ದರೇನೋ? ಆದರೆ ತಮ್ಮ ಬಗಲಲ್ಲೇ ಇದ್ದು ದುಷ್ಮನ್‌ನಂತಿರುವ ಈಶ್ವರಪ್ಪಗೆ ಬುದ್ದಿ ಕಲಿಸಲು ಆಯನೂರೇ ಸರಿ ಎಂದು ಯಡಿಯೂರಪ್ಪ ಲೆಕ್ಕಹಾಕಿ ಅವರನ್ನು ಬರಮಾಡಿಕೊಂಡಿದ್ದಾರೆ.

ತಮ್ಮ ಜೊತೆಯಲ್ಲಿದ್ದರೂ ಒಳಗೊಳಗೇ ಅನಂತು ಜತೆ ಕೈಜೋಡಿಸುತ್ತಿದ್ದ ಈಶ್ವರಪ್ಪರ ಮೇಲೆ ಯಡ್ಡಿಗೆ ಒಂದು ಕಣ್ಣಿತ್ತು. ಅಲ್ಲದೆ ಕೆಲ ವ್ಯವಹಾರದಲ್ಲಿ ಭಿನ್ನಾಭಿಪ್ರಾಯ ಕೂಡ ಮೂಡಿತ್ತು. ಶೋಭಾಗೆ ಸಚಿವಸ್ಥಾನ ಕೊಡಲು ಹೊರಟಾಗ, 'ನಾನು ರಾಜೀನಾಮೆ ನೀಡುತ್ತೇನೆ' ಎಂದು ಈಶ್ವರಪ್ಪ ಪಕ್ಷದ ನಿಷ್ಠಾವಂತ ನಾಯಕನಂತೆ ಕೂಗಾಡಿದ್ದರಿಂದ ಯಡ್ಡಿ ತಿರುಗಿಬಿದ್ದರು. 'ಸಚಿವ ಸಂಪುಟ ವಿಸ್ತರಿಸುವಾಗ ಈತನನ್ನು ಕೈಬಿಡುತ್ತೇನೆ. ಇದಕ್ಕೆ ಪಕ್ಷ ಒಪ್ಪದಿದ್ದಲ್ಲಿ ಸಮೃದ್ಧ ಜಲಸಂಪನ್ಮೂಲ ಖಾತೆ ಬದಲಾಯಿಸುತ್ತೇನೆ' ಎಂದು ರೇಗಿದರು. ಇದು ಗೊತ್ತಾಗಿದ್ದೇ ತಡ ಈಶ್ವರಪ್ಪ ಪ್ಲೇಟ್ ಚೇಂಜ್ ಮಾಡಿ, 'ನಾನು ವಿರೋಧಿಸಿಯೇ ಇಲ್ಲ, ಇದೆಲ್ಲಾ ಸುಳ್ಳು, ಶೋಭಕ್ಕನಿಗೆ ನಾನು ಹೇಗೆ ಮುಖ ತೋರಿಸಲಿ' ಎಂದು ಸಿಟ್ಟುಮಾಡಿಕೊಂಡಿದ್ದ ಯಡ್ಡಿಗೆ ಹರಳೆಣ್ಣೆ ಮುಖಮಾಡಿಕೊಂಡು ಬೆಣ್ಣೆ ಹಚ್ಚಿ ಬಚಾವಾಗಿದ್ದರು.




ಆದರೆ ಈಶ್ವರಪ್ಪ-ಯಡ್ಡಿ ಸಂಬಂಧ ದಿನದಿಂದ ದಿನಕ್ಕೆ ಹಳಸುತ್ತಲೇ ಇದೆ. ಶಿವಮೊಗ್ಗ ನಗರದಲ್ಲಿ ಈಶ್ವರಪ್ಪನನ್ನು ಬಿಟ್ಟು ಯಡ್ಡಿ ಓಡಾಡುತ್ತಾ, ಅಭಿವೃದ್ಧಿ ಕೆಲಸ ಮಾಡಿಸುತ್ತಾ ಈಶ್ವರಪ್ಪಗೆ ಚಳಿಜ್ವರ ಬರಿಸಿದ್ದಾರೆ. ಈಗ ಆಯನೂರನ್ನು ಕರೆತಂದು ಇನ್ನೆಂದೂ ಬಾಲಬಿಚ್ಚದಂತೆ ನೋಡಿಕೊಂಡಿದ್ದಾರೆ.

ಕ್ಷೇತ್ರ ಪುನರ್‌ವಿಂಗಡಣೆಯಾದಲ್ಲಿ ಶಿಕಾರಿಪುರ ಮೀಸಲು ಕ್ಷೇತ್ರವಾಗಲಿದೆ. ಆಗ ಯಡ್ಡಿ ಗುಳೇ ಏಳಬೇಕಾದದು ಅನಿವಾರ್ಯ. ಶಿವಮೊಗ್ಗ ಅಥವಾ ಶಿವಮೊಗ್ಗ ಗ್ರಾಮಾಂತರ ಕ್ಷೇತ್ರದಲ್ಲಿ ಒಂದನ್ನು ಅವರು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಈಶ್ವರಪ್ಪರನ್ನು ಗ್ರಾಮಾಂತರಕ್ಕೆ ತಳ್ಳಿ, ಯಡ್ಡಿ ಶಿವಮೊಗ್ಗದಿಂದಲೇ ಸ್ಪರ್ಧಿಸಬಹುದು. ಯಾವುದಕ್ಕೂ, ಆಯನೂರಿನಂತಹ ಪುಂಡರು ಬೇಕಾಗುತ್ತದೆ ಎಂದು ಯಡ್ಡಿ ಯೋಚಿಸಿರಬೇಕು.

ಪಾಪ ಈಶ್ವರಪ್ಪ !

ಕಾಂಗ್ರೆಸ್ ಅಧಿಕಾರದಲ್ಲಿದ್ದಷ್ಟೂ ದಿನ ರ್ಮಸಿಂಗ್‌ರನ್ನು ಹಿಂದಿ ಹಿಪ್ಪೆಮಾಡಿದ್ದ ದೊಡ್ಡಗೌಡರ ವಕ್ರದೃಷ್ಟಿ ಈಗ ಯಡಿಯೂರಪ್ಪನ ಮೇಲೆ ಬಿದ್ದಿದೆ. ಮೊದಲೆಲ್ಲಾ "ಗೌಡರ ಮಾತಿಗೆ ಬೆಲೆ' ಇಲ್ಲ, ನಾನು ಸಂಸಾರ ಹೂಡಿರುವುದು ಮಾರನ ಜೊತೆಗೆ" ಎಂದು 'ಧೈರ್ಯ'ವಾಗಿ ಹೇಳಿಕೆ ನೀಡಿ ಒಂದಿಷ್ಟು ಸಿಟ್ಟುಮಾಡಿಕೊಳ್ಳುತ್ತಿದ್ದ ಯಡ್ಡಿಯನ್ನು ಈಗ ರಾತ್ರಿ ಕನಸಿನಲ್ಲಿಯೂ ಗೌಡರು ಡುತ್ತಿದ್ದಾರೆ!

ಕಾವೇರಿ ಕಣಿವೆ ಹೊತ್ತಿ ಉರಿಯುತ್ತಿರುವಾಗ ಂಗ್ರೆಸ್ ಅಧಿದೇವತೆ ಸೋನಿಯಾಗಾಂಧಿ ಮನೆಗೆ ಾದಯಾತ್ರೆ' ಕೈಗೊಂಡ ಮಣ್ಣಿನ ಮಗ, ಹೊಸ ಜಕೀಯದಾಟಕ್ಕೆ ದಾಳಹಾಕಿ ಬಂದಿದ್ದಾರೆ. ೋಡಿಗೆ ಬಿದ್ದ ರಾಧಿಕಾಳ ಬಗ್ಗೆ ಲೆಕೆಡಿಸಿಕೊಳ್ಳುತ್ತಿರುವ ಜ್ಯದ ಮುಖ್ಯಮಂತ್ರಿ ಮಾರಸ್ವಾಮಿಗೆ ಇದೇನೂ ಶ್ಚರ್ಯದ ವಿಷಯವಲ್ಲ. ದರೆ ಅವರ ಜೊತೆ ಸಾರ ಹೂಡಿ ಳ್ಳೆಹೊಡೆಯುತ್ತಿರುವ ಜೆಪಿಯವರಿಗೆ ಮಾತ್ರ ಮ್ಮ ಊಟ ದುಕೊಳ್ಳಲು ಬಂದ ಕಾಸುರನ ರೀತಿಯಲ್ಲಿ ೇವೇಗೌಡರು ಣಿಸಲಾರಂಭಿಸಿದ್ದಾರೆ.



ದೇವೇಗೌಡರ ರಾಜಕೀಯದಾಟದಿಂದ ಬಿಜೆಪಿ ಆತಂಕಗೊಂಡಿದೆ ಎಂದು ಮೇಲ್ನೋಟಕ್ಕೆನಿಸಿದರೂ, ಯಡ್ಡಿ ಮತ್ತು ಸದಾನಂದ ಗೌಡ ಈ ಬಗ್ಗೆ ಹೆಚ್ಚೇನೂ ತಲೆಕೆಡಿಸಿಕೊಂಡಿಲ್ಲ, ಅನಂತು ಮುಖಕ್ಕೆ ಮಂಗಳಾರತಿ ಮಾಡಿಯಾಗಿದೆ, ಮತ್ತೆ ಆತ ತಲೆ ಎತ್ತದಂತೆ ನೋಡಿಕೊಂಡರೆ ಸಾಕು, ಈ ಬಿಕ್ಕಟ್ಟೆಲ್ಲವನ್ನು ಹೇಗೋ ಬಗೆಹರಿಸಿಕೊಳ್ಳಬಹುದು ಎಂಬುದು ಈ ಅಪರೂಪದ ಜೋಡಿಯ ಯೋಚನೆ.

ಒಂದು ವೇಳೆ ಚುನಾವಣೆ ಎದುರಾಗುವ ಸಂದರ್ಭವೇ ಬಂದಲ್ಲಿ, ಚುನಾವಣೆ ಬೇಡ ಎಂಬ ಕಾರಣ ನೀಡಿ, ಈಗಿರುವ ಹೊಂದಾಣಿಕೆ ವ್ಯವಸ್ಥೆಯನ್ನೇ ಮುಂದುವರೆಸಲು ಯಡ್ಡಿ ನಿರ್ಧರಿಸಿದ್ದಾರೆ. ಕುಮಾರ ಮುಖ್ಯಮಂತ್ರಿಯಾಗಿ ಮುಂದುವರೆಯುವುದು, ತಾವು ಉಪಮುಖ್ಯಮಂತ್ರಿಯಾಗಿ ಅಧಿಕಾರ ಅನುಭವಿಸುತ್ತಾ 'ಪಾಲಿಗೆ ಬಂದಿದ್ದೇ ಪಂಚಾಮೃತ' ಎಂದುಕೊಳ್ಳುವುದು ಎಂಬ ಯೋಚನೆ ಯಡ್ಡಿಯ ತಲೆಯಲ್ಲಿದೆಯಂತೆ. 'ಕುಮಾರ ಮುಖ್ಯಮಂತ್ರಿಯಾಗಿ ಮುಂದುವರೆಯಲಿ ಎಂದರೆ ಈ ಗೌಡರೇಕೆ ಅಡ್ಡಿಯಾದಾರು' ಎಂದು ತಮ್ಮ ಆಪ್ತರಲ್ಲಿ ಪ್ರಶ್ನಿಸಲಾರಂಭಿಸಿದ್ದಾರೆ.

ಇದಕ್ಕೆ ಅನಂತು


ಯಡ್ಡಿ ಬೇಡವೆಂದರೇ ಮುಖ್ಯಮಂತ್ರಿ ಪಟ್ಟ?

"ಅವರು ಅಧಿಕಾರ ಡದೇ ಹೋದರೆ ೋಗಲಿ, ನಾವು ಜನರ ತ್ರಾ ಹೋಗೋಣ" ದು ಕುಂಡೆಸುಟ್ಟ ಯಿಯಂತೆ ಕುಯ್, ಯ್ ಎನ್ನುತ್ತಿರುವ ಜೆಪಿ ನಾಯಕರು, ನ್ನೆಷ್ಟು ದಿನ ಅಧಿಕಾರ ಲ್ಲಿ ಇರುತ್ತೇವೆ, ಇನ್ನೆಷ್ಟು ಸುಮಾಡಬಹುದು ಬ ಲೆಕ್ಕಾಚಾರದಲ್ಲಿ ಡಗಿದ್ದಾರೆ.

ಭಾವಿ ಮುಖ್ಯಮಂತ್ರಿ ಹಾಲಿ ಪಮುಖ್ಯಮಂತ್ರಿ ಡಿಯೂರಪ್ಪಗೆ ತ್ತಾಗಿರುವ ಸತ್ಯವೆಂದರೆ, ವು ಯಾವ ದೇವಸ್ಥಾನದಲ್ಲಿ ವಿಶೇಷ ಪೂಜೆ ಡಿಸಿದರೂ, ಅಮಾವಾಸ್ಯೆ ದಿನ ಯಾವ ವ್ರತ ಕೊಂಡರೂ ಗೌಡರ 'ವ್ರತ'ದ ಮುಂದೆ ಏನೂ ಯದು ಎಂಬುದು. ಅದಕ್ಕೇ ಈಗ ಆಸೆ ಬಿಟ್ಟ ರಗಿಯಂತೆ ಮಾತನಾಡಲಾರಂಭಿಸಿದ್ದಾರೆ.

ಕಳೆದ ಶುಕ್ರವಾರ ಸಚಿವರ, ಶಾಸಕ, ಬಿಂದರ ಹಾಗೂ ನಿಗಮ ಮಂಡಳಿಗಳ ಕ್ಷರ ಸಭೆ ನಡೆಸಿರುವ ಯಡ್ಡಿ ಮತ್ತು ನಂದ ಗೌಡ 'ಕಾರ್ಯಾಚರಣೆ' ುಕುಗೊಳಿಸಲು ಸೂಚಿಸಿದ್ದಾರೆ. "ಗೌಡರು ಕಾರ ಕೊಡದಿದ್ದರೆ, ನೇರವಾಗಿ ಜನರ ಬಳಿಗೆ ೇಗೋಣ. ಅದಕ್ಕೆ ಈಗಿನಿಂದಲೇ ಪಕ್ಷದ ಟನೆಗೆ ಮುಂದಾಗಿ" ಎಂದು ಹೇಳಿದ್ದಾರೆ.

ಒಂದು ದಿನವಿಡೀ ನಡೆದ ಈ ಮೂರು ಗಳೂ 'ಸಂತಾಪ' ಸಭೆಗಳಂತೆ ನಡೆದಿರುವುದನ್ನು ಅನಂತು ಬಣ ಒಳಗೊಳಗೇ ಖುಷಿಗೊಂಡು ಕುಂದಿಯುತಂತೆ. ಇದು ಗೊತ್ತಾಗಿದ್ದೇ ತಡ ್ಮಿ ಇನ್ನಷ್ಟು ಸಿಟ್ಟುಮಾಡಿಕೊಂಡು "ಯಾರಿಗೆ ಾಗಿದೆ ಮುಖ್ಯಮಂತ್ರಿ ಸೀಟು" ಎಂದು ದನಿಯಲ್ಲಿ ಕೂಗಾಡಿದರಂತೆ.



ಎಲ್ಲಿಯಾದರೂ ದಿಲ್ಲಿಯಿಂದ ರೆಡ್ ಸಿಗ್ನಲ್ ತಂದರೇನು ಕತೆ ಎಂಬ ಆತಂಕವಷ್ಟೇ ಈಗ ಈ ಜೋಡಿಯನ್ನು ಕಾಡುತ್ತಿದೆ.

ಒಂದು ವೇಳೆ ಮತ್ತೆ ಚುನಾವಣೆ ನಡೆದರೆ ಗೆಲ್ಲುವುದು ಕಷ್ಟ ಎಂದು ಗೊತ್ತಿರುವ ಬಿಜೆಪಿ ಶಾಸಕರ ದೊಡ್ಡ ಬಣವೇ ಯಡ್ಡಿಯ ಈ ನಿರ್ಧಾರಕ್ಕೆ ಬೆಂಬಲ ಸೂಚಿಸಬಹುದು. ಅಲ್ಲದೆ ಈಗ ಅಧಿಕಾರದಲ್ಲಿರುವ ಸಚಿವರು, ನಿಗಮ-ಮಂಡಳಿಗಳ ಅಧ್ಯಕ್ಷರು ಇದೇ ಸರಿ ಎನ್ನಬಹುದು. ಆದರೆ ಈಗಲೇ ಈ ವಿಷಯ ಪ್ರಸ್ತಾಪ ಮಾಡುವುದು ಬೇಡ ಎಂದು ಯಡ್ಡಿ ಬಣ ಸುಮ್ಮನಿದೆ.

ತಾನು ಮುಖ್ಯಮಂತ್ರಿಯಾದಲ್ಲಿ ಗೌಡರು ಧರ್ಮಸಿಂಗ್‌ಗೆ ಕಾಟ ನೀಡಿದಂತೆ ತಮಗೂ ನೀಡದೇ ಇರುತ್ತಾರೆಯೇ? ಮುಂದೆ ಚುನಾವಣೆ ಬರುವುದರಿಂದ ತಮ್ಮ ಮೇಲೆ ಒತ್ತಡವೂ ಹೆಚ್ಚಲಿದೆ; ಮುಂದಿನ ಚುನಾವಣೆಯಲ್ಲಿ ಪಕ್ಷ ಸೋತರೆ ಅದು ತಮ್ಮ ಸೋಲು ಎಂದು ಬಿಂಬಿಸಲಾಗುತ್ತದೆ. ಅದಕ್ಕೆ ಈ ಮುಖ್ಯಮಂತ್ರಿ ಸ್ಥಾನದ ಸಹವಾಸವೇ ಬೇಡ. ಮುಂದೆ ಪಕ್ಷ ಅಧಿಕಾರಕ್ಕೆ ಬಂದ ಮೇಲೆ ಸಹಾನುಭೂತಿಯಿಂದ ಸ್ಥಾನ ಸಿಕ್ಕಿಯೇ ಸಿಗುತ್ತದೆ ಎಂಬ ಲೆಕ್ಕಾಚಾರದಲ್ಲಿ ಯಡ್ಡಿ ಇದ್ದಾರಂತೆ.

ಪಕ್ಷಕ್ಕೆ ಗೌಡರು ಕೊಟ್ಟ ಅಧಿಕಾರ ಹೋಗುತ್ತೋ, ಬಿಡುತ್ತೋ ಅದು ಬೇರೆ ವಿಷಯ. ತಮಗೆ ಅವಮಾನ ಮಾಡಿದ ಯಡ್ಡಿ ಬಣಕ್ಕೆ ಈ ಸಂದರ್ಭದಲ್ಲಿ ಹೇಗೆ ಅವಮಾನ ಮಾಡಬೇಕೆಂಬ ಲೆಕ್ಕಾಚಾರದಲ್ಲಿ ಅನಂತು ಬಣವಿದೆ. ಹೀಗಾಗಿ ಒಡೆದ ಮನೆಯಲ್ಲೀಗ ರಾಜಕೀಯ ಚತುರತೆ ತೋರುವ ಕುರಿತೇ ಚರ್ಚೆ ನಡೆಯುತ್ತಿದೆ.

ಸೋನಿಯಾ ಭೇಟಿ ಆಗಿದ್ದು ಸುಳ್ಳು, ಸುಳ್ಳು, ಸುಳ್ಳು

ಥೂತ್ತೇರಿ

ನಮ್ಮ ನೆಚ್ಚಿನ ಮಾಜಿ ಪ್ರಧಾನಿಗಳ ಬಗ್ಗೆ ಯಾವುದೇ ಆರೋಪ ಬಂದರೂ ಅದನ್ನು ನಂಬುವವರೇ ಜಾಸ್ತಿ ಆಗಿದ್ದಾರಂತಲ್ಲಾ? ಇಂತಹ ಸನ್ನಿವೇಶದಲ್ಲಿ ಅವರನ್ನ ಪತ್ರಕರ್ತರು ಮಾತನಾಡಿಸಿ ಪಡೆದಿರುವ ಅಸಂಬದ್ಧ ಉತ್ತರಗಳಿಗೆ ಸರಿಯುತ್ತರ ಪಡೆಯುವ ಮನಸ್ಸಾದ ಕೂಡಲೇ ಫೋನ್ ಮಾಡಿದರೆ ದತ್ತ ಸಿಕ್ಕ. ಅವನೊಡನೆ ಮಾತನಾಡಲು ಪುರುಸೊತ್ತಿಲ್ಲದ ಕಾರಣ ಗೌಡರಿಗೆ ಫೋನ್ ಕೊಡಲು ಹೇಳಿದೆ.

"ಹಲೋ ಸಾರ್. ನಾನು ಯಾಹೂ ಅಂತ, ಬಹಳ ದಿನಾಯ್ತು ಮಾತಾಡ್ಸಿ."

"ಏನ್ಹೇಳಿ?"

"ತಾವು ಸೋನಿಯಾಗಾಂಧಿ ಭೇಟಿಯಾದ ಸುದ್ದಿ ಹಬ್ಬಿದೆ ಸಾರ್."

"ಸೋನಿಯಾ ಗಾಂಧಿಯನ್ನು ನಾನು ಭೇಟಿಯಾಗಿರತಕ್ಕಂತಹ ವಿಷಯ ಸುಳ್ಳು, ಸುಳ್ಳು, ಸುಳ್ಳು."

"ಮತ್ತೆ ಈ ಸುದ್ದಿ ಹಬ್ಬಿದ್ದಾದರೂ ಹೇಗೆ?"

"ನಾನು ಡೆಲ್ಲಿಗೆ ಹೋದಾಗ, ನನ್ನ ಕಾರಿನ ಡ್ರೈವರ್ ದಾರಿ ತಪ್ಪಿ ಸೋನಿಯಾ ಮನೆ ಕಡೆಯ ರಸ್ತೆಯಲ್ಲೊದ, ಅಷ್ಟೆ."

"ನೋಡಿ ಸಾರ್ ಎಂತಹ ಅನಾಹುತ ಆಗಿದೆ."

"ಅನಾಹುತ ಏನಿಲ್ಲ, ರಾಜಕಾರಣದಲ್ಲಿ ಇವೆಲ್ಲಾ ಸಾಮಾನ್ಯ ಸಂಗತಿಗಳು."

"ಸೋನಿಯಾಗಾಂಧಿಗೆ ನಾನು ಸಿಕ್ಕೇಯಿಲ್ಲ ಅಂದಿದ್ದೀರಿ, ಅಂದ್ರೆ ಆಕೆ ಹುಡುಕ್ತಾ ನೀವು ತಪ್ಪಿಸಿಕೊಳ್ತಾ ಇರೊ ಅರ್ಥ ಕೊಡುತ್ತಲ್ಲ ಸಾರ್."

"ಅಂತ ಸ್ಥಿತಿ ಈ ದೇವೇಗೌಡನಿಗೆ ಇನ್ನು ಬಂದಿಲ್ಲ, ಒಬ್ಬ ರೈತನ ಮಗನಾಗಿ ಹುಟ್ಟಿದ್ದೇನೆ. ನನಗೂ ಆತ್ಮಗೌರವ ಇದೆ."

"ಆತ್ಮಗೌರವ ಅಂದ್ರೆ ಒಂದಿಷ್ಟು ವಿವರುಸ್ತೀರ?"

"ಪ್ರತಿಯೊಬ್ಬ ಮನುಷ್ಯನಲ್ಲೂ ಆತ್ಮ ಇದೆ. ಅದು ಮನುಷ್ಯ ಮಾಡತಕ್ಕಂತಹ ತಪ್ಪುಗಳನ್ನು ಎತ್ತಿ ತೋರಿಸಿ ಎಚ್ಚರಿಸುತ್ತೆ. ಆ ಎಚ್ಚರಿಕೆಗೆ ಬೆಲೆ ಕೊಟ್ಟು ನಾವು ತಪ್ಪುದಾರಿ ತುಳಿಯಬಾರದು."

"ಈಗ ತಾವು ಆ ದಾರಿಯಲ್ಲಿ ಬಹಳ ದೂರ ಬಂದಿದ್ದೀರಲ್ಲಾ ಸಾರ್."

"ಇಲ್ಲ ಬಂದಿಲ್ಲ."

"ನಿಮ್ಮ ಜಾತ್ಯತೀತ ಸಿದ್ಧಾಂತ ಬದಿಗೊತ್ತಿ ಕುಮಾರಸ್ವಾಮಿ ಶಾಸಕರನ್ನು ಕರಕಂಡೋಗಿ ಬಿಜೆಪಿ ಜೊತೆ ಸರ್ಕಾರ ಮಾಡಿದ್ರು. ಅದನ್ನು ವಿರೋಧಿಸಿದ್ರಿ ನೀವು."

"ವಿರೋಧಿಸೋದೇನು ಊಟ ನಿದ್ದೆಯಿಲ್ದೆ ನನ್ನ ಆರೋಗ್ಯ ಎಲ್ಲಾ ಹಾಳಾಗಿ ಹಾಸಿಗೆ ಹಿಡಿದು ಬಿದ್ದಿದ್ದೆ ಗೊತ್ತ?"

"ಅಷ್ಟೊಂದು ದೈಹಿಕ, ಮಾನಸಿಕ ಹಿಂಸೆ ಅನುಭವಿಸಿದ ನೀವು ಅಂತಹ ಪ್ರಾಯಶ್ಚಿತ್ತಕ್ಕೆ ಬದ್ಧರಾಗಿದ್ರೆ ಚೆನ್ನಾಗಿತ್ತಲ್ಲವ?"

"ಪ್ರಾಯಶ್ಚಿತ್ತವನ್ನೇ ಪರ್ಮನೆಂಟಾಗಿ ಅಪ್ಪಿಕೊಳೋದಿಕ್ಕೆ ಬರಲ್ಲ, ಮನುಷ್ಯ ಕ್ರಮೇಣ ಬದಲಾಗ್ತನೆ. ನಮ್ಮ ಕುಮಾರನೂ ಬದಲಾದ, ಬಂದು ಕಾಲಿಗೆ ಬಿದ್ದ. ಆಗ ಅನಿವಾರ್ಯವಾಗಿ ಕ್ಷಮಿಸಬೇಕಾಯ್ತು."

"ಕ್ಷಮಿಸಿ ನಿಮ್ಮಷ್ಟಕ್ಕೆ ನೀವಿರಬಹುದಿತ್ತಲ್ಲವೆ?"

"ನೋಡಿ, ಒಬ್ಬ ಅನನುಭವಿ ಮುಖ್ಯಮಂತ್ರಿ ಅಂತ ಕುಮಾರನಿಗೆ ಕೊಡೋ ತೊಂದ್ರೆಯನ್ನು ನೋಡಿ ನಾನು ಸುಮ್ಮನಿರಕ್ಕಾಗುತ್ತ. ಆತ್ಮಗೌರವ ಅಂತ ನಾನು ಸುಮ್ಮನಿದ್ರೆ ಗಣಿ ಲಂಚದಲ್ಲೇ ಆತನ ಸರ್ಕಾರ ಉರುಳುತ್ತಿತ್ತು. ಅಂತಹ ಎರಡುಮೂರು ಸನ್ನಿವೇಶಗಳು ಎದುರಾಗಿದ್ದವು. ಅನಿವಾರ್ಯವಾಗಿ ನಾನು ಪಾರು ಮಾಡಬೇಕಾಯ್ತು."

"ನಿಮ್ಮ ಬದುಕಿನ ಕಡೆ ಹಂತ ಬಹಳ ಕೆಟ್ಟದಾಗಿದೆಯಲ್ಲ ಸಾರ್."

"ಏನು ಕೆಟ್ಟದಾಗಿದೆ?"

"ಆತ್ಮಗೌರವವನ್ನು ಬಿಜೆಪಿ ಜೊತೆ ಸೇರಿ ಬಿಟ್ಟುಕೊಟ್ರಿ. ನಿಮ್ಮ ಜಾತ್ಯತೀತ ಮೌಲ್ಯಗಳನ್ನು ಪುಡಿಮಾಡಿದ್ರಿ. ನಿಮ್ಮ ಕಣ್ಣೆದುರೇ ಬಿಜೆಪಿಗಳು ಕೋಮುಗಲಭೆ ಮಾಡಿದ್ರು. ವಿರಾಟ್ ಹಿಂದೂ ಸಭೆ ಮಾಡಿದ್ರು. ಮಕ್ಕಳಿಗೆ ಮೊಟ್ಟೆ ಕೊಡದಂಗೆ ಮಾಡಿದ್ರು. ಬಾಬಾಬುಡನ್‌ಗಿರಿಲಿ ದತ್ತ ಜಯಂತಿ ಮಾಡಿದ್ರು. ನೀವು ಆತ್ಮಗೌರವಕ್ಕೆ ಪಕ್ಕಾಗಿದ್ರೆ ಈ ಅನಾಹುತಗಳ ಜವಾಬ್ದಾರಿ ಹೊರಂಗಿರಲಿಲ್ಲ."

"ಅವರು ಮಾಡೋ ಅನಾಹುತಗಳ ಜವಾಬ್ದಾರಿ ನಾನ್ಯಾಕೊರ್ಲಿ? ಅದು ಆ ಪಕ್ಷದ ಅಜೆಂಡ. ಅವರ ಕೆಲಸ ಅವರು ಮಾಡಿಕೊಂಡೊಗ್ತರೆ."

"ಕಾವೇರಿ ವಿಷಯದಲ್ಲಿ ಬಾಯಿ ಬಿಡಲಿಲ್ಲ ನೀವು?"

"ಅದು ನನ್ನ ಮನೆ ನೀರಿನ ವಿಷಯ ಅಲ್ಲ."

"ಮಧ್ಯಂತರ ತೀರ್ಪು ಬಂದಾಗ ತಲಕಾವೇರಿಗೋಗಿ ಪ್ರತಿಭಟಿಸಿದ್ರಿ?"

"ಆ ಎಸ್ಸೆಂ ಕೃಷ್ಣ ಪಾದಯಾತ್ರೆ ಮಾಡುವಾಗ ನಾನು ಸುಮ್ಮನಿರಕ್ಕಾಗುತ್ತ?"

"ಥೂತ್ತೇರಿ!"

-ಯಾಹೂ



ಒಬ್ಬ ಉಣ್ಣಕ್ಕಿದತೆ ಅಂತಾನೆ, ಇನ್ನೊಬ್ಬ ಮನಗಕ್ಕೆ ಜಾಗಿದ್ದತೆ ಅಂತಾನೆ

ಬಯಲು ಸೀಮೆಯ ಕಟ್ಟೆ ಪುರಾಣ

ಕೇಣಗಳೆಸವಲ್ಲ ಮುಗಿದು ಬೆಳೆದುದನ್ನು ಬಡಿದು. ತೂರಿ. ಕೇರಿ ಮನೆಗೆ ತುಂಬಕೊಂಡಾಗಿತ್ತು. ಒಂದಿಷ್ಟು ದಿನ ಬಿಸಲಲ್ಲಿ ಕೆಲಸ ಮಾಡಿದ ಕಾರಣಕ್ಕೆ ಜುಮ್ಮಿ ಕಪ್ಪು ಬಣ್ಣಕ್ಕೆ ತಿರುಗಿದ್ದಳು. ಇದನ್ನು ಗಮನಿಸಿದ ಉಗ್ರಿ,

"ಜುಮ್ಮಿ ಕಲರ್ ಯಾಕೊ ವಲ್ಲಾಗ್ಯದೆ?" ಎಂದ.

"ಈಗ ಬಣ್ಣ ತಗಂದೇನು ಮಾಡಕ್ಲ. ಬಣ್ಣ ಬತ್ತದೆ ಹೋಯ್ತದೆ ಮನುಸು ಬದ್ಲಾಗದಂಗಿದ್ರಾಯ್ತು" ಎಂದ ಸೀರ.

"ಈ ಹಾಳು ಕಣಗ್ಯಲಸದ ಟೇಮಲ್ಲಿ ಯಲ್ಲ ಹುರುದುಳ್ಳಿ ಕಾಳಾಯ್ತರೆ ಕಣ ಮಾವ, ಈ ತಾರಾ ಕೋರಾಯ್ತರೆ ನೋಡು, ಅಂಗಾಯ್ತರೆ ಊರೆಂಗುಸುರ್ಕಲ್ಲ" ಎಂದಳು ಜುಮ್ಮಿ.

"ಯಮಾಯದಲ್ಲಿ ಕಷ್ಟಕರವಾದ ಕ್ಯಲಸ್ಯಾವುದು ಅಂದ್ರೆ ಬ್ಯಳದಿರದ ಬದುದು ಮನಿಗೆ ತುಂಬಕಳದೆ ಕಂಡ್ರೆ. ಯಾಕೆ ಅಂದ್ರೆ ಉರಿಬಿಸ್ಲಲ್ಲಿ ಹುಲ್ಲು ಬಡಿಬೇಕು, ಆಮಾಲೆ ಗುನಿಬಡಿಬೇಕು, ರಾಶಿ ತೂರಬೇಕು, ಈ ಯಲ್ಲಾ ಕ್ಯಲಸನೂ ಬಿಸ್ಲಲ್ಲೆ ಮಾಡಬೇಕು. ಅದ್ಕೆ ಕಣಗ್ಯಲಸದ ಟೇಮಲ್ಲಿ ಹೆಂಗುಸುರು ಕಳೇವು ಕಮ್ಮಿಯಾಯ್ತದೆ" ಎಂದ ಕಾಳಮಾವ.

"ಆದ್ರು ಕ್ಯಲಸ ಮಾಡದ್ರಿಂದ ಕ್ಯಟ್ಟನೀರು ಬೆವ್ರಾಗಿ ಮನುಸ್ರು ವಳ್ಳೆ ಆರೋಗ್ಯವಂತ್ರಾಯ್ತರೆ ಕಣಮಾವ" ಎಂದ ಉಗ್ರಿ.

"ಅದೇನೊ ನಿಜ. ತಿಂದು ಕೂತಗಳೋರಿಗೆ ಕ್ಯಟ್ಟ ನೀರು ತುಂಬಕತ್ತದೆ ಅದ್ಕೆ ಅಲವೆ ಸಿಟಿ ಜನ ಒಂಥರ ತ್ವಸಗಲಗಳಂಗೆ ನಳ್ತವೆ ಅವು ಕೈಲೇನಾದತೂ?" ಎಂದ ಕಾಳಮಾವ.

"ಯಮಾಯ ಕಷ್ಟ ಅಂತ ಗೊತ್ತಾಗ್ಯಲವೆ ಬ್ರಾಂಬ್ರು ಆ ಕಸುಬಿಗೆ ಕೈ ಹಾಕಲಿಲ್ಲ" ಎಂದ ಸೀರ.

"ಬ್ರಾಂಬ್ರುಗಂಟ ಯಾಕೋದಿಯೋ? ಈ ನಮ್ಮವೆ ಒಂದು ಸರ್ಕಾರಿ ಕ್ಯಲಸ ಸಿಕ್ಕಿದ್ರೆ ಸಾಕು ವಲ್ದಕಡೆಗೆ ತಿರಿಗಿ ನೋಡದಿಲ್ಲ, ಇನ್ನು ಅವುರ ಮಕ್ಕಳಂತೂ ಬಂದು ಯಲ್ಲಾನು ಮಾರಿ ಕಂಡೋಯ್ತವೆ. ಅಂಗಿರುವಾಗ ಇವುನು ಬ್ರಾಂಬ್ರು ಸುದ್ದಿಗೋದ" ಎಂದ ಉಗ್ರಿ.

"ವಾದ್ನೆವಾರ ನಮ್ಮೂರಿಗೊಬ್ಬ ಬ್ರಾಂಬ್ರೋನು ಬಂದಿದ್ದ ನೋಡಿದ ನೀನು?" ಎಂದ ಸೀರ ಯಾವುದೋ ಅಪೂರ್ವ ಪ್ರಾಣಿ ಬಂದುಹೋದ ಸುದ್ದಿಯಂತೆ ಮುಖ ಮಾಡಿದ.

"ಇಲ್ಯಾರ ಮನಿಗೆ ಬಂದಿದ್ದಾ?"

"ಯಾರ ಮನಿಗೂ ಬಂದಿರಲಿಲ್ಲ, ಒಂದಿಷ್ಟು ಹುಡುಗರ ಕರದು ಅದ್ಯಂತದೊ ಕೆಂಪುಬಟ್ಟೆ ಕೊಟ್ಟು ಮರದಮ್ಯಾಲೆ ಕಟ್ರಿ ಅಂದ. ಇವು ಕೋತಿ ತಿಮ್ಮನಂಗೆ ಹತ್ತಿ ಕಟ್ಟದೊ. ಅಮ್ಯಾಲೆ ಯಲ್ಲಾರ ಕೈಗೂ ಬಾವುಟ ಕೊಟ್ಟು ಹೋದ" ಎಂದ ಸೀರ.

"ಓ ಅವುನು ಕಟ್ಟಿಸ್ಕೊದ್ದೆ ಅದ? ನಾನಿದ್ಯಾವುದಪ್ಪ ಮುಟ್ಟನ ಬಟ್ಟೆ ಅಂಗೆ ಮರದಮ್ಯಾಲೆ ಸ್ಯಾತಾದ್ರ ಅದೆ ಅಂತ ತಲೆ ಕೆಡಿಸಿಗಂದಿದ್ದೆ. ಅದೇಸ್ಲ ಉಗ್ರಿ ಅವುನು ಕಟ್ಟಿಸಿರದು?"

"ಅದೂ ಇದು ಕಣೆ, ವಿರಾಟ್ ಹಿಂದೂ ಸಮಾವೇಶದ ಅದ್ವಿಟೇಜು."

"ಇರಾಟಂದು ಸಭೆ ಅಂದ್ರೆ?"

"ಹಿಂದೂಗಳು ನಾವ್ಯಲ್ಲ ಒಂದು ಬನ್ನಿ ಒಂದೆ ಜಾಗಕ್ಕೆ ಸೇರಿಕಂಡು ಸಭೆ ಮಾಡನ ಅಂತ ಕರದವುರೆ."

"ಯಾರ್ರೂ?"


"ಇನ್ಯಾರು? ಬ್ರಾಂಬ್ರು."

"ಬ್ರಾಂಬ್ರು ನಾವ್ಯಲ್ಲ ಒಂದು ಅಂತ ಕರದಿದ್ದರೆ?"

"ಊ ಕಣ ಮಾವ, ಅಂಗಂತ ಕರದಿದ್ದೂ ಅಲ್ದೆ ಇಡೀ ದೇಸದ ತುಂಬ ಸಭೆ ಸಮಾರಂಭ ಮಾಡಿದ್ರು. ಬ್ರಾಂಬ್ರು ಕರದ ಮ್ಯಾಲೆ ಹೋಗದೆ ಇರಕ್ಯಾದತೆ? ಅದ್ಕೆ ಸಣ್ಣಪುಟ್ಟ ಜಾತಿ ಸ್ವಾಮಿಗಳ್ಯಲ್ಲ ಹೋಗಿದ್ದೊ."

"ಅಂಗರೆ ಬರೀ ಸ್ವಾಮಿಗಳ ಕರದಿದ್ರು ಅನ್ನು?"

"ಜನಗಳನೂ ಕರೆದಿದ್ರು. ಜತಿಗೆ ಸ್ವಾಮಿಗೂ ಕರದಿದ್ದು. ಇವು ಹೋಗಿದ್ದೊ. ಅಲ್ಲೋಗಿ ನೋಡಿದ್ರೆ, ಇವುಕ್ಯಲ್ಲ ಸಣ್ಣ ಕುರ್ಚಿ ಹಾಕಿ ಆ ಪೇಜಾವರ ಸ್ವಾಮಿಗೆ ಮಾರಾಜನ ಕುರ್ಚಿ ಹಾಕಿದ್ದವಂತೆ."



"ಅಂಗರೆ ಕರದು ಅವುಮಾನ ಮಾಡ್ಯವೆ ಅನ್ನು."

"ಅವುಮಾನಲ್ಲ ಈತರ ಇರಬೇಕು ಅಂತ ತೋರ್ಯವುರೆ. ಯಂಗಪ್ಪಾ ಅಂದ್ರೆ ಪೇಜಾವರ ಮುಂದಿರತನೆ ನೀವ್ಯಲ್ಲ ಹಿಂದಿರಬೇಕು. ಬ್ರಾಂಬ್ರು ಮುಂದಿರತರೆ ನೀವ್ಯಲ್ಲ ಹಿಂದಿರಬೇಕು ಅಂತ."

"ಪೇಜಾವರನೆ ಯಾಕೆ ಮುಂದಿರಬೇಕು? ನಮ್ಮ ಚುಂಚನಗಿರಿ ಸ್ವಾಮಿನೆ ಮುಂದಿರಕ್ಕೇನೂ?" ಎಂದ ಸೀರ.

"ಅದ ಚುಂಚನಗಿರಿ ಸ್ವಾಮಿ ಕೇಳಬೇಕಪ್ಪ, ನಾನು ಜಾಸ್ತಿ ಜನಗಳಿರೊ ಜನಾಂಗದ ಸ್ವಾಮಿ, ನಾನೇ ಮುಂದೆ ಅಂತ ಇವುರು ಕೇಳಿದ್ರೆ ಸರಿಯಾಯ್ತದೆ. ಅದುಬುಟ್ಟು ಕರದದ್ದೇ ಸಾಕು ಅಂತ ಹೋದ್ರೆ ಅಲ್ಲಿ ಪೇಜಾವರನ ಕದಿಯೋರು ಪಟ್ಯಾಗಿ ಕುಂತಿರತರೆ."

"ಯಲ್ಲಾಬುಟ್ಟು ಈಗ್ಯಾಕ್ಲ ನಾವ್ಯಲ್ಲ ಒಂದು ಅಂತ ಬಂದವುರೆ ಬ್ರಾಂಬ್ರೂ?" ಎಂದ ಕಾಳಮಾವ.

"ಅದಕ್ಕೊಂದು ಪ್ರಬಲವಾದ ಕಾರಣ ಅದೆ ದ್ವಡಪ್ಪ" ಎಂದು ವಾಟಿಸ್ಸೆ ಬಂದ.

"ಹೇಳ್ಳ ಅದೇನು ಕಾರಣ."

"ಈ ಬಿಜೆಪಿಗಳು ಪೂರ್ತಿ ಪವರ್‍ರಿಗೆ ಬರಕ್ಕೆ ಇನ್ನು ಮುವತ್ತು ಸೀಟು ಬೇಕಂತೆ. ಅದ್ಕೆ ಹಿಂದೂಗಳು ನಾವ್ಯಲ್ಲ ಒಂದು ಅಂದ್ರೆ ಕ್ಯಳಜಾತಿಗಳ್ಯಲ್ಲ ನಮ್ಮತ್ರ ಬತ್ತವೆ. ಆಗ ತಲೆ ಸವುರಿ ಕತ್ತು ಮುರುದು ವಳಿಕಾಯ್ಯಬವುದು ಅಂತ ಸಭೆ ಮಾಡಿದ್ರು. ಅದು ವಿರಾಟ್ ಹಿಂದೂ ಅಂತ."

"ಇರಾಟ್ ಅಂದ್ರೇನ್ಲ?"

"ವಿರಾಟ್ ಅಂದ್ರೆ ಮದ್ಯದಲ್ಲಿ ಬ್ರಾಹ್ಮಣ ಅವುನ ಸುತ್ತ ಮುನ್ನೂರು ಜಾತಿ. ಪರೆಗ್‌ಜಾಂಪಲ್ ಕೊಡದಾದ್ರೆ ಈರುಳ್ಳಿ ತರ ಸೆಂಟ್ರಲ್ಲಿ ಬ್ರಾಮಣ ಇದ್ರೆ ಸಿಪ್ಪೆ ತರ ಬೇರೆ ಜಾತಿ ಇರತವೆ. ಇದಕ್ಕೆ ವಿರಾಟ್ ಹಿಂದೂ ಅಂತ ದ್ವಡಪ್ಪ"

"ಗೊತ್ತಾಯ್ತು ಬುಡು. ಅಲ್ಲಿಗೂ ಅವುನಲ್ಲೆಯಾ, ನಾವಿಲ್ಲೆಯ ಅನ್ನಂಗಾಯ್ತದಪ್ಪ."

"ಊ ಮತ್ತೆ, ಆಗ ಧರ್ಮದ ಮುಖಾಂತ್ರ ಅಂಗೆ ಮಾಡಿದ್ರು ಈಗ ಬಿಜೆಪಿ ಹಿಡಕಂಡು ಯಲ್ಲಾರ ಜುಟ್ಟನೂ ಕೈಗೆ ತಗಳಕ್ಕೆ ಅಂತ ಬಂದವುರೆ. ಅದು ಗೊತ್ತಿಲ್ದೆ ಈ ಶೂದ್ರಮುಂಡೆವು ಕುಣಿತ ಅವೆ ದ್ವಡಪ್ಪ."

"ಏನೆ ಆದ್ರು ದ್ಯಾವೇಗೌಡ ಅವುಕಾಸ ಕೊಡದಿಲ್ಲ ಬುಡು."

"ನಿನ್ನ ಮಾತಿನಂಗೆ ದ್ಯಾವೇಗೌಡ ನ್ಯಡಕಂಡ್ರೆ ವಳ್ಳೆದು ದ್ವಡಪ್ಪ, ಅವುನಾಗ್ಲೆ ಸೋನಿಯಾ ಗಾಂಧಿ ಭೇಟಿಯಾದ ಅಂತ ಸುದ್ದಿ ಬಂದದೆ."

"ಸೋನಿಗಾಂಧಿತಕ್ಕೋಗಿದ್ನೆ?"

"ಊ ಹೋಗಿದ್ನಂತೆ. ಅವುನ ಮನೆಲಿ ಒಂದೆತ್ತದಲ್ಲ ಅದನ್ನು ಮುಖ್ಯಮಂತ್ರಿ ಮಾಡಕ್ಕೆ ಇನ್ಯಾರಕೈಯಿಂದ್ಲು ಆಗಲ್ಲ, ವಾಡಿದ್ರೆ ನೀನೇ ಮಾಡಬೇಕು ಅಂತ ಕೇಳಕ್ಕೋಗಿದ್ನಂತೆ."

"ಎತ್ತಾರ್ಲ?"

"ಅಲ್ಲೊಂದು ಗಾರೆ ಅರೆಯೊ ಎತ್ತದೆ ಕಣಕ್ಕ ಹೂಡಿಬುಟ್ರಾಯ್ತು, ಸಂಜೆಗಂಟ ಸುತ್ತತದೆ."

"ಆಹಹ ನೀನಿದ್ದಿ ನೋಡು, ಅವುರಿವುರ ಆಡಿಕಂಡೇ ಹಾಳಾಗಿ ಹೋದೆ ನೀನು" ಎಂದು ಜುಮ್ಮಿ ನಕ್ಕಳು.

"ದ್ಯಾವೇಗೌಡ್ರು ಸೋನಿಯಾ ಭೇಟಿ ಆದಾಗಿನಿಂದ ಬಿಜೆಪಿಗಳ ತೊಳ್ಳೆ ನಡಿಗೋಗಿದೆ ಕಣೆ; ಅದಕ್ಕೆ ಯಡೂರಪ್ಪ ದಲಿತರ ಮನೆಗೋಗಿ ಎನಾರ ಉಣ್ಣಕ್ಕಿದತೆ ಅಂತ ಕೇಳ್ತ ಅವುನೆ. ಈ ಕುಮಾರಸ್ವಾಮಿ ಮನಿಕಳಕ್ಕೆ ಜಾಗಿದ್ದತೆ ಅಂತ ಕೇಳ್ತ ಕುಂತವುನೆ" ಎಂದ ಉಗ್ರಿ.

"ಕುಮಾರಸ್ವಾಮಿ ಬೆಂಗಳೂರಿಗೆ ಬಂದ್ರೂ ಮನೆಲಿ ಮನಗದಿಲ್ಲ ಕಣಕ್ಕ" ಎಂದ ವಾಟಿಸ್ಸೆ.

"ಇನ್ನೆಲ್ಲಿ ಮನಗತನ್ಲ?"

"ಯಾರೋ ಸಿನುಮ ನಟ ಮನೆಲಿ ಮನಿಗಿದ್ದು ಎದ್ದು ಬಂದನಂತೆ. ಅಂಗಾಗಿ ಅವುನು ಮನೆಬುಟ್ಟು ಬಾಳದಿನಾಗ್ಯದೆ. ಅದು ಗೊತ್ತಾಗಿದ್ದು ಈಗ."

"ಕಂಡೋನಂಗೆ ಮಾತಾಡಬ್ಯಾಡ, ಸುಮ್ಮನೆ ಕೂತಗಳ್ಳ."

"ಗಾಡ್ ಪ್ರಾಮಿಸ್ ಕಣಕ್ಕ. ಕುಮಾರಸ್ವಾಮಿ ಮನೆಲಿ ಮನಗನೆಯಾ. ಅವುಲ್ಯಾರೊ ಸಿನುಮಾ ನಟಿ ಮನೆಲಿ ಮನಗಿದ್ದಾಗ ರೆಡ್ ಹ್ಯಾಂಡಲ್ಲಿ ಸಿಗಾಯ್ಕಂಡವುನೆ. ಕಂಡೋರೆ ಹೇಳುವಾಗ ನಾವು ನಂಬದೆ ಇರಕ್ಯಾದತ್ತೇನಕ್ಕ?"

"ಪಾಪ ಅನಿತಕ್ಕ ಕೈ ತ್ವಳಕಂಡು ಮುಟ್ಟಂಗವುಳೆ" ಎಂದು ಜುಮ್ಮಿ ಲೋಚಗರಿದಳು.

"ಈ ಪೋಲಿ ಬಡ್ಡೆತ್ತುದ್ದು ಹೇಳ್ತದೆ ಅಂತ ನೀನು ಕೇಳ್ತಿಯಲ್ಲೇ ಜುಮ್ಮಿ. ಮುಖ್ಯಮಂತ್ರಿ ಕಂಡ್ಳೆ, ಅವುನು ಮುಖ್ಯಮಂತ್ರಿ. ಅವನು ಹೋಗಬೇಕಾದ್ರೆ ಹಿಂದೆಮುಂದೆ ಜನರಿರತರೆ. ಹೋದ ಜಾಗದಲ್ಲಿ ಜನ ಪಾರ ಇರತರೆ. ಅಂತೆದ್ರಲ್ಲಿ ಹೋಗಿ ಕ್ವಸ್ತು ಬಂದನೆ?" ಎಂದ ಕಾಳಮಾವ.

"ದ್ವಡಪ್ಪ ನೀನು ಇಲ್ಲಿ ಕುಂತಗಂಡು ಮುಖ್ಯಮಂತ್ರಿ ಜ್ವತೆಲಿರೋನಂಗೆ ಮಾತಾಡಬ್ಯಾಡ. ಜನ ಎಷ್ಟು ಕೆಟ್ಟವುರೆ ಅನ್ನದು ನಿನಿಗಿನ್ನು ಗೊತ್ತಿಲ್ಲ."

"ನೋಡಿದ್ಯಂಗದೆ, ಕುಮಾರಣ್ಣನಿಗೆ ಹೆಡತಿಯಿದ್ರೂ ಇಲ್ಲೊನಂಗೆ ಕಾಲಹಾಕ್ತನೆ. ಆ ಎಡೂರಪ್ಪನಿಗೆ ಹೆಡತಿನೆ ಇಲ್ಲ. ಇಬ್ರಿಗೂ ಜೋಡಿ ಚನಾಗ್ಯದೆ" ಎಂದ ಸೀರ.

"ಏ ಇದೆಲ್ಲಿ ಹೇಳ್ತಿಯೋ ನೀನು. ಎಡೂರಪ್ಪನೂ ಒಂದು ಕಡಸ ಜ್ವತಿಗಾಯ್ಕಂಡವುನೆ. ಅದ ತೂರಸದ ನೋಡಿ ಬಿಜೆಪಿಗಳೇ ತಿರುಗಿಬದ್ದಿದ್ರು. ಈಗ್ಲು ಎಡೂರಪ್ಪ ಯಾರಿಗೂ ಕೇರ್ ಮಾಡದಂಗೆ ತಾನು ಮಾಡದ್ನೆ ಮಾಡ್ತಯಿದ್ದನಂತೆ" ಎಂದ ಉಗ್ರಿ.


"ಓ ಸರ್ಕಾರ ಯಾಕೊ ಇತ್ತಮುಂದಾಗಿ ವಂಟುಬುಡತಲ್ಲೊ?" ಎಂದ ಸೀರ.

"ಕಡಿಗಾಲಕೆ ಯಲ್ಲ ಅಂಗೆ ಅಲವೆ?"

" !?"

-ಬಿ. ಚಂದ್ರೇಗೌಡ

ಲಂಕೇಶರ ಪ್ರಯೋಗಶೀಲ ವ್ಯಕ್ತಿತ್ವ



ಸಮಾಜವಾದಿ ಆಶಯಗಳ ಚಿಂತಕ ಮತ್ತು ಹೋರಾಟಗಾರರಾದ ಲಂಕೇಶರನ್ನು ನಾನು ಕಳೆದ ಮೂವತ್ತೈದು ವರ್ಷಗಳಿಂದಲೂ ಬಲ್ಲೆ. 1974 ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಸೇರಿದ ಮೇಲೆ ಅವರ ಒಡನಾಟ ಹೆಚ್ಚಾಯಿತು. ಪ್ರಜಾಪ್ರಭುತ್ವದ ಚೌಕಟ್ಟಿನ ನಡುವೆಯೇ ತುರ್ತು ಪರಿಸ್ಥಿತಿಯ ಕಪ್ಪುನೆರಳು ಇಡೀ ದೇಶವನ್ನು ವ್ಯಾಪಿಸಿದಾಗ ನಾವೆಲ್ಲ ಕೈಲಾದ ರೀತಿಯಲ್ಲಿ ಇದರ ವಿರುದ್ಧ ಕಾರ್ಯಶೀಲರಾಗುವ ಬಗೆಗಳನ್ನು ಒಟ್ಟಾಗಿ ಹುಡುಕುತ್ತಿದ್ದೆವು. ಅದೇ ಅವಧಿಯಲ್ಲಿ ಚಂಪಾ ಅವರ 'ಗಾಂಧಿ ಸ್ಮರಣ' ಕೃತಿಯನ್ನೂ ಹೊರತಂದೆವು; ಇದಕ್ಕೆ ಲಂಕೇಶರು ಮುನ್ನುಡಿ ಬರೆದರು. ಸ್ನೇಹಲತಾ ರೆಡ್ಡಿ ಅವರಂತಹ ಸೂಕ್ಷ್ಮಮತಿ ಮಹಿಳೆಯು ಬೆಂಗಳೂರಿನ ಸೆರೆಮನೆಯಲ್ಲಿ ತೀರಿಕೊಂಡಾಗ ನಾವೆಲ್ಲ ಕಂಗಾಲಾದೆವು; ಲಾರೆನ್ಸ್ ಅವರ ಮೈಮೂಳೆ ಮುರಿದವು. ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ದಾಳಿ ಅಸಹನೀಯವಾಯಿತು.

ಮತ್ತೆ ತುರ್ತುಪರಿಸ್ಥಿತಿ ಸಡಿಲಗೊಂಡು, ಚುನಾವಣೆ ನಡೆದಾಗ ಇಡೀ ಒಂದು ವಾರ ಕಾಲ ಲಂಕೇಶ್, ಕೆ.ಎಂ. ಶಂಕರಪ್ಪ, ಎಂ.ಡಿ. ನಂಜುಂಡಸ್ವಾಮಿ ಮತ್ತು ನಾನು ಆಗಿನ ಆಳುವ ಪಕ್ಷಕ್ಕೆ ವಿರುದ್ಧವಾಗಿ ಚಿತ್ರದುರ್ಗ ಮತ್ತು ಶಿವಮೊಗ್ಗ ಲೋಕಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಪ್ರಚಾರದಲ್ಲಿ ನಿರತರಾದೆವು. ಆ ದಿನಗಳಲ್ಲಿ ಲಂಕೇಶ್ ಹೆಚ್ಚು ಉದ್ವಿಗ್ನರಾಗಿದ್ದರು. ಆಗ ಕರ್ನಾಟಕದಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳೇ ಗೆದ್ದರು; ಆದರೆ, ಕೇಂದ್ರ ಸರ್ಕಾರ ಉರುಳಿ ಬಿತ್ತು; ಮತ್ತೆ ಪ್ರಜಾಪ್ರಭುತ್ವಕ್ಕೆ ಜೀವ ಬಂತು.

ಒಂದು ಪತ್ರ


ನಾವೆಲ್ಲ (ಲಂಕೇಶ್, ಕಂಬಾರ, ಮರುಳಸಿದ್ಧಪ್ಪ, ಕಿ.ರಂ., ಡಿ.ಆರ್. ಇತ್ಯಾದಿ) ಒಟ್ಟಾಗಿ ಜ್ಞಾನಭಾರತಿಯಿಂದ ಕೆಂಗೇರಿ ಉಪನಗರದಲ್ಲಿದ್ದ ನನ್ನ ಮನೆಗೆ ಬೆಳೆದ ಹೊಲಗಳ ನಡುವೆ ದಾರಿ ಹುಡುಕಿ, ಆಗಾಗ್ಗೆ ನಡೆದು ಬರುತ್ತಿದ್ದೆವು. ಒಟ್ಟಿಗೆ ಊಟ ಮಾಡಿ ಕಾವ್ಯ-ಸಂಗೀತ-ಹರಟೆ-ಚರ್ಚೆ ಹಾಗೂ ಅನೇಕ ತಮಾಷೆಯ ಸಂಗತಿಗಳ ನಡುವೆ ಹೊಟ್ಟೆ ತುಂಬಾ ನಗುತ್ತಾ ರಾತ್ರಿಯ ಬಹುಭಾಗವನ್ನು ಕಳೆಯುತ್ತಿದ್ದ ದಿನಗಳು ನೆನಪಾಗುತ್ತಿವೆ.

ಲಂಕೇಶರ ವ್ಯಕ್ತಿತ್ವ ಅಕ್ಷರಶಃ ವಿಶಿಷ್ಟವಾದುದು. ತಮ್ಮ ಸೃಜನಶೀಲ ಶಕ್ತಿಯ ಸರ್ವಸ್ವವನ್ನೂ ಕಳೆದ ಎರಡು ದಶಕಗಳಲ್ಲಿ ಇವರು ಇನ್ನಿಲ್ಲದಂತೆ ಪತ್ರಿಕೋದ್ಯಮಕ್ಕೆ ಧಾರೆ ಎರೆದರು. ನಾನು, ಡಿ.ಆರ್. ನಾಗರಾಜ್ ಮತ್ತು ಸಿದ್ಧಲಿಂಗಯ್ಯ ಆಗಾಗ್ಗೆ ಲಂಕೇಶರಲ್ಲಿಗೆ ಪ್ರಯಾಣ ಬೆಳೆಸುತ್ತಿದ್ದೆವು. ಅನೇಕ ಸಲ ಅವರೊಡನೆ ಪತ್ರಿಕಾಲಯದಲ್ಲಿ ಮಧ್ಯಾಹ್ನ ಆರಂಭಗೊಂಡ ನಮ್ಮ ಸಭೆ ಮಧ್ಯರಾತ್ರಿಯ ನಂತರವೂ ನಡೆಯುತ್ತಿತ್ತು, ನಾವೆಲ್ಲ ಈ ಕಡೆ ಹೊರಟನಂತರ ಅವರ ಓದು, ಬರವಣಿಗೆ ಆರಂಭವಾಗುತ್ತಿತ್ತು.

ಅದ್ಭುತ ಪ್ರತಿಭೆಯ ಶ್ರಮಪೂರ್ಣ ದುಡಿಮೆಯ ಲಂಕೇಶ್ ಅತ್ಯಂತ ಸರಳವಾಗಿ, ಸುಂದರವಾಗಿ ಸತ್ಯದ ನಾನಾ ಮಗ್ಗುಲುಗಳನ್ನು ವಿಶ್ಲೇಷಿಸಲು ನಿರಂತರವಾಗಿ ಪ್ರಯತ್ನಿಸುತ್ತಿದ್ದರು. ನಾವೆಲ್ಲ ಮುಖವಾಡಗಳನ್ನು ಕಳಚಿಟ್ಟು ಪರಸ್ಪರ ಪ್ರೀತಿಯಿಂದ, ಟೀಕೆ ಮತ್ತು ವಿಮರ್ಶೆಯ ಮೂಲಕ ಉದ್ದಕ್ಕೂ ಸೃಜನಶೀಲವಾಗಿ ಬೆಳೆಯುತ್ತಿರಬೇಕೆನ್ನುವ ಹಂಬಲ ಇವರಲ್ಲಿ ಹೇರಳವಾಗಿತ್ತು.

ಅಪ್ಪಟ ಜಾತ್ಯತೀತ ಮನೋಭಾವದ, ಅಪಾರ ಜೀವನಪ್ರೀತಿಯ, ನಿರ್ದಾಕ್ಷಿಣ್ಯ ಪ್ರವೃತ್ತಿಯ, ಸತತ ಪ್ರಯೋಗಶೀಲ ವ್ಯಕ್ತಿತ್ವದ ತುಂಬು ಲೇಖಕರಾಗಿ ಲಂಕೇಶರು ಕಂಗೊಳಿಸಿದ ರೀತಿಯು ಅತ್ಯಂತ ವಿಶಿಷ್ಟವಾದುದು.

-ಪ್ರೊ. ಕಾಳೇಗೌಡ ನಾಗವಾರ



ಒಂದು ಅನ್ನಿಸಿಕೆ

ಇದನ್ನೇ ಮೊನ್ನೆ ಭಾರತಪ್ರೇಮಿ, ಮಾಜಿ ರಾಯಭಾರಿ ಜೆ.ಕೆ. ಗಾಲ್‌ಬ್ರೇತ್ ಒಂದು ಸಂದರ್ಶನದಲ್ಲಿ ಹೇಳಿದ್ದಾರೆ. ಭಾರತಕ್ಕೆ ಈಗ ಬೇಕಾಗಿರುವುದು ಪೂರ್ಣ ಶಿಕ್ಷಣ, ಪೂರ್ಣ ತರಬೇತಿ. ಭಾರತದ ಹಣವೆಲ್ಲ ಅನಗತ್ಯ ಬಾಬುಗಳ ಮೇಲೆ ಖರ್ಚಾಗುತ್ತಿದೆ. "ನಾನು ಪೂರ್ತಿ ವಿದ್ಯಾವಂತರಾದ, ತಕ್ಕ ತರಬೇತಿ ಪಡೆದ ಯಾವ ದೇಶವೂ ಬಡವಾಗಿರುವುದನ್ನು ನೋಡಿಲ್ಲ" ಎಂದು ಇವರು ಹೇಳುತ್ತಾರೆ. ಒಂದು ಕಡೆ ಕಟ್ಟುನಿಟ್ಟಾಗಿ ಸಂತಾನ ನಿಯಂತ್ರಣ ಮಾಡಿ ಇನ್ನೊಂದು ಕಡೆಯಿಂದ ನಮ್ಮ ಯುವಕರನ್ನು ಉತ್ಪಾದಿಸುವ ಕಾರ್ಯಕ್ರಮದಲ್ಲಿ ಸೃಷ್ಟಿಸುವ ಕೆಲಸದಲ್ಲಿ ತೊಡಗಿಸಿದರೆ ಮಾತ್ರ ಈ ದೇಶ ಮುಂದೆ ಬರುತ್ತದೆ. ಗಾಲ್‌ಬ್ರೇತ್ ಇಟಲಿಯ ಉದಾಹರಣೆ ಕೊಡುತ್ತಾರೆ. ಇಟಲಿ ಭಾರತಕ್ಕಿಂತ ಪ್ರತಿಭಾವಂತ ದೇಶವೇನೂ ಅಲ್ಲ. ಹಾಗೆ ನೋಡಿದರೆ ಯಾವ ದೇಶವೂ ತಾನೇತಾನಾಗಿ ಪ್ರತಿಭಾವಂತವಲ್ಲ. ಇಟಲಿಯ ಜನ ಕುಶಲಕರ್ಮಿಗಳು. ಸುಂದರ ವಸ್ತುಗಳನ್ನು ತಯಾರಿಸುತ್ತಾರೆ. ಯುರೋಪಿನ ಯಾವ ದೇಶವೂ ಸೃಷ್ಟಿಸದಿರುವ ಮರಗೆಲಸದ ವಸ್ತುಗಳು, ಮನೆಯ ಅಲಂಕಾರಿಕ ವಸ್ತುಗಳು, ಬಟ್ಟೆಗಳು ಇಟಲಿಯಲ್ಲಿ ತಯಾರಾಗುತ್ತವೆ. ಇನ್ನೊಂದು ವಿಷಯ ಗೊತ್ತೆ? ಅಮೃತಶಿಲೆ ಮತ್ತು ಅದರ ಕೆತ್ತನೆಗೆ ಇಟಲಿ ಪ್ರಸಿದ್ಧ. ಬೇರೆ ದೇಶಗಳು ಕೂಡ ತಮ್ಮ ಅಮೃತಶಿಲೆಯನ್ನು ಇಟಲಿಗೆ ಕಳಿಸಿ ಕೆತ್ತನೆ ಮಾಡಿಸುತ್ತಾರೆ. ಮೈಸೂರ ಅರಮನೆ, ರಾಜಾಸ್ಥಾನದ ಅರಮನೆಗಳು ಇಟಲಿಯ ಅಮೃತಶಿಲೆಯಿಂದ ಸುಂದರಗೊಂಡಿವೆ.

ಈ ದೇಶಕ್ಕೆ ಏನು ಭೂತ ಹಿಡಿದಿದೆ?

ಕ್ಲೀಷೆ

ಹಳಸಲು ಮಾತು ಬಲ್ಲಿರಿ. "ಕನ್ನಡದ ಉದ್ದಾಮ ಸಾಹಿತಿ ಹೇಮಂತಗಾನ ಅವರು ತಮ್ಮ ಅಮೃತಹಸ್ತದಿಂದ ಮಾತಾಡಿ ಪಾದಪದ್ಮ ಗಳಿಂದ ಸಭೆಯನ್ನು ಪುನೀತಗೊಳಿಸಿದರು." ಹಳಸಲು ಮಾತಾಡುವವನಿಗೆ ಏನು ಹೇಳುತ್ತೇನೆಂಬುದು ಮುಖ್ಯವಲ್ಲ, ಯಾವ ಯಾವ ಒಳ್ಳೆಯ ಮಾತುಗಳಲ್ಲಿ ಏನನ್ನೂ ಹೇಳದೆ ಇರುತ್ತೇನೆ ಎಂಬುದು ಮುಖ್ಯ. ಪಟ್ಟದಿ ಮುಖ್ಯ ಕಾವ್ಯ ಮುಖ್ಯವಲ್ಲ, ಭಾಷಣ ಮುಖ್ಯ ವಸ್ತು ಮುಖ್ಯವಲ್ಲ, ಕತೆ ಬರೆದು ಪ್ರಕಟಿಸುವುದು ಮುಖ್ಯ, ಅದು ಜೀವಂತವೋ ಕ್ಲೀಷೆಯೋ ಎಂಬುದು ಅಷ್ಟು ಮುಖ್ಯವಲ್ಲ. ಮಾತು ಹಳಸಿ ಹೋಗುತ್ತವೆ. ಆದರೂ ಆಡುತ್ತಲೇ ಇರುತ್ತೇವೆ. ಮೊನ್ನೆ ಜನತಾಪಕ್ಷದವರು 'ಜನತಾ ದಳ' ಹುಟ್ಟುಹಾಕಿದ್ದು ನೀವು ನೋಡಿರಬಹುದು. ತವಮ್ಮ ಮಾತುಗಳನ್ನ ಜನ ಕೇಳುತ್ತಿದ್ದಾರೆ ಎಂದು ಭಾವಿಸಿ ಕೊರೆದರು. ಅಲ್ಲಿ ಕೇಳುತ್ತಿದ್ದವರು ಜನ ಕೂಡ ಆಗಿರಲಿಲ್ಲ, ಅವು ಕರೆದ ತಂದ ಕಿವಿಗಳು, ಕ್ಲೀಷೆಗಳಿಗೆ ಹೇಳಿ ಮಾಡಿಸಿದಂಥ ಮುಗ್ಧ ಜನರು. ಪತ್ರಿಕೆಗಳಲ್ಲಿ 'ಬೃಹತ್' ಸಭೆಯ ಫೋಟೋ, ಭಾಷಣ ಮಾಡವ 'ಧೀಮಂತ' ನಾಯಕರ ಫೋಟೋ ಗಳು. ಪುಟಗಟ್ಟಲೆ ಭಾಷಣ. ಅದನ್ನು ಜನ ಓದುತ್ತಾರೋ, ಇಲ್ಲವೋ ಎಂಬುದೂ ಪತ್ರಿಕೆಯವರಿಗೆ ಅಷ್ಟು ಮುಖ್ಯವಲ್ಲ.




ರಾಜಕೀಯ ಹೇಗೆ ಜನರಿಂದ ದೂರ ಹೋಗುತ್ತದೆ!

ಒಮ್ಮೆ ಜೆಪಿಯ ಮೂಲಕ ಮೋಸ ಮಾಡಿದ್ದಾಯಿತು. ಈಗ ವಿ.ಪಿ.ಯ ಮೂಲಕ. ಒಂದು ಚರ್ಚೆ ಆಯಿತು. 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಯ ಸಂಪಾದಕ ಗಿರಿಲಾಲ್ ಜೈನ್ ಒಂದು ಲೇಖನ ಬರೆದು ಭಾರತದಲ್ಲೀಗ ಭ್ರಷ್ಟತೆಯನ್ನು ಯಾರೂ ಕಿತ್ತುಹಾಕಲಾಗುವುದಿಲ್ಲ; ಆದ್ದರಿಂದ ಭ್ರಷ್ಟರೆಂಬ ಕಾರಣಕ್ಕೆ ಮತ್ತು ರಾಜೀವರನ್ನು ಜನ ತಿರಸ್ಕರಿಸುವುದಿಲ್ಲ, ಈ ದೇಶ ಬ್ರಾಹ್ಮಣರೂ ನವೀನ ಬ್ರಾಹ್ಮಣರೂ ಸೇರಿ ರೂಪಿತವಾದ ಕಾಂಗ್ರೆಗಳ ಕೈಯಲ್ಲಿ ಮಾತ್ರ ಸುರಕ್ಷಿತ ಎಂದು ಹೇಳಿದರು.

ಇದಕ್ಕೆ ಭಾಟಿಯಾ ಎಂಬುವರು ಉತ್ತರಿಸಿದರು. ಈ ದೇಶದ ಭ್ರಷ್ಟತೆಗೆ ಕಾರಣ, ರಾಜಕೀಯ ಗಾಂಧಿ ಪಂಥವನ್ನು ಅನುಸರಿಸದೆ ನೆಹರೂ ಅವರನ್ನು ಅನುಸರಿಸಿದ್ದು; ಮಧ್ಯಮ ವರ್ಗದ ಇಂಗ್ಲಿಷ್ ಕಲಿತ ಕೆಲವರ ಮೇಲೆ ಆಳುವ ಹೊಣೆ ಹೊರಿಸಿ ಗ್ರಾಮಗಳನ್ನೆಲ್ಲ ನಿರ್ಲಕ್ಷಿಸಿದ್ದು; ರಾಜಕೀಯ ಅಧಿಕಾರವೆನ್ನುವುದು ಲಂಚ ತೆಗೆದುಕೊಂಡು ಲೈಸೆನ್ಸ್, ಕೋಟಾ, ಕಾಂಟ್ರಾಕ್ಟ್ ನೀಡುವ ಶಕ್ತಿ ಮಾತ್ರ ಆದದ್ದು.

ಭಾಟಿಯಾ ಮಾತು ಸರಿ. ಆದರೆ ಭಾರತವನ್ನು ಬಲ್ಲವರಿಗೆ ಪರಿಸ್ಥಿತಿ ಇದಕ್ಕಿಂತಲೂ ಜಟಿಲ ವಾಗಿದೆ. ಕಳೆದ ನಲವತ್ತು ವರ್ಷ ಗಳಿಂದ, ರೈತ ಕುಟುಂಬಗಳಿಂದ ಬಂದ ನಾಯಕರೇ ರಾಜಧಾನಿಗಳನ್ನು ಸೇರಿ ರಾಜಕೀಯ ಸೂತ್ರ ಹಿಡಿದು ಗ್ರಾಮಗಳನ್ನು ನಿರ್ಲಕ್ಷಿಸಿದ್ದಾರೆ; ಲಂಚದ ನರಕ ಸೃಷ್ಟಿಸಿದ್ದಾರೆ. ಒಮ್ಮೆ ಹೈಸ್ಕೂಲು ದಾಟಿದ ಹುಡುಗ ತನ್ನ ಹಳ್ಳಿಯತ್ತ ತಿರುಗಿ ನೋಡುವುದಿಲ್ಲ; ಇಂಜಿನಿಯರ್, ಡಾಕ್ಟರ್ ಆದವನು ಆಳುವ ದುಷ್ಟ ಕೂಟದ ಭಾಗವಾಗುತ್ತಾನೆ. ಹಳೇ ಕಾಲದ ಪಾಳೆಗಾರಿಕೆ ಹಳ್ಳಿಯಲ್ಲಿ ತಳವೂರುತ್ತಲೇ ಈ ಪಾಳೆಗಾರಿಕೆ ಯೊಂದಿಗೇ ಪಟ್ಟಣದ ಪ್ರಬಲ ಪಾಳೆಗಾರಿಕೆ ಜನಸಾಮಾನ್ಯರನ್ನು ತುಳಿಯುತ್ತಿದೆ. ಇದಕ್ಕೆ ಪರಿಹಾರ ಕಂಡುಕೊಳ್ಳಬೇಕಾಗಿದೆ. ಗ್ರಾಮ ಉತ್ಪಾದನೆಯ, ವಾಸಕ್ಕೆ ನೆಮ್ಮದಿಯ, ಆರ್ಥಿಕ ಕೇಂದ್ರಗಳಾಗುವುದು ಒಂದು ಮಾರ್ಗ, ಇನ್ನೊಂದು, ಎಲ್ಲರಿಗೂ ಕನಿಷ್ಠ ಶಿಕ್ಷಣ, ತರಬೇತಿ. ಎಲ್ಲರೂ ಜಾಗೃತರಾದಾಗ ಶೋಷಣೆ ಕಡಿಮೆಯಾಗುತ್ತದೆ. ●



ಅಕ್ಟೋಬರ್ 30, 1988



ಕಿಬುಟ್ಸ್


ನೀವು 'ಕಿಬುಟ್ಸ್' ಬಗ್ಗೆ ಕೇಳಿದ್ದೀರಾ? ನಾವೆಲ್ಲ ನಮ್ಮ 'ಪ್ರಗತಿರಂಗ'ದ ಪ್ರಣಾಳಿಕೆಯಲ್ಲಿ ಗ್ರಾಮಕೇಂದ್ರ ಕುರಿತು ಚಿಂತಿಸುವಾಗ ಈ ಕಿಬುಟ್ಸ್ ಮನಸ್ಸಿನಲ್ಲಿತ್ತು. ಇದು ಇಸ್ರೇಲಿನ ಗ್ರಾಮಕೇಂದ್ರ. ಇದು ಅಲ್ಲಿ ಸಹಕಾರಿ ಕೃಷಿ ಕೇಂದ್ರ, ಕೈಗಾರಿಕಾ ಕೇಂದ್ರ. ಸುಮಾರು ಇನ್ನೂರು ಕುಟುಂಬಗಳು ತಮ್ಮ ಖಾಸಗಿ ವಸ್ತುಗಳನ್ನೆಲ್ಲ ಈ ಕೇಂದ್ರಕ್ಕೆ ಕೊಟ್ಟು ಅಲ್ಲಿ ವಾಸಿಸುತ್ತಾರೆ. ಅವರ ಊಟ, ವಸತಿ, ರಂಜನೆ, ಸೌಕರ್ಯವನ್ನೆಲ್ಲ ಕೇಂದ್ರ ನೋಡಿಕೊಳ್ಳುತ್ತದೆ. ಈ ಕೇಂದ್ರದ ಆಡಳಿತಗಾರರನ್ನು ಕೂಡ ಸದಸ್ಯರೇ ಆರಿಸುತ್ತಾರೆ. ಸರ್ಕಾರ ಸ್ವಲ್ಪ ಮೂಲಧನವನ್ನು ಕಿಬುಟ್ಸ್‌ಗೆ ಕೊಟ್ಟಿರುತ್ತದೆ. ಸಾಮೂಹಿಕ ಊಟ, ಅದು ಇಷ್ಟವಾಗದ ದಿನ ಪುಟ್ಟ ಮನೆಯಲ್ಲೇ ಅಡುಗೆ ಮಾಡಿಕೊಳ್ಳಬಹುದು. ಸಾಮೂಹಿಕ ದುಡಿಮೆ. ತರಬೇತಿಗೆ ತಕ್ಕ, ಆರೋಗ್ಯಕ್ಕೆ ತಕ್ಕಷ್ಟು ಮಾತ್ರ ದುಡಿಮೆ. ಎಲ್ಲದಕ್ಕೂ ಕೇಂದ್ರ ನೆರವಾಗುತ್ತದೆ. ಸ್ಕೂಲು, ಆಸ್ಪತ್ರೆ, ಕ್ರೀಡಾಂಗಣಗಳೆಲ್ಲ ಇವೆ.

ಜಗತ್ತಿನ ಕುತೂಹಲಿಗಳನೇಕರು ಬಂದು ಕಿಬುಟ್ಸ್‌ನಲ್ಲಿ ಇದ್ದು ಶ್ರಮದಾನ ಮಾಡುತ್ತಾರೆ; ಕಿಬುಟ್ಸ್ ನಡೆಯುತ್ತಿರುವ ರೀತಿಯನ್ನು ಮೆಚ್ಚಿ ಹೋಗುತ್ತಾರೆ.

ಕಿಬುಟ್ಸ್ ಎಷ್ಟು ಯಶಸ್ವಿ ಗೊತ್ತೆ? ಅಲ್ಲಿ ವಾಸಿಸುತ್ತಿರುವವರು ಇಸ್ರೇಲ್ ಜನಸಂಖ್ಯೆಯ ಶೇ. 3.5 ಭಾಗ ಮಾತ್ರ. ಆದರೆ ಈ ಕಿಬುಟ್ಸ್ ಸಹಕಾರಿಗಳು ಇಡೀ ಇಸ್ರೇಲ್‌ನ ಕೃಷಿ ಉತ್ಪನ್ನದ ಅರ್ಧಕ್ಕಿಂತ ಹೆಚ್ಚನ್ನು ಉತ್ಪಾದಿಸುತ್ತವೆ; ಕೈಗಾರಿಕೆಯಲ್ಲೂ ರಾಷ್ಟ್ರಕ್ಕೆ ಅಪಾರ ಕಾಣಿಕೆ ಸಲ್ಲಿಸುತ್ತವೆ. ಸೈನಿಕರನ್ನು ಒದಗಿಸುವುದರಲ್ಲೂ ಅಷ್ಟೆ. 1967ರ ಆರು ದಿನದ ನಿರ್ಣಾಯಕ ಯುದ್ಧದಲ್ಲಿ ಭಾಗವಹಿಸಿದ್ದವರಲ್ಲಿ ಕಾಲು ಭಾಗಕ್ಕಿಂತ ಹೆಚ್ಚು ಸೈನಿಕರು, ಆಫೀಸರ್‌ಗಳು ಕಿಬುಟ್ಸ್‌ನವರು.

ಇಲ್ಲಿ ಏಕೆ ಆಗುವುದಿಲ್ಲ?

ತುಂಟಾಟಕ್ಕೂ, ಚೆಲ್ಲಾಟಕ್ಕೂ, ಹುಡುಗಾಟಕ್ಕೂ ಇರುವ ವ್ಯತ್ಯಾಸವೇನು?




.ರಾ.ವಂಜುನಾಥ್, ದರೆ
ಕ್ಷಿತಾ ಮುಂದಿನ ತಿಂಗಳು ಸುರಕ್ಷಿತಾ'! ಪಡ್ಡೆ ಹೈಕಳು? ಬದಲ್ ಗಯಾ ದುನಿಯಾ'!

ನಿಲ್ ಕುಮಾರ್ ಹೋಟೆ. ದೇವದುರ್ಗ
ರ್ಕಾರವೇ ಕೋ-ಜಾ ಆಗಿರುವಾಗ ಕ್ಷ್ಮಣರೇಖೆಯನ್ನು ಎಳೆದವರ್ಯಾರು?
ಕರ್ನಾಟಕದ ಅಧಿಕೃತ ಪ್ರಜೆಗಳು.

ರ್. ವರಲಕ್ಷ್ಮಿ ನಾ. ರೆಡ್ಡಿ ಾಬರ್ಟ್‌ಸನ್‌ಪೇಟೆ
ಂದಿನ ಸಿನಿಮಾಗಳಲ್ಲಿ ಾಯಕ-ನಾಯಕಿಯರು ಮನಬಿಚ್ಚಿ ಾತಾಡುತ್ತಿದ್ದರು, ಆದರೆ ಈಗ?
'ಚೆಲುವೋದ'ಕ್ಕೂ, 'ಮುಂಗಾರು ಮಳೆ'ಗೂ ಯಾವ ್ತ್ಯಾಸ ಯೋಚಿಸಿ.

ಂಬುಜಾ. ಶೋರಾಪೂರ
ೌವ್ವನದ ಪ್ರೀತಿಗೂ, ವೃದ್ಧಾಪ್ಯದ ಪ್ರೀತಿಗೂ ಇರುವ ್ತ್ಯಾಸ?
ಹೂವಿಗೂ ಚಟ್ಟಿಗೂ ಇರುವ ಸಂಬಂಧಕ್ಕೂ, ಣ್ಣಿಗೂ ಪಾಲಿಗೂ ಇರುವ ಸಂಬಂದಕ್ಕೂ ರುವಷ್ಟೇ ವ್ಯತ್ಯಾಸ.



ಪಿ.ಎನ್. ಶ್ರೀವತ್ಸ. ಬೆಂಗಳೂರು
ನೈಟಿ ತೊಡುವ ಹೆಣ್ಣು ಒಳ ಉಡುಪು ಧರಿಸಲೇಬೇಕೆ?
* ಇಲ್ಲಾಂದ್ರೆ ಅದು 'ನ್ಯಾಷನಲ್ ಡ್ರೆಸ್' ಆಗುತ್ತಿತ್ತೇ?

ಉಪೇಂದ್ರ ಬೇನಾಳ್. ಆಲಮಟ್ಟಿ ಡ್ಯಾಂ
ಹಳ್ಳಿ ವಾಸ್ತವ್ಯ ಮಾಡಿ ಊರ ಉದ್ಧಾರ ಮಾಡೋಕೆ ಕುಮಾರಸ್ವಾಮಿ ಏನು ಮಹಾತ್ಮ ಗಾಂಧೀನಾ...?
* ಸತ್ಯಾಗ್ರಹ ಎಂಬ ಪದದಲ್ಲಿ 'ಗ್ರಹ'ವನ್ನು 'ಗೃಹ' ಅಂದುಕೊಂಡಿರುವವರ ನಗೆಪಾಟಲು ಇದು.

ಅಕ್ಷಯ ಕುಮಾರ್. ಸುರಪೂರ
ಬೆಕ್ಕು ಅಡ್ಡ ಬಂದರೆ ಅಪಶಕುನ! ಹುಡುಗಿ ಎದುರಾದರೆ?
* ನಿಮ್ಮ ದುರಾದೃಷ್ಟ ಎಂದು ಉತ್ತರಿಸಲು ನಮ್ಮ ಸಂಪಾದಕಿಯ ಅಭ್ಯಂತರವಿದೆ.

ಮಂಚಾಲಿ ಗುರುರಾಜಚಾರ್. ಬಳ್ಳಾರಿ
ಕುಮಾರಸ್ವಾಮಿಯವರು ಮನೆ ಊಟ, ಹಳ್ಳಿ ಊಟ, ರೆಸಾರ್ಟ್ ಊಟ ಮುಗಿಸಿದ್ದಾಯ್ತು, ಡಾಬಾ ಊಟ ಯಾವಾಗ?
* ನಟ ರಾಧಿಕಾಳ ಕೃಪೆ ಮತ್ತು ಅನಿತಕ್ಕನ ತಾಳ್ಮೆ ಮಿತಿಮೀರಿದಾಗ?!

ಎ.ಕೆ. ಪಟ್ಟಾಭಿ. ಬೆಂಗಳೂರು
ರಾಜಕಾರಣಿಗಳ ಕುರ್ಚಿಗಳಿಗೆ ಬಳಸಿರುವ ಪ್ರಭಲವಾದ 'ಅಂಟು' ಯಾವುದು?
* 'ಫೆವಿಕಾಲ್'ನನ್ನೂ ಮೀರಿಸುವ 'ನಂಟು'!

ಕೆ. ಶ್ರೀನಿವಾಸ್. ಮಂಡ್ಯ
ಪ್ರೇಮಿಗಳ ದಿನದಂದು ಯಡ್ಡಿ ಶೋಭಕ್ಕನಿಗೆ ಏನು ಗಿಫ್ಟ್ ಕೊಟ್ಟಿರಬಹುದು?
* ನಾನು ಮು.ಮ ಆದಾಗ ನೀನು ಮ ಎಂಬ ಕನ್ಸೆ!

ಶಿವರಾಜ ಕೆ.ವಿಭೂತಿ. ಹರಿಹರ
ನಮ್ಮ ಶ್ರೀಗಳಿಗೆ ಕಪಿಚೇಷ್ಟೆ ಬರಬರುತ್ತಾ ಹೆಚ್ಚಾಗಲು ಕಾರಣವೇನಿರಬಹುದು?
* 'ಪಿತ್ಥ' ವ್ಯಾಮೋಹ.

ದಿ.ಎಲ್. ಶ್ವೇತಾ. ಹರಪನಹಳ್ಳಿ
ಸುವರ್ಣ ಕರ್ನಾಟಕ ಆಚರಣೆಯಿಂದ ಕರ್ನಾಟಕ ಅಭಿವೃದ್ಧಿ ಆಯಿತೆ?
* ರೈತರ ಆತ್ಮಹತ್ಯೆಗಳ ಸಂಖ್ಯೆಯಲ್ಲಿ ಅಭಿವೃದ್ಧಿಯಂತೂ ಆಯಿತು.

ಬಸವರಾಜ್ ಬೆಸ್ತರ್. ಗುಲ್ಬರ್ಗಾ
ಅಲ್ರೀ ಈ ದೇವೇಗೌಡ ಸತ್ ಮೇಲೆ ಏನು ಹೊತ್ಕೊಂಡ್ ಹೋಗ್ತಾನ್ರಿ?
* ಆರಡಿ, ಮೂರಡಿ TMCಯನ್ನಂತೂ ಅಲ್ಲ.

ಬಹುಮಾನಿತ ಪ್ರಶ್ನೆ

.ವಿ.ಶಿವಕುಮಾರ್, ಕಾಳಿಹುಂಡಿ
ತುಂಟಾಟಕ್ಕೂ, ಚೆಲ್ಲಾಟಕ್ಕೂ, ಹುಡುಗಾಟಕ್ಕೂ ಇರುವ ವ್ಯತ್ಯಾಸವೇನು?
* 10-16 ತುಂಟಾಟ, 16-26 ಚೆಲ್ಲಾಟ, 60-80 ಹುಡುಗಾಟ.

ಛೀ ತುಂಟಿ!

ಬೀಚ್ ನೀರು ನೋಡಿದ ನೀರೆ ಉತ್ಸಾಹದಿಂದ ಬಟ್ಟೆ ಕಳಚಿ ನೀರಿಗೆ ಮೈ ಚೆಲ್ಲಲು ಓಡತೊಡಗಿದಳು.

ಅಲ್ಲೇ ಇದ್ದ ಪೊಲೀಸ್, 'ಮೇಡಂ ಇಲ್ಲಿ ಈಜಾಡುವಂತಿಲ್ಲ, ನಿಷೇಧವಿದೆ' ಅಂದ.

'ಬಟ್ಟೆ ಬಿಚ್ಚುವ ಮೊದಲೇ ಯಾಕೆ ಹೇಳಲಿಲ್ಲ?' ಎಂದಳು ನೀರೆ.

'ಈಜಾಟಕ್ಕಷ್ಟೇ ನಿಷೇಧ, ಬಟ್ಟೆ ಬಿಚ್ಚುವುದಕ್ಕಲ್ಲ' ಅಂದ ಪೊಲೀಸ್



ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ವಾರದ ಪ್ರಶ್ನೆ:

ದೇವು ಸೋನಿಯಾ ಮೇಡಂಅನ್ನು ಭೇಟಿ ಆಗಿದ್ದು ಯಾಕೆ?

ಫೆಬ್ರವರಿ 7ರ ಸಂಚಿಕೆಯ ನಮ್ಮ ಪ್ರಶ್ನೆ: ಅಂಬಿ ಕೊಟ್ಟಿದ್ದು ರಾಜೀನಾಮೆಯೋ ಅಥವಾ....?

ನಿಮ್ಮ ಉತ್ತರ: ರಾಜ್ಯದ ಎಲ್ಲಾ ಎಂ.ಪಿ.ಗಳೂ ಲೋಕಸಭೆಯಲ್ಲಿ ಇದ್ದೂ ಸತ್ತಂತಿರುವಾಗ ಅಂಬಿಯ ರಾಜೀನಾಮೆಯೂ ಹಾಗೆಯೇ!

ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಪಿ.ಎನ್. ಶ್ರೀವತ್ಸ, ಬೆಂಗಳೂರು

ಲಂಕೇಶ್

ಜಯನಗರದ ಸ್ಲಂರಾಣಿ

ಇವಳ ಹೆಸರೇ ಚಾಮುಂಡಿ!

ರೊಟ್ಟಿ ಮತ್ತು ಗಾಂಜಾದ ಜೋರಾಗಿ ಮಿಕ್ಕಿಲ್ಲದವರಲ್ಲೂ ಈಕೆ ಸಾರಾಯಿರಾಣಿ ಮಾರಿಮುತ್ತುವಿನ ಅಕ್ಕ. ಎಂತೆಂಥಾ ರೌಡಿಗಳೇ ನಾಚುವಂತೆ ಖುದ್ದು ರಸ್ತೆಗಿಳಿದು ಬಡಿದಾಡುತ್ತಾಳೆ. ಬಾಯಿಬಿಟ್ಟರೆಂದರೆ ಬೈಗುಳದ ದಿಕ್ಸನರಿಯೇ ಬೇಡ. ತಾನೇ ಕಾರೆತ್ತಿಕೊಂಡು ಬಂದು ಹುಡುಗರನ್ನು ಎತ್ತಾಕಿಕೊಂಡು ಹೋಗುತ್ತಾಳೆ. ತನ್ನ ಮನೆಯಲ್ಲೇ ಕೂಡಿಟ್ಟುಕೊಳ್ಳುತ್ತಾಳೆ. ಕೇಳಿದಷ್ಟು ದುಡ್ಡು ಕೊಟ್ಟ ನಂತರವೇ ಬಿಟ್ಟು ಕಳಿಸುತ್ತಾಳೆ. ಇನ್ನು ಪೊಲೀಸರೇನಾದ್ರೂ 'ಬಾ ಸಾಹೇಬ್ರು ಕರೀತವ್ರೆ' ಅಂತ ಠಾಣೆಗೆ ಬರಹೇಳಿದರೆಂದರೆ 'ಯಾವನೋ ಅವ್ನು ಹೋಗಾ ಇನ್ಸ್‌ಪೆಕ್ಟ್ರು, ಅವನ್ ಮಗನ್ನ.... ಬದ್ದೀನಿ!' ಅನ್ನುತ್ತಾಳೆ ಸೈನ್ಸ್ ಬ್ಲಾಕ್ ಚಾಮುಂಡಿ.

ಈಕೆಯ ಹೆಸರೇ ಚಾಮುಂಡಿ. ಈಕೆಗೊಬ್ಬಳು ಘಟವಾಣಿ ತಂಗಿಯಿದ್ದಾಳೆ. ಆಕೆಯ ಹೆಸರು ಕಾಳಿ! ಈಕೆಯ ಅಕ್ಕ ಕೂಡ ಲೇಡಿ ರೌಡಿಯೇ. ಇವಳ ಹೆಸರು ಕರುಮಾರಿ ಉರ್ಫ್ ಭಾಗ್ಯ!

ಈ ಚಾಮುಂಡಿ, ಕಾಳಿ ಮತ್ತು ಮಾರಿ ಸಹೋದರಿಯರ ಹಾವಳಿ, ಅಟ್ಟಹಾಸಗಳಿಗೆ ರೋಸತ್ತ ಜಯನಗರ ಒಂಬತ್ತನೇ ಬ್ಲಾಕಿನ ಕಾರ್ಪೊರೇಷನ್ ಕಾಲನಿಯ ನಿರ್ಗತಿಕ ತಮಿಳರು ಸದ್ಯ ಈಕೆಯ ವಿರುದ್ಧ ಬೀದಿಗಿಳಿದು ಪ್ರತಿಭಟಿಸುತ್ತಿರುವುದು ಒಂದೆಡೆಯಾದರೆ ಮತ್ತೊಂದೆಡೆ ಬಿಜೆಪಿ ನಾಯಕ ಅನಂತ್‌ಕುಮಾರ್ 'ಅವಳನ್ನೇನಾದ್ರೂ ಮುಟ್ಟಿದ್ರೆ ಹುಷಾರ್' ಎಂದು ಪೊಲೀಸರನ್ನು ಪೀಡಿಸುತ್ತಿದ್ದಾರೆ.

ಹಿಂದೆಲ್ಲಾ ಜೆಡಿಎಸ್-ಕಾಂಗ್ರೆಸ್‌ಗಳಲ್ಲಷ್ಟೇ ಕಂಡುಬರುತ್ತಿದ್ದ ಸ್ಲಂ ರಾಣಿಯರು, ಸಾರಾಯಿರಾಣಿಯರೆಲ್ಲ ಈಗ ಬಿಜೆಪಿಯಲ್ಲಿ ಕಂಗೊಳಿಸುತ್ತಿದ್ದಾರೆಂದರೆ, ಅದು ಸಂಘ ಪರಿವಾರದ ಸೌಭಾಗ್ಯವಲ್ಲದೇ ಮತ್ತೇನು?

ಅಷ್ಟಕ್ಕೂ ಈ ಚಾಮುಂಡಿ ಯಾರು ಗೊತ್ತೆ? ಬಿಜೆಪಿ ಸ್ಲಂ ಮೋರ್ಚಾದ ಬೆಂಗಳೂರು ನಗರ ಘಟಕದ ಅಧ್ಯಕ್ಷೆ. ಈಕೆಯನ್ನು ಬಿಜೆಪಿಗೆ ಕರೆತಂದದ್ದು ಜಯನಗರದ ಮಾಜಿ ಬಿಜೆಪಿ ಕೌನ್ಸಿಲರ್ ರಾಮಮೂರ್ತಿ. ಮೂಲತಃ ತಮಿಳುನಾಡಿನ ತಿರುವಣ್ಣಾಮಲೈನವಳಾದ ಈಕೆಯ ಗಂಡ ಲಕ್ಷ್ಮಣನ್ ಇಲ್ಲಿಗೆ ಹದಿನೈದು ವರ್ಷದ ಹಿಂದೆಯೇ ತೀರಿಕೊಂಡ. ಆ ಹೊತ್ತಿಗೆ ಎಲ್ಲೆಲ್ಲೋ ಜೋಪಡಿ



ಕರಗ ಹೊರುವ ಮಗನೊಂದಿಗೆ ರೌಡಿ ಪಡೆ

ಹಾಕಿಕೊಂಡಿದ್ದ ತಮಿಳು ಕೂಲಿಗಳಿಗೆಂದು ಜಯನಗರ ಒಂಬತ್ತನೇ ಬ್ಲಾಕಿನಲ್ಲಿದ್ದ ಖಾಲಿ ಜಾಗವನ್ನು ಸರ್ಕಾರ ಬಿಟ್ಟುಕೊಟ್ಟಿತು. ಚಾಮುಂಡಿ ಮತ್ತು ಆಕೆಯ ಘಟವಾಣಿ ಸಹೋದರಿಯರು ಇಲ್ಲೇ ಜೋಪಡಿ ಕಟ್ಟಿಕೊಂಡರು.

ಹೊಟ್ಟೆಪಾಡಿಗೆಂದು ಮೊದಮೊದಲು ಗಾಂಜಾ ಮಾರುತ್ತಿದ್ದ ಚಾಮುಂಡಿ ಕ್ರಮೇಣ ಕಳ್ಳಭಟ್ಟಿ ದಂಧೆಗಿಳಿದಳು. ಕಾರ್ಪೊರೇಷನ್ ಕಾಲನಿಯೇ ಆಕೆಯ ಸಾರಾಯಿ ಸಾಮ್ರಾಜ್ಯವಾಯಿತು. ಬಂದ ದುಡ್ಡಿನಲ್ಲೇ ಗಂಡ ಸೆಂದಿಲ್ ಉರ್ಫ್ ಲಕ್ಷ್ಮಣನ್ ತಮಿಳು ಕೂಲಿಗಳಿಗೆ ಬಡ್ಡಿಗೆ ಬಿಡುತ್ತಿದ್ದ. ವಸೂಲಿಗೆಂದು ರೆಡಿಯಾದವನು ಚಾಮುಂಡಿಯ ಅಕ್ಕನ ಮಗ ಗೋಪಾಲ. ಈತ ತಿಲಕ್‌ನಗರ ಪೊಲೀಸ್ ಠಾಣೆಯ ರೌಡಿ ಶೀಟರ್!

ಟ್ಯಾನರಿ ರೋಡಿನ ಮಾರಿಮುತ್ತು, ಅಂಜನಪ್ಪ ಗಾರ್ಡನ್ನಿನ ತಮಿಳುಕುದಿ, ಭಕ್ತಿ ಗಾರ್ಡನ್ನಿನ ಮಾಲಾ ಮುಂತಾದ ಸಾರಾಯಿ ರಾಣಿಯರು ರೌಡಿಜಮ್ಮು, ಹೊಡೆದಾಟ, ಪೊಲೀಸು ಇತ್ಯಾದಿಗಳಲ್ಲೇ ಏಗುತ್ತಿದ್ದರೆ ಈ ಚಾಮುಂಡಿ ಇದೆಲ್ಲಕ್ಕಿಂತಲೂ ಹೈಟೆಕ್ ಹಾದಿಯೊಂದನ್ನು ಕಂಡುಕೊಂಡಳು. ಅದೇ ಅಂಗಾಳ ಪರಮೇಶ್ವರಿ!




ಸ್ಲಂ ರಾಣಿ ಚಾಮುಂಡಿ

ಯಾವತ್ತು ಒಂದರ ಮೇಲೊಂದು ಕಳ್ಳಭಟ್ಟಿ, ಗಾಂಜಾ ಕೇಸುಗಳು ಬೀಳತೊಡಗಿದವೋ ಚಾಮುಂಡಿಯ ಗೆಟಪ್ಪೇ ಬದಲಾಯಿತು. ಮೊದಮೊದಲು ಕೆಂಪು ಸೀರೆ ಉಟ್ಟುಕೊಂಡು ಮೇಲ್ ಮರವತ್ತೂರು ಆದಿ ಪರಾಶಕ್ತಿಯ ವ್ರತ ಹಿಡಿದಿವ್ನಿ ಎಂದು ಪೊಲೀಸರನ್ನು ನುಬಿಸಿದಳು. ಇದೇ ಕಾರ್ಪೊರೇಷನ್ ಕಾಲನಿಯ 28 ನೇ 'ಎ' ಕ್ರಾಸಿನಲ್ಲಿ ಆಗ ಪಾಲಿಕೆಯು ಶೌಚಾಲಯವೊಂದನ್ನು ಕಟ್ಟಿಕೊಟ್ಟಿತ್ತು. 40x60 ಸೈಟಿನಲ್ಲಿದ್ದ ಆ ಶೌಚಾಲಯ ಇಲ್ಲಿನ ಬಹುತೇಕ ಕೂಲಿಗಳ ನಿತ್ಯಕರ್ಮಗಳನ್ನು ಪೂರೈಸುತ್ತಿದ್ದರೆ, ಚಾಮುಂಡಿ ಇದೇ ಶೌಚಾಲಯವನ್ನು ನೆಲಸಮಗೊಳಿಸಿ ಅಲ್ಲಿ ಅಂಗಾಳ ಪರಮೇಶ್ವರಿಯ ಫೋಟೋ ಇಟ್ಟಳು. ಕ್ರಮೇಣ ಶೌಚಾಲಯನ್ನೇ ತಮಿಳು ದೇವತೆ ಓಂಶಕ್ತಿ ಅಂಗಾಳಪರಮೇಶ್ವರಿ ದೇವಸ್ಥಾನವನ್ನಾಗಿ ಬದಲಾಯಿಸಿಬಿಟ್ಟಳು. ಒಂದೆಡೆ ಗಾಂಜಾ, ಇನ್ನೊಂದೆಡೆ ಕಳ್ಳಭಟ್ಟಿ, ಶೌಚಾಲಯದಲ್ಲಿ ಅಂಗಾಳ ಪರಮೇಶ್ವರಿ!


ಇಷ್ಟಾಗಿದ್ದೇ ತಡ ಬಡ್ಡಿವಸೂಲಿಗಿಳಿದಿದ್ದ ಆಕೆಯ ಗಂಡ ಲಕ್ಷ್ಮಣನ್ ನಿಗೂಢವಾಗಿ ಸತ್ತು ಹೋದ. ಅಮ್ಮನನ್ನು ಟಾಯ್ಲೆಟ್ಟಿನಲ್ಲಿ ಮಡಗಿದ್ದಕ್ಕೇ ಗಂಡ ಸತ್ತ ಅಂತ ಜನ ಮಾತಾಡಿಕೊಂಡರೆ ಆದಕ್ಕೆ ಚಾಮುಂಡಿ ಬೇರೆಯದೇ ಕತೆಯೊಂದನ್ನು ಹೆಣೆದುಬಿಟ್ಟಳು. ತಾನೇ ಅಂಗಾಳಪರಮೇಶ್ವರಿ, ತನ್ನ ಮೇಲೆ ಆಗಾಗ ಅಂಗಾಳ ಪರಮೇಶ್ವರಿ ಅಮ್ಮ ಬರ್ತಾಳೆ ಅದಕ್ಕೆ ಅನುಕೂಲವಾಗಲಿ ಅಂತಲೇ ಗಂಡನನ್ನು ಅಮ್ಮನೇ ಕರಕೊಂಡಿದ್ದಾಳೆ ಎಂದು ಮತ್ತೊಂದು ಕತೆ ಹೊಸೆದಳು.

ಶೌಚಾಲಯವಿದ್ದಲ್ಲಿ ದಿವಿನಾಗಿಯೇ ದೇವಸ್ಥಾನವೆದ್ದಿತು. ಅಕ್ಕಪಕ್ಕದ ರಾಗಿಗುಡ್ಡ ಸ್ಲಮ್ಮು, ಇಂದಿರಾಗಾಂಧಿ ಸ್ಲಮ್ಮು, ಭೈರಸಂದ್ರ ಝೋಪಡಿ, ಕೆ.ಎಸ್. ಗಾರ್ಡನ್, ಪುಟ್ಟಯ್ಯನಪಾಳ್ಯ, ಗೋರಿಪಾಳ್ಯ, ಮಾರೇನಹಳ್ಳಿ, ಗುರಪ್ಪನಪಾಳ್ಯ, ನಕ್ಕಳ್ ಬಂಡ್. ಕಲಾಸಿಪಾಳ್ಯ, ಯಲಚೇನಹಳ್ಳಿ ಇತ್ಯಾದಿ ಸ್ಲಮ್ಮುಗಳಿಂದ ಏನೇನೋ ವ್ರತ ಹೊತ್ತು ತಮಿಳು ಹೆಂಗಸರು ಬರಲಾರಂಭಿಸಿದರು. ವ್ಯಾಪಾರ ಜೋರಾಯಿತು.



ಶಕ್ತಿವೇಲು

ಚಾಮುಂಡಿಯ ಗ್ಯಾಂಗೂ ಬಲಿಯಿತು. ಆತನಕ ಆಕೆಗೆ ಗಾಡ್‌ಫಾದರ್ ಅಂತಿದ್ದದ್ದು ಜಯನಗರದ ಶಾಸಕ ರಾಮಲಿಂಗಾರೆಡ್ಡಿ. ಕಾಂಗ್ರೆಸ್ ನಾಯಕಿ ಎಂದುಕೊಂಡೇ ಓಡಾಡಿಕೊಂಡಿದ್ದ ಚಾಮುಂಡಿ ಪ್ರತಿ ಶಿವರಾತ್ರಿ ಬಂತೆಂದರೆ ವಾರಗಟ್ಟಲೇ ಜಾತ್ರೆ ಶುರು ಹಚ್ಚಿಕೊಂಡಳು. ಇದು ಸ್ಲಂ ಹೆಂಗಸರೇ ನಡೆಸುವ 'ಕೆಂಪು ಸೀರೆ' ವ್ರತ. ಅದಕ್ಕೆಂದು ಜಯನಗರ ಒಂಬತ್ತನೇ ಬಡಾವಣೆಯ ಪ್ರತಿ ಅಂಗಡಿ, ಹೋಟೆಲು, ಬಾರು, ವೈನ್ ಸ್ಟೋರುಗಳಿಂದ ವರ್ಷಂಪ್ರತಿ ಎತ್ತುವಳಿ ಮಾಡುವುದು ಈಕೆಯ ಹಳೇ ದಂಧೆ. ಅದು ಮಾಮೂಲಿಯ ಚಂದಾ ವಸೂಲಿಯಾಗಿದ್ದರೆ ಆ ಮಾತು ಬೇರೆ. ಯಕಶ್ಚಿತ್ ಫುಟ್‌ಪಾತ್ ಗಾಡಿಯವನೂ ಹತ್ತೋ ಇಪ್ಪತ್ತೋ ಸಾವಿರ ಕಕ್ಕಲೇಬೇಕು. ಹಾಗೊಮ್ಮೆ ಕೊಡದೇ ಹೋದರೆ ಕತೆಯೇ ಬೇರೆ.






ಒದೆತಿಂದ ಆರ್ಮುಗಂ ಮತ್ತು ಆತನ ಪತ್ನಿ


ಅದಕ್ಕೆಂದೇ ಚಾಮುಂಡಿಯ ಪುಡಿ ರೌಡಿ ಗ್ಯಾಂಗೊಂದು ಅನೇಕ ವರ್ಷಗಳಿಂದ ಚಾಲ್ತಿಯಲ್ಲಿದೆ. ತನ್ನ ಅಕ್ಕನ ಮಗ ಗೋಪಾಲ, ವಿಜಿ, ಲಿಂಗ ಮತ್ತು ತನ್ನ ಸ್ವಂತ ಮಗ ಮುತ್ತು ಇತ್ಯಾದಿಗಳನ್ನು ಛೂಬಿಟ್ಟು ಕಾಟ ಕೊಡುತ್ತಾಳೆ. ಈ ಪೈಕಿ ಗೋಪಾಲ ತಿಲಕ್ ನಗರದ ರೌಡಿ ಶೀಟರಾದರೆ ವಿಜಿ, ಲಿಂಗ ಮುಂತಾದವರ ಮೇಲೆ ಅರ್ಧರ್ಧ ಡಜನ್ ಕ್ರಿಮಿನಲ್ ಕೇಸುಗಳಿವೆ. ಇಷ್ಟು ವರ್ಷಗಳ ಕಾಲ ಕಾರ್ಪೊರೇಷನ್ ಕಾಲನಿಯ ತಮಿಳರು ಹೇಗೋ ಸಹಿಸಿಕೊಂಡು ಅಷ್ಟಿಷ್ಟು ರೋಲ್‌ಕಾಲ್ ಕೊಟ್ಟುಕೊಂಡೇ ಬಂದಿದ್ದಾರೆ.

ಆದರೆ ಈ ಬಾರಿಯ ಶಿವರಾತ್ರಿಗೆ ಚಾಮುಂಡಿಯ ಧನದಾಹ ವಿಪರೀತಕ್ಕೇರಿದೆ. ಈ ಹಿಂದೆ ಎರಡೋ ಮೂರೋ ಸಾವಿರ ಕೇಳುತ್ತಿದ್ದವಳು ಇದ್ದಕ್ಕಿದ್ದ ಹಾಗೇ ಹತ್ತು ಸಾವಿರ ಕೊಡು, ಇಪ್ಪತ್ತು ಸಾವಿರ ಕೊಡು ಎಂದು ಕಂಡಕಂಡವರನ್ನು ಪೀಡಿಸಿದ್ದಾಳೆ. ಈ ಪೈಕಿ ಇದೇ ಕಾರ್ಪೊರೇಷನ್ ಕಾಲನಿಯ ಆರ್ಮುಗಂ ಎಂಬ ಫುಟ್‌ಪಾತ್ ತರಕಾರಿ ವ್ಯಾಪಾರಿಯನ್ನು ಮನೆಗೆ ಕರೆಸಿಕೊಂಡು 'ನಿನ್ನ ಮಗ ನಮ್ಮ ಕಡೆ ಹುಡುಗಿಯನ್ನು ಲವ್ ಮಾಡಿ ಮೋಸ ಮಾಡಿದ್ದಾನೆ. ಅದಕ್ಕೆ ಅಮ್ಮನಿಗೆ ಮೂರು ಲಕ್ಷ ದಂಡ ಕಟ್ಟು' ಎಂದಿದ್ದಾಳೆ. ಏನೋ ಸಬೂಬು ಹೇಳಿ ಆರ್ಮುಗಂ ಬಚಾವಾಗಿ ಬಂದರೆ ಮರುದಿನವೇ ಆತನ ಮಗ ಸುರೇಶನನ್ನು ಚಾಮುಂಡಿಯೇ ಕಾರೆತ್ತಿಕೊಂಡು ಬಂದು ಎತ್ತೊಯ್ದಳು. ಕಿಡ್ನಾಪ್ ಮಾಡಿದ ಹುಡುಗನನ್ನು ತನ್ನ ಅಕ್ಕ ಭಾಗ್ಯಳ ಮನೆಯಲ್ಲಿಟ್ಟು ಕನಿಷ್ಠ ಎರಡು ಲಕ್ಷವನ್ನಾದರೂ ಕೊಡು ಎಂದು ಪೀಡಿಸಿದ್ದಾಳೆ. ಕೊನೆಗೂ ಯಾರ್‍ಯಾರನ್ನೋ ಹಿಡಿದು ಚೂರುಪಾರು ಕಾಸು ಕೊಟ್ಟು ಆರ್ಮುಗಂ ಮಗನನ್ನು ಬಿಡಿಸಿಕೊಳ್ಳುವ ಹೊತ್ತಿಗೆ ಎರಡು ದಿನಗಳಾಗಿದ್ದವು.

ಇಷ್ಟಾಗ್ಯೂ ಚಾಮುಂಡಿಯ ತಾಕತ್ತಿನ ಮುಂದೆ ಪೊಲೀಸ್ ಕಂಪ್ಲೇಂಟ್ ಕೊಡುವ ಧೈರ್ಯವಾದರೂ ಆತನಿಗೆಲ್ಲಿತ್ತು? ಆರ್ಮುಗಂ ನಂತರ ಚಾಮುಂಡಿಯ ಕಣ್ಣುಬಿದ್ದದ್ದು ಶಕ್ತಿವೇಲು ಎಂಬ ಮತ್ತೊಬ್ಬ ಫುಟ್‌ಪಾತ್ ಗಾಡಿಯವನ ಮೇಲೆ. ಈ ಶಕ್ತಿವೇಲು ಇದೇ ಕಾರ್ಪೊರೇಷನ್ ಕಾಲೋನಿಯಲ್ಲಿ ಇಪ್ಪತ್ತಕ್ಕೂ ಹೆಚ್ಚು ತರಕಾರಿ ಗಾಡಿಗಳನ್ನು ಬಾಡಿಗೆಗೆ ಬಿಟ್ಟಿದ್ದಾನೆ. ಈತನ ತಂದೆ ರಂಗನಾಥ್ ಆಟೋ ಚಾಲಕ. ಗೋಪಾಲನ ರೌಡಿ ಗ್ಯಾಂಗ್ ಬಿಟ್ಟೇ ಇಬ್ಬರನ್ನೂ ತನ್ನ ಮನೆಗೆ ಕರೆಸಿಕೊಂಡ ಚಾಮುಂಡಿ 'ತಮಿಳು ನಾಡಿನಿಂದ ಗತಿಯಿಲ್ಲದೇ ಬಂದ ನೀವು ಇಷ್ಟೆಲ್ಲಾ ಸಂಪಾದನೆ ಮಾಡಿದ್ದೀರಲ್ಲ; ಅಮ್ಮಂಗೆ ಐವತ್ತು ಸಾವಿರ ಮಡಗಿ' ಎಂದಿದ್ದಾಳೆ. ತಂದೆ ಮಗ ಇಬ್ಬರೂ ಮುಖಾಮುಖಿ ನೋಡಿದ್ದಕ್ಕೆ ಖಾಲಿ ಪೇಪರ್ ಮೇಲೆ ಇಬ್ಬರಿಂದಲೂ ಸಹಿ ಪಡೆದಿದ್ದಾಳೆ. ಮರುದಿನ ಮತ್ತೆ ಕರೆಸಿಕೊಂಡು ಒಂದು ಲಕ್ಷ ಕೊಡಿ ಎಂದು ಗದರಿದ್ದಾಳೆ.

ಪಕ್ಕದ ಇಂದಿರಾಗಾಂಧಿ ಸ್ಲಮ್ಮಿನ ಮತ್ತೊಬ್ಬ ಶಕ್ತಿವೇಲು ಎಂಬಾತ ತರಕಾರಿ ಅಂಗಡಿ ಇಟ್ಟುಕೊಂಡಿದ್ದಾನೆಂದು ಗೊತ್ತಾಗಿದ್ದೇ ತಡ ಚಾಮುಂಡಿಯ ಪಟಾಲಂ ಆತನ ಬೈಕ್ ಕಿತ್ತುಕೊಂಡು ಹದಿನೈದು ಸಾವಿರ ಕಿತ್ತಿದೆ. ಸಾಲದ್ದಕ್ಕೆ ಇನ್ನೂ ಹತ್ತು ಸಾವಿರ ಕೊಟ್ಟರೇನೇ ಬೈಕ್ ಕೊಡೋದು ಎಂದು ಗೋಪಾಲ ಹೂಂಕರಿಸಿದ್ದಾನೆ. ಯಾವುದೇ ತಪ್ಪಿಲ್ಲದೇ ವಿನಾಕಾರಣ ಹತ್ತು ಸಾವಿರ ಕೊಡು, ಲಕ್ಷ ಕೊಡು ಎಂದರೆ ಯಾರು ತಾನೇ ಕೊಡುತ್ತಾರೆ? ಅಷ್ಟಕ್ಕೂ ಕೊಡಲು ಶಕ್ತಿ ಇದ್ದರೆ ತಾನೆ? ಆರ್ಮುಗಂ, ಶಕ್ತಿವೇಲ್ ಮತ್ತೊಬ್ಬ ಶಕ್ತಿವೇಲುಗೆ ಏನೂ ತೋಚದಂತಾಗಿ ದಲಿತ ಕ್ರಿಯಾ ಸಮಿತಿಯ ಮೊರೆ ಹೋಗಿದ್ದಾರೆ.





ಸತ್ತಿವೇಲ್ ಮತ್ತು ಆತನ ತಂದೆ ರಂಗನಾಥ್

ದಲಿತ ಕ್ರಿಯಾ ಸಮಿತಿಯ ಬೆಂಬಲ ಸಿಕ್ಕಿದ್ದೇ ಚಾಮುಂಡಿಯ ಬಲಿಪಶುಗಳೆಲ್ಲ ಒಬ್ಬೊಬ್ಬರಾಗಿ ಬಂದು ತಿಲಕ್‌ನಗರ ಇನ್ಸ್‌ಪೆಕ್ಟರ್ ಅಬ್ದುಲ್ ಸತ್ತಾರ್ ಸಾಹೇಬರಿಗೆ ದೂರು ಕೊಟ್ಟಿದ್ದಾರೆ. ತಮಾಷೆಯೆಂದರೆ ತನ್ನನ್ನು ಪೊಲೀಸರು ಠಾಣೆಗೆ ಕರೆತರಲೆಂದು ಬಂದ. ಇನ್ಸ್‌ಪೆಕ್ಟರ್‌ನನ್ನೇ ಚಾಮುಂಡಿ ತಾನು ಅನಂತ್‌ಕುಮಾರ್ ಶಿಷ್ಯೆ ಎಂದು ವಾಚಾಮಗೋಚರ ಬೈದಿದ್ದಾಳೆ. ನೇರವಾಗಿ ಅನಂತ್‌ಕುಮಾರ್‌ಗೆ ಫೋನ್ ಮಾಡಿ ತನ್ನನ್ನ ಬಂಧಿಸದಂತೆ ಪೊಲೀಸರಿಗೇ ಆವಾಜ್ ಹಾಕಿಸಿದ್ದಾಳೆ. ಇಷ್ಟಾಗ್ಯೂ ತಿಲಕ್‌ನಗರದ ಮತ್ತೊಬ್ಬ ದಕ್ಷ ಎಸ್.ಐ. ಜನಾರ್ದನ್‌ರಾವ್ ಇದ್ಯಾವುದಕ್ಕೂ ಜಗ್ಗದೇ ಮೂರೂ ಪ್ರಕರಣಗಳಿಗೂ ಎಫ್‌ಐಆರ್ ಹರಿದಿದ್ದಾರೆ. ಯಾವತ್ತು ತನ್ನ ವಿರುದ್ಧವೇ ಎಫ್‌ಐಆರ್ ಬಿದ್ದದ್ದು ಚಾಮುಂಡಿಗೆ ಗೊತ್ತಾಯಿತೋ ರಾತ್ರೋರಾತ್ರಿ ಏರಿಯಾ ಬಿಟ್ಟು ಪರಾರಿಯಾಗಿದ್ದಾಳೆ.

ಹಾಗಂತ ಆಕೆ ಸುಮ್ಮನಾಗಿದ್ದರೆ ಯಾರಿಗೂ ಆತಂಕವಿರುತ್ತಿರಲಿಲ್ಲ. ಆದರೆ ಆಕೆಯ ರೌಡಿಪಡೆಯಿತ್ತಲ್ಲ; ಅದು ಮೂವತ್ತಕ್ಕೂ ಹೆಚ್ಚು ಹೆಂಗಸರನ್ನು ಕಟ್ಟಿಕೊಂಡು ಫೆಬ್ರವರಿ 18 ರ ರಾತ್ರಿ ದೂರು ಕೊಟ್ಟ ಪ್ರತಿಯೊಬ್ಬರ ಮನೆ ಮೇಲೂ ದಾಳಿ ಮಾಡಿದೆ. ಅದಕ್ಕೆ ಹೆದರಿಯೇ ದೂರು ಕೊಟ್ಟವರೆಲ್ಲ ಮನೆ ಖಾಲಿ ಮಾಡಿ ಪರಾರಿಯಾಗಿದ್ದಾರೆ. ಭೂಗತಳಾಗಿದ್ದುಕೊಂಡೇ ಇಷ್ಟೆಲ್ಲಾ ಹಾವಳಿ ಮಾಡುವ ಚಾಮುಂಡಿ ಇವತ್ತಲ್ಲ ನಾಳೆ ಜಾಮೀನು ಪಡೆದು ಹೊರಬಂದರೆ ಗತಿಯೇನು?

ಚಾಮುಂಡಿಯ ಅಟ್ಟಹಾಸಕ್ಕೆ ಕೊನೆಯೇ ಇಲ್ಲವೆ?

-ರಾ.ಸೋ.



ಅಂಗಾಳ ಪರಮೇಶ್ವರಿ ದೇವಸ್ಥಾನ

ಇನ್ನೂ ರೌಡಿ ಶೀಟ್ ಏಕಿಲ್ಲ?

ಹೀಗೆ ಸಾರ್ವಜನಿಕ ಶೌಚಾಲಯವನ್ನು ನೆಲಸಮ ಮಾಡಿ ಅಲ್ಲಿ ಅಂಗಾಳ ಪರಮೇಶ್ವರಿ ದೇವಸ್ಥಾನವೆಬ್ಬಿಸಿದ ಚಾಮುಂಡಿಯ ಪ್ರತಿ ಶಿವರಾತ್ರಿಯ ಆದಾಯವೇ ಕನಿಷ್ಠ ಇಪ್ಪತ್ತು ಲಕ್ಷ!

ಕನಿಷ್ಠ ಎರಡು ಸಾವಿರ ತರಕಾರಿ ಗಾಡಿಗಳಿಂದ ತಲಾ ಐನೂರರಂತೆ ಕಡ್ಡಾಯವಾಗಿ ಕಕ್ಕಲೇಬೇಕು. ಅದೇ ಹತ್ತು ಲಕ್ಷವಾಗುತ್ತದೆ. ಮಿಕ್ಕಂತೆ ಜಯನಗರದ ಅಂಗಡಿಗಳವರು, ಕಾರ್ಪೊರೇಷನ್ ಕಾಲನಿಯ ಪ್ರತಿ ಮನೆಯವರೂ ಕನಿಷ್ಠ ಸಾವಿರದಿಂದ ಐದು ಸಾವಿರ ತೆರಲೇಬೇಕು. ಹೀಗೆ ದುಡ್ಡು ಕಿತ್ತು ಅದಕ್ಕೆ ನಿಯತ್ತಾಗಿಯೇ ರಶೀದಿ ಕೊಡುತ್ತಾಳೆ. ಯಾವತ್ತು ತನ್ನ ವಸೂಲಿಯ ವಿರುದ್ಧ ಪೊಲೀಸರಿಗೆ ದೂರು ಹೋಯಿತೋ ಅದರ ಮರುದಿನವೇ ಚಾಮುಂಡಿ ಆಟೋ ಒಂದಕ್ಕೆ ಮೈಕ್ ಕಟ್ಟಿ ಯಾರ್‍ಯಾರ ಮನೆಯಲ್ಲಿ ಹಣ ಕೊಟ್ಟ ರಶೀದಿಗಳಿವೆಯೋ ಅದನ್ನೆಲ್ಲ ವಾಪಸ್ಸು ಮಾಡಿ ಎಂದು ಅನೌನ್ಸ್ ಮಾಡಿಸುತ್ತಾಳೆಂದರೆ ಆಕೆಯ ದಾರ್ಷ್ಟ್ಯ ಎಷ್ಟಿರಬಹುದು?

ಅದೂ ಮೈಕ್‌ನಲ್ಲಿ ಕಿರುಚುವುದು ಆಕೆಯ ರೌಡಿ ಪಡೆ!

ಹೀಗೆ ಎತ್ತಿದ ದುಡ್ಡಲ್ಲೇ ಎರಡು ಸೈಟು, ಎರಡು ಕಾರು ಮತ್ತು ಜೇಡಿಮರ ಸ್ಲಮ್ಮಿನಲ್ಲಿ ಇನ್ನೆರಡು ಸೈಟು ಮಾಡಿಟ್ಟಿದ್ದಾಳೆ. ಪ್ರಾರಂಭದಲ್ಲಿ ಅದೇ ಸೈನ್ಸ್ ಬ್ಲಾಕಿನ ರೌಡಿ ಜೆಮ್ ಸೋಮ ಈಕೆಯ ಬೆನ್ನಿಗಿದ್ದ. ಆತನ ನಂತರ ಈಕೆಯದೇ ಖಾಸಾ ಗ್ಯಾಂಗ್ ಹುಟ್ಟಿಕೊಂಡಿದೆ. ತನ್ನ ವಿರುದ್ಧ ದೂರು ಕೊಟ್ಟವರ ಮನೆ ಮೇಲೆ ದಾಳಿ ಮಾಡಿಸಿದ ರಾತ್ರಿಯೇ ಪಕ್ಕದ ತಿರುಮಲ ಬಾರಿನ ಮೇಲೂ ದಾಳಿ ಮಾಡಿಸಿದ್ದಾಳೆ. ಇಷ್ಟಾದ ನಂತರವೂ ಈಕೆಯನ್ನು ಬಂಧಿಸಲಾಗುತ್ತಿಲ್ಲ ಅಂದರೆ ಡಿಸಿಪಿ ಅಲೋಕ್‌ಕುಮಾರ್ ಇದ್ದೂ ಏನು ಪ್ರಯೋಜನ? ಈತನಕ ಈಕೆಯ ಮೇಲೆ ರೌಡಿ ಶೀಟ್ ತೆರೆಯದಿರುವುದೇ ಅನೇಕ ಪ್ರಶ್ನೆಗಳನ್ನು ಹುಟ್ಟಿ ಹಾಕುತ್ತದೆ. ಮುಂದೆ ಗುರಪ್ಪನಪಾಳ್ಯ ವಾರ್ಡು ಮಹಿಳಾ ಮೀಸಲಾದರೆ ಈಕೆಯೇ ಬಿಜೆಪಿ ಅಭ್ಯರ್ಥಿಯಂತೆ. ಇನ್ನು ಇಲ್ಲಿನ ಬಡವರನ್ನು ಯಾರು ಕಾಯಬೇಕು?

ರಾಜ್ಯ ಖಜಾನೆಯಲ್ಲಿ ಪ್ರಭಾಕರ್ ಎಂಬ ಹೆಗ್ಗಣ!

ಪ್ರಭಾಕರ್ ಅಧಿಕಾರದ ಗದ್ದುಗೆಗೇರಿದ ಪರಿಯೇ ಇಲಾಖೆಯಲ್ಲಿ ಆತ ಮಾಡಬಹುದಾದ ಅವಾಂತರಗಳಿಗೆ ಹಿಡಿದ ಕನ್ನಡಿಯಾಗಿತ್ತು. ಕಂಪ್ಯೂಟರ್ ಕ್ಷೇತ್ರದಲ್ಲಾಗಲೀ ಅಥವಾ ಬೇರೆ ಯಾವುದೇ ತಾಂತ್ರಿಕ ಕ್ಷೇತ್ರದಲ್ಲಾಗಲೀ ವಿಶೇಷ ಪರಿಣತಿ ಇಲ್ಲದಿದ್ದರೂ ಇಲಾಖೆಯ ಕಾರ್ಯ ನಿರ್ವಹಣೆಗೆ ಬೇಕಾದ ಸೆಟ್‌ಲೈಟ್ ಖರೀದಿಗೆ ಇಸ್ರೇಲ್‌ಗೆ ಹೋಗಿ ಬಂದ ಈತ ಕಂಪ್ಯೂಟರ್ ಖರೀದಿ ಹಾಗೂ ನೆಟ್‌ವರ್ಕಿಂಗ್‌ನ ನೆಪದಲ್ಲಿ ಖಜಾನೆಯನ್ನೇ ದೋಚಿರುವ ಹೆಗ್ಗಣ.

ರಾಜ್ಯ ಹಣಕಾಸು ಇಲಾಖೆ ಮತ್ತು ಅದರ ೕನದಲ್ಲಿರುವ ಇತರ ಇಲಾಖೆಗಳ ಆಡಳಿತ ವಿಧ್ಯ ನಗಳನ್ನು ಗಮನಿಸಿದರೆ ಸರ್ಕಾರ ಈ ಇಲಾಖೆಗಳನ್ನು ೕಸುತ್ತಿದೆಯೋ ಅಥವಾ ಈ ಇಲಾಖೆಗಳಲ್ಲಿ ತುಂಬ ಂದಿರುವ ಹೆಗ್ಗಣಗಳೇ ಅಲ್ಲಿ ರಾಜ್ಯಭಾರ ಮಾಡು ೆಯೋ ಎಂಬ ಸಣ್ಣ ಅನುಮಾನವೊಂದು ಕಾಡದೇ ಲಾರದು. ಈ ಹೆಗ್ಗಣಗಳ ದಂಡಿನ ಸಾರಥ್ಯ ವಹಿಸಿರು ವನೇ ಖಜಾನೆ ಇಲಾಖೆಯ ನಿರ್ದೇಶಕ ಎಂ. ಭಾಕರ್.

ಈ ಪ್ರಭಾಕರ್ ಮೊಟ್ಟಮೊದಲ ಬಾರಿಗೆ ಖಜಾನೆ ರ್ದೇಶನಾಲಯದ ನಿರ್ದೇಶಕನಾಗಿ ವಕ್ಕರಿಸಿಕೊಂಡದ್ದು 4.2002 ರಿಂದ 15.1.2004 ರ ಅವಧಿಗೆ ಕಾಂಗ್ರೆಸ್ ಳಿತಾವಧಿಯಲ್ಲಿ. ಮತ್ತೆ ಎರಡನೇ ಬಾರಿಗೆ ಸಮ್ಮಿಶ್ರ ರ್ಕಾರದ ಅವಧಿಯಲ್ಲಿ ಸಿದ್ಧರಾಮಯ್ಯ ವಿತ್ತ ಮಂತ್ರಿ ಾಗಿದ್ದಾಗ ಜೂನ್ 2004 ರಲ್ಲಿ. ಈಗ ಪರ್ಮನೆಂಟಾಗಿ ಕ್ಕರಿಸಿಕೊಂಡು ಸಮೃದ್ಧವಾದ ಇಲಾಖೆಯಲ್ಲಿ ಪುಷ್ಕಳ ಗಿ ಮೇಯತೊಡಗಿದ್ದಾರೆ.

ಹಾಗೆ ನೋಡಿದರೆ ಈ ಇಲಾಖೆಯಲ್ಲಿ ಭ್ರಷ್ಟಾ ರದ ಇತಿಹಾಸ ಆರಂಭಸಿರುವುದು ಈ ಪ್ರಭಾಕರನೇ ಲ್ಲ. ಈತ ಇಲಾಖೆಗೆ ನಿರ್ದೇಶಕನಾಗಿ ಅಧಿಕಾರ ಡೆದುಕೊಳ್ಳುವ ಮೊದಲು ಅನೇಕ ಅಧಿಕಾರಿಗಳು ಷ್ಟಾಚಾರದ ಹೊಲಸಿನಲ್ಲಿ ತಿಂದು, ತೇಗಿ, ಹೊರಳಾಡಿ ್ರ ಗಲೀಜು ಮಾಡಿಕೊಂಡಿರುವುದು, ಅಂತಹ ಧಿಕಾರಿಗಳ ವಿರುದ್ಧ ತನಿಖೆಗಳು ನಡೆದಿರುವುದು ಟ್ಟಾಗಿ ಏನೂ ಉಳಿದಿಲ್ಲ. ಆದರೆ ಇಲಾಖೆಯಲ್ಲಿನ ಷ್ಟಾಚಾರದ ಪರಂಪರೆಯನ್ನು ಸಮರ್ಥವಾಗಿ ುಂದುವರೆಸಿಕೊಂಡು ಹೋಗುತ್ತಿರುವ ರ್ತಿ ಮಾತ್ರ ಈ ಪ್ರಭಾಕರ್‌ನಿಗೇ ಸಲ್ಲಬೇಕು!

ನಿಜ ಹೇಳಬೇಕೆಂದರೆ, ಈತ ಅಧಿಕಾರದ ದ್ದುಗೆಗೇರಿದ ಪರಿಯೇ ಇಲಾಖೆಯಲ್ಲಿ ಆತ ಾಡ ಬಹುದಾದ ಅವಾಂತರಗಳಿಗೆ ಹಿಡಿದ ್ನಡಿಯಾಗಿತ್ತು. ಈ ಹುದ್ದೆಗೆ ಅರ್ಹವಾದ ತ್ತು ಪರಿಶಿಷ್ಟ ಜಾತಿಗೆ ಸೇರಿದ ಸೋಮ್ಲಾ ಯ್ಕ್ ಎಂಬುವವರನ್ನು ಕುತಂತ್ರ ದಿಂದ ಂದೂಡಿ, ತನಗಿರುವ ರಾಜಕೀಯ ಪ್ರಭಾವ ನ್ನು ಬಳಸಿ ಆತ ಈ ಹುದ್ದೆಗೇರಿದ್ದ. ಇದಕ್ಕೆ ದಿನ ಎಸ್.ಎಂ. ಕೃಷ್ಣ ಸರ್ಕಾರದ ಸಂಪೂರ್ಣ ಾಕಟಾಕ್ಷ ಆತನ ಮೇಲಿದ್ದುದೇ ಪ್ರಧಾನ ರಣ.

ಭ್ರಷ್ಟ ಸಾಗರದ ಕೆಲ ಹನಿಗಳು....

ರಾಜ್ಯದಲ್ಲಿ ಕಂಪ್ಯೂಟರೀಕರಣಗೊಂಡ ಮೊದಲ ಾಖೆಗಳಲ್ಲಿ ಈ ಖಜಾನೆ ಇಲಾಖೆಯೂ ಒಂದು. ಾಖೆಗೆ ಅಗತ್ಯವಾದ ಎಂ.ಓ. ಫಾರಂಗಳನ್ನು ಯುವ ತಂತ್ರಜ್ಞಾನ ಲಭ್ಯವಿರುವ ಕಂಪ್ಯೂಟರು ಲ್ಲಿಯೇ ಇತ್ತು. ಆದರೂ ಪ್ರಭಾಕರ್ ನಾಯಕತ್ವದ 33.50 ಲಕ್ಷ ರೂಪಾಯಿಗಳ ಎಂ.ಓ. ಫಾರಂಗಳನ್ನು ುಗಿಪ್ಸ ಬಂದ ಆರು ವಿವಿಧ ಕಂಪನಿಗಳಿಂದ ೀದಿಸಿತು! ಈ ಖರೀದಿಯಲ್ಲಿ ಪಾರದರ್ಶಕ ುದೆಯ ಎಲ್ಲಾ ನಿಯಮಾವಳಿಗಳನ್ನು ಗಾಳಿಗೆ ರಿತ್ತು. ಈ ಬಗ್ಗೆ ಪ್ರಭಾಕರನನ್ನೇನಾದರೂ ಕೇಳಿದರೆ, ಪ್ಯೂಟರಿನಲ್ಲಿ ಅಂತಹ ತಂತ್ರಜ್ಞಾನ ಇದೆ ಅಂತ ದುಕೊಳ್ಳುವುದೇ ಒಂದು ತಪ್ಪು' ಎಂದು ಎಗರಾ ಡ್ತಾನೆ.

ಅಷ್ಟೇ ಅಲ್ಲ, ಇದರಲ್ಲಿ 22.48 ಲಕ್ಷ ರೂಪಾಯಿಗಳ ತ್ರದ ಖರೀದಿಗೆ ಸಂಬಂಧಪಟ್ಟವರಿಂದ ಅನು ಯನ್ನೇ ಪಡೆದಿಲ್ಲ! ಎಲ್ಲಾ ಮುಗಿದ ಮೇಲೆ 'ಘಟನೋತ್ತರ ಅನುಮತಿ'ಯನ್ನು ಕೋರಿದ್ದಾರೆ. ಆದರೆ ಆರ್ಥಿಕ ಇಲಾಖೆಯು 20.9.2006 ರಲ್ಲಿ ಬರೆದ ಪತ್ರದಲ್ಲಿ "ಇಲಾಖೆಯ ನಿಯಮದಡಿ ಅಂತಹ ಅನುಮತಿ ನೀಡಲು ಸಾಧ್ಯವಿಲ್ಲ" ಎಂದು ಸ್ಪಷ್ಟವಾಗಿ ತಿಳಿಸಿದೆ. ಈಗ ಮುಂದೆ ಬರುವ ಪ್ರಶ್ನೆ ಎಂದರೆ, ಹಾಗಾದರೆ ಆ ಅಕ್ರಮ ಖರೀದಿಯ 22.48 ಲಕ್ಷ ರೂಪಾಯಿಗಳನ್ನು ಪ್ರಭಾಕರ್‌ನಿಂದ ಇಲಾಖೆಯು ವಸೂಲಿ ಮಾಡುತ್ತದೆಯೇ ಎಂಬುದು.

ಎ.ಜಿ. ರಿಪೋರ್ಟ್ ಪ್ರಕಾರ ಖಜಾನೆಯ ಕಂಪ್ಯೂಟರೀಕರಣಕ್ಕೆಂದು 17.11 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿತ್ತು. ಆದರೆ ಅದು ಸಾಲದೆಂಬಂತೆ ಪ್ರಭಾಕರ್ ನೇತೃತ್ವದ ಪಡೆ ಒಂದು ಕೋಟಿ 38 ಲಕ್ಷ ರೂಪಾಯಿಗಳ ಹೆಚ್ಚುವರಿ ಖರೀದಿಯನ್ನು ನಡೆಸಿದೆ. ಅದೂ ಕೂಡ ಯಾವುದೇ ನಿಯಮಗಳನ್ನು ಪಾಲಿಸದೇ, ಟೆಂಡರ್‌ಗಳನ್ನು ಕರೆಯದೇ! ಅದೂ ಅಲ್ಲದೇ 69.44 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಒಂದು ನೂರು ಐಬಿಎಂ ಕಂಪ್ಯೂಟರ್ 35, ಡೆಸ್ಕ್‌ಟಾಪ್ ಕಂಪ್ಯೂಟರ್ ಮತ್ತು 35 ಮ್ಯಾಟ್ರಿಕ್ಸ್ ಪ್ರಿಂಟರ್‌ಗಳನ್ನು ಖರೀದಿಸಲಾಗಿದೆಯಂತೆ. ಇದರ ಜೊತೆಗೆ ಸುಮಾರು ಎಂಟೂವರೆ ಲಕ್ಷ ರೂಪಾಯಿಗಳನ್ನು ನೆಟ್‌ವರ್ಕಿಂಗ್‌ಗಾಗಿ ಖರ್ಚು ಮಾಡಲಾಗಿದೆಯಂತೆ. ಕಂಪ್ಯೂಟರ್ ಮತ್ತು ನೆಟ್‌ವರ್ಕಿಂಗ್ ಕ್ಷೇತ್ರದಲ್ಲಿ ಅಲ್ಪಜ್ಞಾನವಿರುವ ಯಾರಿಗಾದರೂ ಇದರಲ್ಲಿ ನಡೆದ ಭ್ರಷ್ಟಾಚಾರಗಳ ಬಗ್ಗೆ ಅರ್ಥವಾಗದೇ ಇರಲಾರದು.



ಮೇಲಾಧಿಕಾರಿಗಳ ಮನೆಗಳಿಗೆ ಲ್ಯಾಪ್‌ಟಾಪ್....

ಖಜಾನೆ ನಿರ್ದೇಶನಾಲಯವು 2003 ರಲ್ಲಿ ಸುಮಾರು ನಾಲ್ಕು ಲಕ್ಷದ ಮೂವತ್ನಾಲ್ಕು ಸಾವಿರ ರೂಪಾಯಿಗಳ ವೆಚ್ಚದಲ್ಲಿ ಎರಡು ಲ್ಯಾಪ್‌ಟಾಪ್, ಒಂದು ಗ್ಲೋ ಮಾನಿಟರ್, ಒಂದು ಐಬಿಎಂ ಸ್ಕ್ರೀನ್‌ಗಳನ್ನು ಖರೀದಿಸಿದೆ. ಅದರಲ್ಲಿ ಒಂದು ಲ್ಯಾಪ್‌ಟಾಪ್ ಮತ್ತು ಒಂದು ಕಲರ್ ಮಾನಿಟರ್‌ನ್ನು ಆರ್ಥಿಕ ಇಲಾಖೆಯ (ಬಜೆಟ್ ಮತ್ತು ಸಂಪನ್ಮೂಲ) ಉಪಕಾರ್ಯದರ್ಶಿಯವರಿಗೆ ನಿಯಮಬಾಹಿರವಾಗಿ ನೀಡಲಾಗಿದೆ. ಈ ರೀತಿಯ ಖರ್ಚುಗಳು ಅಕ್ರಮವಾದದ್ದೆಂದು ಎ.ಜಿ. ರಿಪೋರ್ಟ್ ಛೀಮಾರಿ ಕೂಡ ಹಾಕಿದೆ.

28.08 ಲಕ್ಷ ರೂಪಾಯಿ ಯಾವ ಲೆಕ್ಕಕ್ಕೆ?

ರಾಜ್ಯದಲ್ಲಿರುವ 31 ಜಿಲ್ಲಾ ಮತ್ತು 184 ಉಪ ಖಜಾನೆಗಳ ಕಂಪ್ಯೂಟರೀಕರಣಕ್ಕೆ ಬೇಕಾಗುವ ಸಿವಿಲ್ ಮತ್ತು ಎಲೆಕ್ಟ್ರಿಕಲ್ ಕಾಮಗಾರಿ ಕೈಗೊಳ್ಳಲು 2003 ರಲ್ಲಿ 3.72 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿತ್ತು. ಆದರೆ ಖರ್ಚಾಗಿದೆಯೆಂದು ತೋರಿಸಲಾದ ವೆಚ್ಚ ಮಾತ್ರ 4 ಕೋಟಿ. ಅಂದರೆ 28.08 ಲಕ್ಷ ಅಧಿಕ. ಹೀಗೆ ಖರ್ಚು ಮಾಡಿದ್ದೂ ಕೂಡ ಯಾವುದೇ ಅನುಮತಿ ಪಡೆಯದೆಯೆ.



ಅಷ್ಟಕ್ಕೂ ರಾಜ್ಯದ ಎಲ್ಲಾ 210 ಕಚೇರಿಗಳೂ ಕಂಪ್ಯೂಟರೀಕರಣಗೊಂಡ ಮೇಲೂ ಲ್ಯಾಪ್‌ಟಾಪ್‌ಗಳ ಅಗತ್ಯ ಏನಿತ್ತು ಎಂಬ ಪ್ರಶ್ನೆಯೊಂದು ಕಾಡುತ್ತದೆ. ಇದಕ್ಕೆ ಖರೀದಿ ಮಾಡಿದ ಪ್ರಭಾಕರ್ ಹೆಗ್ಗಣ ಪಡೆಯೇ ಉತ್ತರ ನೀಡಬೇಕು.

ಸರ್ಕಾರಿ ಖರ್ಚಿನಲ್ಲಿ ವಿದೇಶ ಪ್ರವಾಸದ ಮಜಾ....

ಈ ಪ್ರಭಾಕರ್‌ಗೆ ಕಂಪ್ಯೂಟರ್ ಕ್ಷೇತ್ರದಲ್ಲಾಗಲೀ ಅಥವಾ ಬೇರೆ ಯಾವುದೇ ತಾಂತ್ರಿಕ ಕ್ಷೇತ್ರದಲ್ಲಾಗಲೀ ವಿಶೇಷ ಪರಿಣತಿ ಇಲ್ಲ. ಆದರೂ ಇಲಾಖೆಯ ಕಾರ್ಯ ನಿರ್ವಹಣೆಗೆ ಬೇಕಾದ ಸೆಟ್‌ಲೈಟ್ ಖರೀದಿಗೆ ಇಸ್ರೇಲ್‌ಗೆ ಹೋಗಿ ಬಂದರು. ಇನ್ನೂ ವಿಶೇಷ ಎಂದರೆ ಈತನೊಂದಿಗೆ ಹೋದವರೆಂದರೆ ಆರ್ಥಿಕ ಇಲಾಖೆಯ ಉಪಕಾರ್ಯದರ್ಶಿ ಮತ್ತು ಮತ್ತೊಬ್ಬ ತಾಂತ್ರಿಕೇತರ ಅಧಿಕಾರಿ. ಒಟ್ಟಿನಲ್ಲಿ ಮೂವರೂ ಆ ಕ್ಷೇತ್ರದಲ್ಲಿ ಸಾಕಷ್ಟು ಪರಿಣತಿ ಇರದವರೆ! ಅಂಧಕನ ಕೈಯನಂದಕನು ಹಿಡಿದೊಡೆ ಏನಾಗಬಹುದೆಂದು ನೀವೇ ಯೋಚಿಸಿ.

ಮತ್ತೆ ಈಗ ದೇಶ-ದೇಶಗಳ ತಂತ್ರಜ್ಞಾನ ಅಭಿವೃದ್ಧಿ ವಿನಿಮಯಕ್ಕೆಂದು ಮಲೇಷಿಯಾದ ಕೌಲಾಲಂಪೂರ್‌ಗೆ ಹೊರಡಲು ಪ್ರಭಾಕರ್ ಯೋಜನೆ ಹಮ್ಮಿಕೊಂಡಿದ್ದ. ಇನ್ನು ನಾಲ್ಕು ತಿಂಗಳಲ್ಲಿ ನಿವೃತ್ತಿ ಹೊಂದುವ ಪ್ರಭಾಕರ್‌ಗೆ ಹೀಗೆ ಸರ್ಕಾರಿ ಖರ್ಚಿನಲ್ಲಿ ವಿದೇಶ ಪ್ರವಾಸ ಕೈಗೊಳ್ಳಲು ಕಾನೂನಿನಡಿ ಅವಕಾಶ ಇಲ್ಲ ಎಂದು ಸೂಚಿಸಿದ್ದರೂ ಆರ್ಥಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸುಬ್ರಮಣ್ಯರವರು ಪ್ರಭಾಕರ್‌ಗೆ ಅನುಮತಿ ನೀಡಿದ್ದರು. ಇದೂ ಕೂಡ ಹಲವು ಅನುಮಾನಗಳಿಗೆ ಎಡೆ ಮಾಡಿಕೊಟ್ಟದೆ. ಆದರೆ ಅವರ ದುರಾದೃಷ್ಟಕ್ಕೆ ಇಡೀ ಈ ಫಾರಿನ್ ಟೂರೇ ಈಗ ಕ್ಯಾನ್ಸಲ್ ಆಗಿದೆ!

ಈತನ ಅವ್ಯವಹಾರಗಳ ಬಗ್ಗೆ ಗೊತ್ತಿದ್ದರೂ ಉಪಮುಖ್ಯಮಂತ್ರಿ ಮತ್ತು ಹಣಕಾಸು ಸಚಿವ ಆಗಿರುವ ಯಡಿಯೂರಪ್ಪ ಯಾಕೆ ಈತನನ್ನು ಇನ್ನೂ ಮುಂದುವರೆಸುತ್ತಿದ್ದಾರೆ ಎಂಬುದು ಒಂದು ಅರ್ಥಗರ್ಭಿತ ಪ್ರಶ್ನೆಯಾಗಿದೆ.

ಈಗಾಗಲೇ ಹಳಸಲು ಪ್ರಾರಂಭಸಿರುವ ಯಡ್ಡಿ-ಕುಮಾರಸ್ವಾಮಿ ಬಾಂಧವ್ಯ ಸರ್ಕಾರದ ಪತನಕ್ಕೇನಾದರೂ ಕಾರಣವಾದರೆ, ಕುಮಾರಸ್ವಾಮಿ ಅಂಡ್ ಗ್ಯಾಂಗ್ ನಡೆಸಿರುವ ಅವ್ಯವಹಾರಗಳನ್ನು ಈತನ ಮೂಲಕವೇ ಬಯಲಿಗೆಳೆಯಬಹುದು ಎಂಬುದು ಯಡ್ಡಿಯ ಕ್ರಿಮಿನಲ್ ಐಡಿಯಾದಂತೆ ಕಾಣುತ್ತಿದೆ.

ಒಟ್ಟಿನಲ್ಲಿ ಅಪರಾಧವೇ ಅಧಿಕಾರವಾದಾಗ ಏನೆಲ್ಲ ಆಗಬಹುದು ಎಂಬುದಕ್ಕೆ ಪ್ರಭಾಕರ್ ಒಂದು ಸಣ್ಣ ಉದಾಹರಣೆ. ರಾಜಕೀಯ ಇಚ್ಛಾಶಕ್ತಿಯನ್ನು ಪ್ರದರ್ಶಿಸುವ ನಿಷ್ಠ ಸರ್ಕಾರ ಎಲ್ಲಿಯವರೆಗೆ ಬರುವುದಿಲ್ಲವೋ ಅಲ್ಲಿಯವರೆಗೆ ಪ್ರಭಾಕರ್‌ನಂತಹ ಹೆಗ್ಗಣಗಳು ಸಾರ್ವಜನಿಕರ ಹಣ ತಿಂದು ಬಲಿಯುತ್ತಲೇ ಇರುತ್ತವೆ. ಪರಿಣಾಮವಾಗಿ ಸಾರ್ವಜನಿಕರು ಸಣಕಲಾಗುತ್ತಲೇ ಹೋಗುತ್ತಾರೆ.

-ವರದಿಗಾರ

ಭ್ರಷ್ಟತೆಯ ಪರಂಪರೆ...

ಖಜಾನೆಯ ನಿರ್ದೇಶನಾಲಯಕ್ಕೂ ಮತ್ತು ಭ್ರಷ್ಟತೆಗೂ ಅವಿನಾಭಾವ ನಂಟಿದೆ. ದರ ಚರಿತ್ರೆಯನ್ನೊಮ್ಮೆ ಅವಲೋಕಿಸಿ ನೋಡಿದರೆ ಭ್ರಷ್ಟತೆಯ ಪರಂಪರೆ ಗ್ಗೆ ರಾಚುವಂತೆ ಕಾಣುತ್ತದೆ.

2001-02 ರಲ್ಲಿ ಖಜಾನೆ ನಿರ್ದೇಶನಾಲಯದಲ್ಲಿ "HFDC ಹಗರಣ" ದೇ ಕುಖ್ಯಾತವಾಗಿರುವ ದೊಡ್ಡ ಹಗರಣವೊಂದು ನಡೆಯಿತು. ಇದನ್ನು ಜೆ ಮಾಡಿದ ಸಮಿತಿ ಅಂದಿನ ನಿರ್ದೇಶಕ ಕೆ.ಕೆ. ನಾಯಕ್ ಮತ್ತು ಖಜಾನೆ ಕಾರಿ ಜಲಜಾಕ್ಷಿ ಮತ್ತು ಇತರರ ಬ್ರಹ್ಮಾಂಡ-ಭ್ರಷ್ಟಾಚಾರಗಳನ್ನು ಬಯಲಿಗೆಳೆದು ಯನ್ನು ವಿಧಿಸಿದೆ.

ಅದೇ ರೀತಿಯಲ್ಲಿ, ಬೆಂಗಳೂರು ಲಾಲ್‌ಬಾಗ್‌ನ ಹಿರಿಯ ತೋಟಗಾರಿಕಾ ೇಶಕರ ಕಚೇರಿಯಲ್ಲಿ ಜೂನ್ 2001 ರಿಂದ ಜುಲೈ 2002 ರ ಅವಧಿಯಲ್ಲಿ ಜೆಗೆ ಸಿಬ್ಬಂದಿಯು ಸಲ್ಲಿಸಲಾದ 35 ಮೋಸದ ಬಿಲ್ಲುಗಳನ್ನು ಖಜಾನೆ ಕಾರಿ ಆರ್.ಎಸ್. ಉಮಾದೇವಿಯವರ (ದಂಡಾ)ಧಿಕಾರತ್ವದಲ್ಲಿ ಸಿಬ್ಬಂದಿಗಳು ಶಾಮೀಲಾಗಿ, ಅಕ್ರಮವಾಗಿ ಪಾಸ್ ಮಾಡಿ ಇಲಾಖೆಯ 21.31 ಲಕ್ಷ ರೂಪಾಯಿಗಳನ್ನು ತಿಂದು ತೇಗಿದರು. ದೊಡ್ಡ ದೊಡ್ಡ ರಾಜಕಾರಣಿಗಳ ನೆಂಟಸ್ತಳೆಂದು ಹೇಳಿಕೊಳ್ಳುವ ಈ ಅಧಿಕಾರಿಣಿಯ ವಿರುದ್ಧ ಈವರೆಗೆ ಯಾವುದೇ ವಿಚಾರಣೆಯಾಗಲೀ ಶಿಕ್ಷೆಯಾಗಲೀ ನಡೆದಿಲ್ಲ.

1988-89 ರಲ್ಲಿ ಶಿವಮೊಗ್ಗ ಮತ್ತು ಹೊಸನಗರ ಉಪಖಜಾನೆಗಳಿಂದ ಭೂಸ್ವಾಧೀನ ಪ್ರಕರಣಗಳಲ್ಲಿ ಖೊಟ್ಟಿ ಸಂದಾಯಗಳು ನಡೆದಿವೆ. ಅದಕ್ಕೆ ಸಂಬಂಧಪಟ್ಟಂತೆ ಖಜಾನೆಯ ಕೆಲವು ನೌಕರರ ವಿರುದ್ಧ ಕ್ರಿಮಿನಲ್ ಮೊಕದ್ದಮೆಗಳು ದಾಖಲಾಗಿವೆ. ಅಲ್ಲದೇ ಅಂದಿನ ಶಿವಮೊಗ್ಗ ಜಿಲ್ಲಾ ಖಜಾನಾಧಿಕಾರಿ ವಿಜಯ ಕೃಷ್ಣಕುಮಾರ್ ವಿರುದ್ಧ ಇಲಾಖಾ ವಿಚಾರಣೆಗಳೂ ನಡೆದಿವೆ.

ಈಗ ಪ್ರಭಾಕರ್ ಸಾರಥ್ಯದಲ್ಲಿ ರಾಜ್ಯಮಟ್ಟದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ ಈ ಎಲ್ಲಾ ಪರಂಪರೆಯ ವ್ಯವಸ್ಥಿತ ಮುಂದುವರಿಕೆ ಮಾತ್ರ.

ಗೌಡ–ಸೋನಿಯಾ ರಹಸ್ಯ ಭೇಟಿ ಯಾಕೆ?

150 ಕೋಟಿ ರೂಪಾಯಿ ಲಂಚ ಹಗರಣದ ಬಳ್ಳಾರಿ ಗಣಿ ಬಾಂಬ್. ಕಳೆದ ಆಗಸ್ಟ್-ಸೆಪ್ಟೆಂಬರ್‌ನಲ್ಲಿ ಬೆಳಕಿಗೆ ಬಂದಿದ್ದ ಈ ಗಣಿ ಲಂಚ ಹಗರಣ ದೇಶಾದ್ಯಂತ ಸುದ್ದಿ ಮಾಡಿತ್ತು. ಕಾಲ ಕಳೆದಂತೆ ಜನರೂ ಇದನ್ನು ಮರೆತೇಬಿಟ್ಟಿದ್ದರು. ಆದರೆ ಇಬ್ಬರಿಗೆ ಮಾತ್ರ ಇದರ ನೆನಪು ಚೆನ್ನಾಗಿಯೇ ಇತ್ತು. ಅವರಲ್ಲಿ ಒಬ್ಬರು ಜನಾರ್ದನ ರೆಡ್ಡಿ, ಮತ್ತೊಬ್ಬರೆಂದರೆ ಸಾಕ್ಷಾತ್ ದೇವೇಗೌಡ! ಗಣಿ ಲಂಚ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕೆಂದು ಕೋರಿ ಸುಪ್ರೀಂಕೋರ್ಟಿನಲ್ಲಿ ಜನಾರ್ದನ ರೆಡ್ಡಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ಇದೇ ಮಾರ್ಚ್ ಎರಡನೇ ವಾರದಲ್ಲಿ ವಿಚಾರಣೆಗೆ ಬರಲಿದೆ. ಇದನ್ನೆಲ್ಲಾ ಪರಿಶೀಲಿಸಿದ ನಂತರ ಸುಪ್ರೀಂಕೋರ್ಟಿನ ವಿಶೇಷ ಪೀಠ ಗಣಿ ಲಂಚ ಹಗರಣವನ್ನು ಸಿಬಿಐ ತನಿಖೆಗೆ ಒಪ್ಪಿಸುವುದು ಖಚಿತ ಎಂದು ಬಹುತೇಕ ಕಾನೂನು ಪರಿಣಿತರು ಹೇಳುತ್ತಿದ್ದಾರೆ.


ದೇವೇಗೌಡ-ಸೋನಿಯಾ ಗಾಂಧಿ ನಡುವಿನ ಭೇಟಿ ಹಾಗೂ ರಹಸ್ಯ ಚರ್ಚೆಗಳ ಹಿನ್ನೆಲೆ ಬಗ್ಗೆ ಈಗ ಇನ್ನಷ್ಟು ಸ್ಪಷ್ಟ ಚಿತ್ರಣ ಸಿಗುತ್ತಿದೆ.

'ಲಂಕೇಶ್' ಕಳೆದ ವಾರ ಸ್ಫೋಟಿಸಿದ ಈ ರಹಸ್ಯ ಭೇಟಿಯ ವರದಿಯ ಕಂಪನಗಳು ಇನ್ನೂ ಕಡಿಮೆಯಾಗಿಲ್ಲ. ಅದು ಆರುವ ಮೊದಲೇ ರಾಜ್ಯ ರಾಜಕಾರಣದ ಮೇಲೆ ಹಾಗೂ ಹಾಲಿ ಸಮ್ಮಿಶ್ರ ಸರ್ಕಾರವನ್ನೇ ಅಲುಗಾಡಿಸಬಹುದಾದ ಇನ್ನೊಂದು ಬಾಂಬ್ ಸಿಡಿಯಲಿದೆ.

ಅದು....

150 ಕೋಟಿ ರೂಪಾಯಿ ಲಂಚ ಹಗರಣದ ಬಳ್ಳಾರಿ ಗಣಿ ಬಾಂಬ್.

ಕಳೆದ ಆಗಸ್ಟ್-ಸೆಪ್ಟೆಂಬರ್‌ನಲ್ಲಿ ಬೆಳಕಿಗೆ ಬಂದಿದ್ದ ಈ ಗಣಿ ಲಂಚ ಹಗರಣ ದೇಶಾದ್ಯಂತ ಸುದ್ದಿ ಮಾಡಿತ್ತು. ಬಿಜೆಪಿ ಶಾಸಕ ಜನಾರ್ದನ ರೆಡ್ಡಿ ಅವತ್ತು ಸಾಕ್ಷಿ ಆಧಾರಗಳ ಸಮೇತ, ಫೋಟೋ ವೀಡಿಯೋ ರೆಕಾರ್ಡಿಂಗ್‌ಗಳನ್ನು ಪ್ರದರ್ಶಿಸಿ ಗೌಡರ ಕುಟುಂಬದ ಸದಸ್ಯರು, ಸ್ವತಃ ಸಿಎಂ ಹಾಗೂ ಗಣಿ ಮಂತ್ರಿ ಚೆನ್ನಿಗಪ್ಪನ ಹಲ್ಕಟ್ ದಂಧೆಗಳನ್ನು ಜನತೆಗೆ ತೋರಿಸಿದ್ದರು... ಆದರೆ ಅದು ಸುಳ್ಳು, ನಕಲಿ ಎಂದೆಲ್ಲಾ ಭಂಡವಾದ ಮಾಡಿ ಇಡೀ ಹಗರಣವನ್ನು ನಗಣ್ಯಗೊಳಿಸಲಾಗಿತ್ತು.



ಆಶ್ಚರ್ಯವೆಂದರೆ ಪತ್ರಕರ್ತರೂ ಕೂಡಾ ಈ ಹಗರಣದ ಮಹತ್ವವನ್ನು ಅರ್ಥ ಮಾಡಿಕೊಂಡಿರಲಿಲ್ಲ.

ಕಾಲ ಕಳೆದಂತೆ ಜನರೂ ಇದನ್ನು ಮರೆತೇಬಿಟ್ಟಿದ್ದರು. ಆದರೆ ಇಬ್ಬರಿಗೆ ಮಾತ್ರ ಇದರ ನೆನಪು ಚೆನ್ನಾಗಿಯೇ ಇತ್ತು. ಅವರಲ್ಲಿ ಒಬ್ಬರು ಜನಾರ್ದನ ರೆಡ್ಡಿ, ಮತ್ತೊಬ್ಬರೆಂದರೆ ಸಾಕ್ಷಾತ್ ದೇವೇಗೌಡ!

ಗಣಿ ಲಂಚ ಸಿಬಿಐ ತನಿಖೆಗೆ

ಗಣಿ ಲಂಚ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕೆಂದು ಕೋರಿ ಸುಪ್ರೀಂಕೋರ್ಟಿನಲ್ಲಿ ಜನಾರ್ದನ ರೆಡ್ಡಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ಇದೇ ಮಾರ್ಚ್ ಎರಡನೇ ವಾರದಲ್ಲಿ ವಿಚಾರಣೆಗೆ ಬರಲಿದೆ.

ದೇವೇಗೌಡರಿಗೆ ಭಯವಾಗುತ್ತಿರುವುದು ಈ ಕಾರಣಕ್ಕೇನೆ. ಅವರು ದೆಹಲಿಗೆ ಓಡಿಹೋಗಿ ಸೋನಿಯಾ ಕಾಲಿಡಿಯುತ್ತಿರುವುದು ಸಹ ಸಿಬಿಐ ತನಿಖೆಗೆ ಕೋರ್ಟ್ ಆದೇಶಿಸಿ ಬಿಟ್ಟರೆ ಅಲ್ಲಿಂದಾಚೆಗಿನ ಪರಿಸ್ಥಿತಿಯನ್ನು ಹೇಗೆ ನಿಭಾಯಿಸಬೇಕೆಂಬ ಆತಂಕದಿಂದಲೇ. ಏನೇ ವಶೀಲಿ ಬಾಜಿ, ಪ್ರಭಾವಗಳನ್ನು ಬೀರಿದರೂ ಸಿಬಿಐ ಒಂದು ಸ್ವತಂತ್ರ ತನಿಖಾ ಸಂಸ್ಥೆ ಎಂಬುದು ದೇವೇಗೌಡರಿಗೂ ಗೊತ್ತಿದೆ. ಅದೇ ರೀತಿ ಕೇಂದ್ರ ಸರ್ಕಾರವನ್ನು ನಿಯಂತ್ರಿಸುವವರೂ ಸಿಬಿಐ ಮೇಲೆ ಸ್ವಲ್ಪಮಟ್ಟಿನ ಕಂಟ್ರೋಲ್ ಹೊಂದಿರುತ್ತಾರೆಂಬುದು ಸುಳ್ಳೇನಲ್ಲ. ದೇವೇಗೌಡ ಈ ಎರಡೂ ಆ್ಯಂಗಲ್‌ಗಳಿಂದ ಸುಪ್ರೀಂ ಕೋರ್ಟಿನ ಮುಂದಿನ ಆದೇಶ ಏನಾಗಬಹುದೆಂದು ಆತಂಕ ಪಡುತ್ತಿದ್ದಾರೆ.

2006 ರ ಅಕ್ಟೋಬರ್‌ನಲ್ಲಿ ಜನಾರ್ದನ ರೆಡ್ಡಿ ರಾಜ್ಯ ಹೈಕೋರ್ಟಿನಲ್ಲಿ ಒಂದು ರಿಟ್ ಅರ್ಜಿ ಸಲ್ಲಿಸಿ ಗಣಿ ಲಂಚ ಹಗರಣದ ಬಗ್ಗೆ ಸಿಬಿಐ ತನಿಖೆ ಆಗಬೇಕೆಂದು ಕೋರಿದ್ದರು. ಅವತ್ತು ಏಕಸದಸ್ಯ ಪೀಠದ ನ್ಯಾಯಾಧೀಶ ರಮೇಶ್ ಅರ್ಜಿಯನ್ನು ವಿಚಾರಣೆಗೆ ಅಂಗೀಕರಿಸಿದ್ದರು. ನಂತರ ಈ ಅರ್ಜಿಯನ್ನು ಸಾರ್ವಜನಿಕ ಹಿತಾಸಕ್ತಿಯ ಅರ್ಜಿ ಎಂದು ಬಣ್ಣಿಸಿ ಡಿವಿಜನ್ ಬೆಂಚ್‌ನಿಂದ ಇತ್ಯರ್ಥ ಮಾಡುವಂತೆ ಶಿಫಾರಸ್ಸು ಮಾಡಿದ್ದರು. ಡಿವಿಜನಲ್ ಬೆಂಚಿನಲ್ಲಿ ನಿರ್ಧಾರವಾಗುವ ಮೊದಲೇ ಇನ್ನೂ ಸ್ವಲ್ಪ ಆಳವಾಗಿ ಯೋಚಿಸಿದ ರೆಡ್ಡಿ ನೇರ ಸುಪ್ರೀಂಕೋರ್ಟಿಗೆ ಹೋಗಿ ಅಲ್ಲೂ ಒಂದು ಅರ್ಜಿ ಸಲ್ಲಿಸಿದ್ದರು. ಕೊನೆಗೆ ಯಾವುದಾದರೂ ಒಂದು ಕೋರ್ಟಿನಲ್ಲಿ ಮುಂದುವರೆಯುವಂತೆ ಸುಪ್ರೀಂಕೋರ್ಟ್ ಸೂಚಿಸಿದಾಗ ರೆಡ್ಡಿ ಹೈಕೋರ್ಟ್ ಅರ್ಜಿ ಹಿಂದಕ್ಕೆ ಪಡೆದು ಸುಪ್ರೀಂಕೋರ್ಟಿನಲ್ಲೇ ವಿಚಾರಣೆ ನಡೆಯಲಿ ಎಂದು ಬಿಟ್ಟರು.




ಬಳಿದಾಳೆ ಈಶ

ಈಗ ಏನಾಗಿದೆ ಗೊತ್ತೆ?

ಈ ಲಂಚ ಪ್ರಕರಣದ ವಿಚಾರಣೆಗೆಂದೇ ಸುಪ್ರೀಂಕೋರ್ಟ್ ತ್ರಿಸದಸ್ಯರಿರುವ ಒಂದು ಪ್ರತ್ಯೇಕ ಪೀಠವನ್ನೇ ನೇಮಕ ಮಾಡಿಬಿಟ್ಟಿದೆ. ಅಂದರೆ ಈ ಗಣಿ ಲಂಚ ಹಗರಣವನ್ನು ಕೋರ್ಟ್ ಬಹಳ ಗಂಭೀರವಾಗಿ ಪರಿಗಣಿಸಿದೆ ಎಂದರ್ಥ. ಇದೇ ಬೆಂಚ್‌ನಲ್ಲಿ ಪಶ್ಚಿಮ ಬಂಗಾಳ ರಾಜ್ಯಕ್ಕೆ ಸೇರಿದ ಇನ್ನೊಂದು ಭ್ರಷ್ಟಾಚಾರ ಪ್ರಕರಣದ ವಿಚಾರಣೆಯೂ ನಡೆಯುತ್ತಿದೆ. ಈ ಫೆಬ್ರವರಿ ತಿಂಗಳ ಕೊನೆಯ ದಿನಗಳಲ್ಲೊಮ್ಮೆ ರೆಡ್ಡಿ ಅರ್ಜಿಯ ಹಿಯರಿಂಗ್ ನಿಗದಿಯಾಗಿತ್ತು. ಆದರೆ ಅದೇ ದಿನ ಪಶ್ಚಿಮ ಬಂಗಾಳದ ಪ್ರಕರಣವೂ ಇದ್ದುದರಿಂದ ಹಾಗೂ ನೂರು ಜನ ಸಾಕ್ಷೀದಾರರ ವಿಚಾರಣೆಗೆ ಇಡೀ ಮೂರು ದಿನ ಖರ್ಚಾಗಿ ರೆಡ್ಡಿ ಕೇಸ್ ಮುಂದೂಡಲಾಗಿತ್ತು. ಈಗ ಮಾರ್ಚ್ 2 ನೇ ವಾರ ಈ ಕೇಸ್ ಮತ್ತೆ ಹಿಯರಿಂಗ್‌ಗೆ ಬರಲಿದೆ. ಜನಾರ್ದನ್ ರೆಡ್ಡಿ ಈಗಾಗಲೇ 9 ಸಿಡಿಗಳೂ ಹಾಗೂ 300 ಪುಟಗಳ ಅಸಲಿ ದಾಖಲೆಗಳನ್ನು ಕೋರ್ಟಿಗೆ ಒಪ್ಪಿಸಿದ್ದಾರೆ. ಇದನ್ನೆಲ್ಲಾ ಪರಿಶೀಲಿಸಿದ ನಂತರ ಸುಪ್ರೀಂಕೋರ್ಟಿನ ವಿಶೇಷ ಪೀಠ ಗಣಿ ಲಂಚ ಹಗರಣವನ್ನು ಸಿಬಿಐ ತನಿಖೆಗೆ ಒಪ್ಪಿಸುವುದು ಖಚಿತ ಎಂದು ಬಹುತೇಕ ಕಾನೂನು ಪರಿಣಿತರು ಹೇಳುತ್ತಿದ್ದಾರೆ. ಮುಲಾಯಂ ಸಿಂಗ್ ಯಾದವ್ ವಿರುದ್ಧ ಚತುರ್ವೇದಿ ಎಂಬ ಓರ್ವ ಸಾಮಾನ್ಯ ವ್ಯಕ್ತಿ (ಕಾಂಗ್ರೆಸ್ ಕಾರ್ಯಕರ್ತನೂ ಹೌದು) ನೀಡಿದ್ದ ಅರ್ಜಿ ಆಧರಿಸಿ ಮುಲಾಯಂ ಅಕ್ರಮ ಆಸ್ತಿಗಳ ಬಗ್ಗೆ ಸಿಬಿಐ ತನಿಖೆಗೆ ಆದೇಶಿಸಿಬಿಟ್ಟಿದೆ. ಹೀಗಿರುವಾಗ ಜವಾಬ್ದಾರಿ ಸ್ಥಾನದಲ್ಲಿರುವ ಶಾಸಕ ಜನಾರ್ದನ ರೆಡ್ಡಿ ಸಾಕ್ಷಿ-ದಾಖಲೆ ಸಮೇತ ಸಲ್ಲಿಸಿರುವ ದೂರನ್ನು ಕೋರ್ಟ್ ಸಿಬಿಐ ತನಿಖೆಗೆ ನೀಡುತ್ತದೆಂಬ ಬಗ್ಗೆ ಯಾರಿಗೂ ಅನುಮಾನಗಳಿಲ್ಲ.

ಸ್ವತಃ ದೇವೇಗೌಡರಿಗೂ ಸಹ!

ನಾಳೆ ಅಂತಹ ಸಂದರ್ಭ ಎದುರಾದರೆ ಸಿಬಿಐ ತನಿಖೆ ಶುರುವಾಗಿ ವರದಿ ನೀಡುವುದೂ ತಡವಾಗುವುದಿಲ್ಲ. ದೇವೇಗೌಡರ ಸಕಲ ಸಂತಾನವೂ ನೂರಾರು ಕೋಟಿ ರೂಪಾಯಿಗಳ ಅಕ್ರಮ ಆಸ್ತಿ ಮಾಡಿಕೊಂಡಿರುವುದು ಈಗ ಇಡೀ ಜಗತ್ತಿಗೆ ಗೊತ್ತಿದೆ. ಸ್ವತಃ 'ಲಂಕೇಶ್' ಕೂಡ ದಾಖಲೆ ಸಹಿತ ಇವನ್ನೆಲ್ಲಾ ಬಯಲುಗೊಳಿಸಿದೆ.



ಜನಾರ್ದನ ರೆಡ್ಡಿ

ಶಾಕಾಂಬರಿ ಎಂಟರ್‌ಪ್ರೈಸಸ್‌ನವರ ಅಕ್ರಮ ಅದಿರು ದಂಧೆ, ಮುಖ್ಯಮಂತ್ರಿ ಕುಮಾರಸ್ವಾಮಿಯ ರಿಯಲ್ ಎಸ್ಟೇಟ್ ಡೀಲುಗಳು, ಟಿವಿ ಚಾನಲ್ ವ್ಯವಹಾರ, ಗೌಡರ ಅಳಿಯ ಡಾ. ಮಂಜುನಾಥ 'ಕೆಲಸ' ಮಾಡುವ ಟ್ರಿನಿಟಿ ಆಸ್ಪತ್ರೆ ಶೇಷಾದ್ರಿಪುರಂನಲ್ಲಿ 42 ಕೋಟಿ ನೀಡಿ ಹೋಟೆಲ್ ಸತ್ಯಪ್ರಕಾಶ್‌ನ 10,808 ಚದರಡಿ ಜಾಗ ಖರೀದಿಸಿದ್ದು, ಗೌಡರ ಮುದ್ದಿನ ಸೊಸೆ ಕವಿತಾ, ಅನಿತಾ ಹಾಗೂ ಭವಾನಿಯರ ಕೋಟ್ಯಂತರ ರೂಪಾಯಿಗಳ ಕಟ್ಟಡ-ಭೂಮಿ ಖರೀದಿ ಧಾವಂತಗಳೆಲ್ಲಾ ಈಗ ತನಿಖೆಗೆ ಒಳಪಡಲಿವೆ. ಗಣಿ ಲಂಚಕ್ಕೂ ಈ ಆಸ್ತಿ ಖರೀದಿಗಳಿಗೂ ನೇರ ಸಂಬಂಧವಿರುವುದೇ ಇದಕ್ಕೆ ಕಾರಣವಾಗಿದೆ. ಜನಾರ್ದನ ರೆಡ್ಡಿ ಸುಪ್ರೀಂಕೋರ್ಟಿಗೆ ಸಲ್ಲಿಸಿರುವ 9 ಸಿಡಿಗಳಲ್ಲಿ ಯಾವುದೇ ಮಾಸ್ಕ್ ಮಾಡದೇ ಚೆನ್ನಿಗಪ್ಪನಾದಿಯಾಗಿ ಎಲ್ಲಾ ಭ್ರಷ್ಟರು, ಗಣಿ ಕಂಪನಿ ಮಾಲೀಕರ ಮುಖಗಳು, ನಡೆಸಿದ ಸಂಭಾಷಣೆಗಳು ಹಾಗೂ ಹಣ ಎಣಿಸಿಕೊಂಡ ದೃಶ್ಯಗಳಿವೆ.

ಸುಪ್ರೀಂಕೋರ್ಟ್ ಇಂಥದನ್ನು ನಿರ್ಲಕ್ಷಿಸಲು ಸಾಧ್ಯವೆ? ಖಂಡಿತಾ ಇಲ್ಲ. ಇದು ಗೊತ್ತಿರುವುದರಿಂದಲೇ ದೇವೇಗೌಡ ತರಾತುರಿಯಿಂದ ಪಂಚೆ ಬಿಗಿ ಮಾಡಿಕೊಂಡು ದೆಹಲಿಯ ಬೀದಿ ಬೀದಿ ಅಲೆಯಲು ಶುರು ಮಾಡಿದ್ದಾರೆ.

ಕಾಂಗ್ರೆಸ್‌ಅನ್ನು ಓಲೈಸುವುದು ಅವರ ಈಗಿನ ಅಜೆಂಡಾಗಳಲ್ಲಿ ಒಂದಾಗಿದೆ.

ರಾಜಕೀಯ ಲೆಕ್ಕಾಚಾರ

ಒಂದು ವೇಳೆ ಸಿಬಿಐ ತನಿಖೆ ನಡೆದೇ ತೀರುತ್ತದೆ ಎಂದಾಗಿ ಬಿಟ್ಟರೆ ಸ್ವಲ್ಪ ಕಾಲಾವಕಾಶ ಪಡೆದುಕೊಳ್ಳಲು ಯತ್ನಿಸುವುದು, ನಂತರ ಕುಟುಂಬದ ಸದಸ್ಯರನ್ನು ರಕ್ಷಿಸಲು ನೋಡುವುದು ಅದೇರೀತಿ ಅಧಿಕಾರ ಉಳಿಸಿಕೊಳ್ಳುವ ಸರ್ಕಸ್ ನಡೆಸುವುದು..... ಇವು ಈಗ ಗೌಡರ ಲೆಕ್ಕಾಚಾರಗಳು.

ಇವೆಲ್ಲಾ ಆಗಬೇಕೆಂದರೆ ಗೌಡ ಈಗ ಕಾಂಗ್ರೆಸ್‌ಗೆ ಶರಣಾಗಲೇಬೇಕಿದೆ. ನಾಳೆ ಪರಿಸ್ಥಿತಿ ತೀರಾ ಹದಗೆಟ್ಟರೆ ಕುಮಾರಸ್ವಾಮಿ ಹಾಗೂ ಗುಲಾಮ ಚೆನ್ನಿಗಪ್ಪನಿಂದ ರಾಜೀನಾಮೆ ಕೊಡಿಸಿ ರೇವಣ್ಣನನ್ನು ಅಧಿಕಾರ ಪೀಠಕ್ಕೇರಿಸಬಹುದೆಂಬ ಯೋಚನೆಯೂ ಗೌಡರಿಗಿದೆ. ಹೇಗೂ ಈ ಇಡೀ ಗಣಿ ಲಂಚ, ಅಕ್ರಮ ಆಸ್ತಿ ಖರೀದಿಯಲ್ಲಿ ಗೌಡರ ಕುಟುಂಬದ ರೇವಣ್ಣ ಒಬ್ಬ ನೇರವಾಗಿ ಕಾಣಿಸಿಕೊಂಡಿಲ್ಲ ತಾನೆ!

ಅತ್ತ ಕಾಂಗ್ರೆಸ್‌ಗೂ ಈಗ ಗೌಡನ ಸಖ್ಯ ಬೇಡವೇ ಬೇಡ ಎನ್ನುವಂತಿಲ್ಲ. ಮುಂಬೈ ನಗರಪಾಲಿಕೆ, ಪಂಜಾಬ್, ಉತ್ತರಖಂಡ್ ಎಲೆಕ್ಷನ್‌ಗಳಲ್ಲಿ ಏಕಾಂಗಿಯಾಗಿ ಸ್ಪರ್ಧಿಸಿ ಕಾಂಗ್ರೆಸ್ ಏಟು ತಿಂದಿದೆ. ಜೊತೆಗೆ ಅಖಿಲ ಭಾರತ ಮಟ್ಟದಲ್ಲಿ ಬಿಜೆಪಿಗಳ ಎನ್‌ಡಿಎಯನ್ನು ಬಲಗುಂದಿಸಬೇಕೆಂದರೆ ಕಾಂಗ್ರೆಸ್‌ಗೆ ಈಗ ಜೊತೆಗಾರರು ಬೇಕೇಬೇಕು ಎಂಬಂತಿದೆ.

ಹೀಗೆ ಅನ್ನ ಹಳಸಿದೆ, ನಾಯಿ ಹಸಿದಿದೆ ಎಂಬ ಪರಿಸ್ಥಿತಿಯಲ್ಲಿ ಗೌಡ-ಸೋನಿಯಾ ರಹಸ್ಯ ಭೇಟಿ ನಡೆದಿದೆ.

ಒಟ್ಟಿನಲ್ಲಿ ಬಳ್ಳಾರಿ ಅದಿರು ದಂಧೆಯೇ ಮತ್ತೊಮ್ಮೆ ರಾಜ್ಯ ರಾಜಕಾರಣದ ದಿಕ್ಕನ್ನು ಬದಲಿಸಲಿದೆ.

ತೀರಾ ಎಳಸು ರಾಜಕಾರಣಿ ಕುಮಾರಸ್ವಾಮಿ ಗಣಿ ಮಾಲೀಕರಿಂದ ಹಫ್ತಾ ವಸೂಲಿ ಮಾಡಲು ಹೋಗಿ ಚಿಲ್ಲರೆ ಕಳ್ಳನಂತೆ ಸಿಕ್ಕಿಬಿದ್ದುದೇ ಅಲ್ಲದೇ ಗ್ರಾಮವಾಸ್ತವ್ಯ ಮಾಡುವಷ್ಟೇ ಸಲೀಸಾಗಿ ನಟಿ ರಾಧಿಕಾ ಮನೆಯಲ್ಲಿ ವಾಸ್ತವ್ಯ ಮಾಡುತ್ತಾ ಜೋಕರ್ ಆಗಿ ಹೋಗಿದ್ದಾರೆ.

ಚೆನ್ನಿಗಪ್ಪನಂತಹ ಚಿಲ್ರೆ ಕಳ್ಳನನ್ನು ಗಣಿ ಲಂಚ ವಸೂಲಿಗೆ ಕಳುಹಿಸಿ ಈಗ ಇಡೀ ದೇವೇಗೌಡರ ಕುಟುಂಬವೇ ಸಿಬಿಐ ತನಿಖೆಗೆ ತಲೆಕೊಡಬೇಕಾದ ಸನ್ನಿವೇಶ ಸೃಷ್ಟಿಯಾಗಿದೆ.

ದೇವೇಗೌಡ್ರಿಗೆ ಸೋನಿಯಾ ಕಾಲಿಗೆ ಬೀಳದೆ ಬೇರೆ ದಾರಿಯಾದರೂ ಎಲ್ಲಿದೆ ಈಗ.

ಸ್ಪೀಕರ್ ತಿಪ್ಪಣ್ಣನ ಗಣಿ ಲಂಚ ಚರ್ಚೆಯೂ

ವಿಧಾನ ಪರಿಷತ್ತಿನ ಹಂಗಾಮಿ ಸ್ಪೀಕರ್ ತಿಪ್ಪಣ್ಣನ ವಿರುದ್ಧ ಕಾಂಗ್ರೆಸ್‌ನವರು ಏನೆಲ್ಲಾ ಹಾರಾಡಿದರೂ ದಳದವರು ಜಗ್ಗಿರಲಿಲ್ಲ. ಇದಕ್ಕೆ ಜನಾರ್ದನ ರೆಡ್ಡಿಯ ಭಯವೂ ಒಂದು ಕಾರಣ ಎಂಬುದೀಗ ಸಾಬೀತಾಗಿದೆ.

ಕಳೆದ ಅಧಿವೇಶನದಲ್ಲೇ ಗಣಿ ಲಂಚ ಹಗರಣದ ಬಗ್ಗೆ ಮಾತನಾಡಲು ರೆಡ್ಡಿ ಅವಕಾಶ ಕೇಳಿ ಇಲ್ಲ ಅನ್ನಿಸಿಕೊಂಡಿದ್ದರು. ನಂತರ ಬೆಳಗಾಂ ವಿಶೇಷ ಅಧಿವೇಶನವು ಗಡಿ ಸಮಸ್ಯೆ ಹಾಗೂ ಉತ್ತರ ಕರ್ನಾಟಕ ಅಭಿವೃದ್ಧಿಯ ಬಗ್ಗೆ ಚರ್ಚೆ ನಡೆಸಿತ್ತಾದ್ದರಿಂದ focus ಬದಲಾಗದಿರಲೆಂದು ರೆಡ್ಡಿಯೇ ಸುಮ್ಮನಾಗಿಬಿಟ್ಟಿದ್ದರು. ಆದರೆ ಈಗ ರೆಡ್ಡಿ ತಮಗೆ ಅವಕಾಶ ನೀಡುವಂತೆ ಮತ್ತೆ ಪಟ್ಟು ಹಿಡಿದಿದ್ದಾರೆ. ಆದರೆ ಸ್ಪೀಕರ್ ತಿಪ್ಪಣ್ಣ ಹೇಳಿಕೇಳಿ ದೇವೇಗೌಡರ 'ಹೌದಣ್ಣ' ಪೈಕಿ. ಅವರು ಸರ್ಕಾರಕ್ಕೆ ಮುಜುಗರ ಆಗಲು ಬಿಡಕೂಡದೆಂದೇ ರೆಡ್ಡಿಗೆ ಅವಕಾಶ ನೀಡದೆ ಸತಾಯಿಸುತ್ತಲೇ ಬಂದಿದ್ದಾರೆ.

ಆದರೆ ರೆಡ್ಡಿ ಮಾತನಾಡೇ ತೀರುತ್ತೇನೆಂದು ಶಪಥಗೈದಿದ್ದಾರೆ. ಒಟ್ಟಿನಲ್ಲಿ ಮುಂದಿನವಾರ ವಿಧಾನ ಪರಿಷತ್ತಿನಲ್ಲಿ ಚಕಮಕಿ ನಡೆಯುವುದು ಗ್ಯಾರಂಟಿ ಆಗಿದೆ!

ಮಾಡೆಲ್ ಬೆಡಗಿಗೆ 4 ಕೋಟಿಯ ಉಂಗುರ?

ಉಪ್ಪು ತಿಂದವನು ನೀರು ಕುಡಿಯಲೇಬೇಕು ದ. ಆದರೆ ಲಾಡ್ ಸಹವಾಸ ಮಾಡಿ ಲಾಡು ತಿಂದ ವ?

ಹೆಂಡತಿಯ ಕೈಯಿಂದ ಲಾಟಾ ತಿನ್ನಲೇಬೇಕು!

ಇದು ಕುಮಾರಸ್ವಾಮಿಯ ಪೇಚೂ ಹೌದು ರ್ಮವೂ ಹೌದು. ಎಂತೆಂಥವರೋ ಅಧಿಕಾರ ಹಿಡಿದು ೋಗಿದ್ದಾರೆ. ಹೆಣ್ಣು ಮತ್ತು ಹೆಂಡವೇ ತನ್ನ ವೀಕ್‌ನೆಸ್ ಂದ ಪಟೇಲರೇ ಈಪಾಟ ನಗೆಪಾಟಲಿಗೀಡಾಗಲಿಲ್ಲ. ದರೆ ರೇಡಿಗೆ ಹೆದರಿ ರಾತ್ರೋರಾತ್ರಿ ನಟಿಯೊಬ್ಬಳ ನೆಯಿಂದ ಎದ್ದೂಬಿದ್ದು ಓಡಿದ ಕುಮಾರಣ್ಣನ ರ್ಗತಿ ಮಾತ್ರ ಯಾರಿಗೂ ಬಂದಿರಲಿಲ್ಲ.

ಅದು ಲಾಡ್ ಸಹವಾಸ ದೋಷ. ಕೂಡ್ಲಿಗಿಯ ರಮಲಂಪಟ ಎಮ್ಮೆಲ್ಲೇ ಅನಿಲ್ ಲಾಡ್ ಅದ್ಯಾವ



ಅನಿಲ್ ಲಾಡ್



ಕುಮಾರಸ್ವಾಮಿ

ಎರಡೇ ದಿನಕ್ಕೆ ಟೀವಿ ನಟಿಯೊಬ್ಬಳು ಮಹಾ ಸಲಿಗೆಯಿಂದಲೇ ಕುಮಾರ ಸ್ವಾಮಿಯ ನಿವಾಸವನ್ನು ಹೊಕ್ಕಿದ್ದಾಳೆ. ಟೀವಿಯ ಸಿಲ್ಲಿಲಲ್ಲಿಯಂತೆ ವ್ಯೆಯಾರ ಮಾಡುತ್ತಾ ಪೋಜು ಕೊಡುತ್ತಿದ್ದ ಆಕೆ ಯನ್ನು ನೋಡಿದ್ದೇ ಅನಿತಕ್ಕನಿಗೆ ಗುಮಾನಿ ಬಂದಿದೆ. ನೇರವಾಗಿ ಆಕೆಯನ್ನೇ ಕರೆಸಿ ಕೊಂಡ ಅನಿತಕ್ಕ ವಿಚಾರಿಸಲಾಗಿ ಆಕೆ ಹೇಳಿದ್ದು 'ಸೀಯೇ ಸೈಟು ಕೇಳೋಕ್ಕೆ ಬಂದೆ' ಎಂಬ ತಬ್ಬಿಬ್ಬು ಡೈಲಾಗು. ವಾಸನೆ ಹಿಡಿದ ಅನಿತಕ್ಕ ನೆರೆದ ಎಲ್ಲರ ಎದುರಿಗೇ ಆಕೆಗೆ ಮಂಗಳಾರತಿಯೆತ್ತಿ ಆಚೆಗೆ ದಬ್ಬಿದ್ದಾರೆ.

ಇದು ಅನಿತಕ್ಕನ ಮನಸ್ಥಿತಿ. ರಾಧಿಕಾ ಮನೆ ರೇಡಿನ ನಂತರ ಆಕೆ ಮಾಡಿದ ಮೊದಲ ಕೆಲಸವೇ ಇಂಟಲಿಜೆನ್ಸ್ ಐಜಿಪಿ ಕಿಶೋರ್ ಚಂದ್ರರನ್ನು ಕರೆಸಿ ಭೂತ ಬಿಡಿಸಿದ್ದು. ಅಮ್ಮಾವ್ರ ಉಗ್ರಾವತಾರ ನೋಡಿಯೇ ಥರಗುಟ್ಟಿದ ಕಿಶೋರ್ ಚಂದ್ರ ಕೋರಮಂಗಲದ ಬೆಡಗಿಗೆ ನಾಲ್ಕು ಕೋಟಿಯ ವಜ್ರದುಂಗುರವನ್ನು ಉಡುಗೊರೆಯಾಗಿ ಕೊಟ್ಟ ಸಂಗತಿಯನ್ನು ಬಾಯಿಬಿಟ್ಟಿದ್ದಾರೆ. ಆಕೆಯನ್ನು ಅಂಟು ಹಾಕಿದ್ದೇ ಅನಿಲ್ ಲಾಡ್ ಎಂಬುದನ್ನೂ ಕಿವಿ ಮುಟ್ಟಿಸಿದ್ದಾರೆ.

ಕೇಳಿದ್ದೇ ಕೆಂಡಾಮಂಡಲರಾದ ಅನಿತಕ್ಕ ಫೋನೆತ್ತಿದ್ದೇ ಲಾಡ್‌ಗೆ ವಾಚಾಮಗೋಚರ ಬಯ್ದಿದ್ದಾರೆ. ಈ ಬಗ್ಗೆ ಸಮಜಾಯಿಷಿ ಹೇಳಲು ಬಂದ ಕುಮಾರಣ್ಣನ ಫೋನನ್ನೂ ಕಟ್ ಮಾಡಿದ್ದಾರೆ.



ರೋಹಿಣಿ

ಇದೇ ತಲೆಬಿಸಿಯಲ್ಲಿ ಲಾಡ್‌ನ ಖಾಸಗಿ ಹೆಲಿಕಾಪ್ಟರ್ ಹತ್ತಿ ಉತ್ತರ ಕರ್ನಾಟಕ ಪ್ರವಾಸಕ್ಕೆ ತೆರಳಿಬಿಟ್ಟರು ಕುಮಾರಸ್ವಾಮಿ. ಸದ್ಯ ಪತ್ನಿಗೆ ಮುಖ ತೋರಿಸುವಂತಿಲ್ಲ, ಅಪ್ಪನ ಕೆಂಗಣ್ಣು ಎದುರಿಸುವಂತಿಲ್ಲ, ಇತ್ತ ಲಾಡ್ ಸಂಗವನ್ನೂ ಬಿಡುವಂತಿಲ್ಲ, ರಾಧಿಕಾ ಮನೆಯಲ್ಲಿದ್ದ ಆಸ್ತಿ ದಾಖಲೆಗಳೆಲ್ಲ ಐಟಿ ಅಧಿಕಾರಿಗಳ ಕೈಸೇರಿದೆ. ಮಾಡೆಲ್ ಬೆಡಗಿಗೆ ಕೊಟ್ಟ 4 ಕೋಟಿಯ ಡೈಮಂಡ್ ರಿಂಗ್‌ನ ಬೆನ್ನು ಹತ್ತಿ ಐಟಿ ಅಧಿಕಾರಿಗಳ ಮತ್ತೊಂದು ತಂಡ ಬೇಟೆಗಿಳಿದಿದೆ.

ಲಾಡನ ಸಂಗ ಅಭಿಮಾನ ಭಂಗ!

-ರಾ.ಸೋ.

ಳಿಗೆಯಲ್ಲಿ ಕುಮಾರಣ್ಣನ ರಾಶಿಗೆ ಕಾಲಿಟ್ಟನೋ ವತ್ತಿನಿಂದ ಒಂದಲ್ಲಾ ಒಂದು ಶನಿಕಾಟಕ್ಕೆ ತಲೆ ೊಡುತ್ತಲೇ ಇದ್ದಾರೆ ಕುಮಾರಸ್ವಾಮಿ. ಗಣಿ ಲಂಚದ ಳಂಕ, ಬಿಎಸ್‌ಕೆ ಟ್ರೇಡಿಂಗ್ ಕಂಪೆನಿಯ ಕರ್ಮಕಾಂಡ, ಂಗನ ರಸ್ತೆ ರಂಪ ಮತ್ತು ಈಗ ರಾಧಿಕಾರಮಣ ಲಾಪ!

ಇದಿಷ್ಟೇ ಆಗಿದ್ದರೆ ಕುಮಾರಸ್ವಾಮಿ ಈಪಾಟ ಲೆಕೆಡಿಸಿಕೊಳ್ಳುತ್ತಿರಲಿಲ್ಲವೇನೋ. ಅವರ ಶ್ರೀಮತಿ ನಿತಕ್ಕ ಕೂಡಾ ಗಂಡನ ವಿರುದ್ಧ ಈ ರೀತಿ ಮುನಿಸಿ ೊಳ್ಳುತ್ತಿರಲಿಲ್ಲ. ಸಹವಾಸಕ್ಕೆ ಬಿದ್ದು ಸನ್ಯಾಸಿ ಕೆಟ್ಟ ಎಂಬಂತೆ ಾಡ್ ದೋಸ್ತಿಗೆ ಬಿದ್ದು ಕುಮಾರ ಕೆಟ್ಟದ್ದು ಈಗ ಂದೊಂದಾಗಿ ಸಾಬೀತಾಗುತ್ತಿದೆ. ಮನೆಯ ಮೇಲೆ ದ್ದ ಕ್ಷಿಪಣಿಗಳ ತೀವ್ರತೆಯೇ ಅಂಥಾದ್ದು-

ಈ ಪೈಕಿ ಕೋರಮಂಗಲದ ಮಾಡೆಲ್ ಬೆಡಗಿ ೊಬ್ಬಳಿಗೆ ಕುಮಾರ 4 ಕೋಟಿ ರೂಪಾಯಿ ಬಾಳುವ ಜ್ರದುಂಗುರವನ್ನು ಕಾಣಿಕೆಯಾಗಿ ಕೊಟ್ಟದ್ದು ಅವರ ತ್ನಿ ಅನಿತಕ್ಕನ ಗಮನಕ್ಕೆ ಬಂದಿದೆ ಎಂಬುದು ಒಂದು ುದ್ದಿಯಾದರೆ; ಹಾಡುಹಗಲೇ ಟೀವಿನಟಿ ೊಬ್ಬಳನ್ನು ಇದೇ ಅನಿತಕ್ಕ ಮಂಗಳಾರತಿ ಾಡಿ ಹೊರಗಟ್ಟಿದ್ದು ಮತ್ತೊಂದು ಸುದ್ದಿ!

ನಟ ರಾಧಿಕಾಳನ್ನು ಕುಮಾರ ೂರೆ'ಗೆ ಅಂಟು ಹಾಕಿದ್ದೇ ಅನಿಲ್ ಾಡ್ ಎಂಬುದರಲ್ಲಿ ಯಾರಿಗೂ ನುಮಾನಗಳಿಲ್ಲ. ಬಲ್ಲ ಮೂಲಗಳು ೇಳುವಂತೆ ಲಾಡ್-ಕುಮಾರಸ್ವಾಮಿ ಂಟಿಯಾಗಿ ನಡೆಸುತ್ತಿದ್ದ ಎರಡು ಮುಖ ಸರ್ವೀಸ್ ಅಪಾರ್ಟ್ ಂಟುಗಳ ಮಾಲೀಕತ್ವದ ಾಖಲೆಗಳನ್ನು ಸದ್ಯ ಆದಾಯ ತೆರಿಗೆ ಧಿಕಾರಿಗಳ ತಂಡ ಜಪ್ತಿ ಾಡಿಕೊಂಡಿದೆ. ರಾಧಿಕಾ ಡಾಲರ್ಸ್ ಾಲನಿಯಲ್ಲಿ ಕೊಂಡ ಬಂಗಲೆಗೆ ಾಡ್‌ನ ಬಳ್ಳಾರಿಯ ್ರಿಕ್ ೆಯಿಂದಲೇ ಸುಮಾರು ನಾಲ್ಕು ೋಟಿಯಷ್ಟು ದುಡ್ಡು ಾನೆಯಾದ ಸ್ತಿಯೂ ಐಟಿ ಧಿಕಾರಿಗಳಿಗೆ ಿಳಿದಿದೆ.

ಇನ್ನು ಆಕೆಯನ್ನು ಮಾರನಿಗೆ ಪರಿಚಯಿಸಿ ದಿರುತ್ತಾನಾ ಲಾಡು? ಇದು ಪಕ್ಕೆಯಷ್ಟೇ ಅನಿಲ್ ಲಾಡ್ ಹವಾಸ ಬಲ್ಲ ೊಬ್ಬರೂ ಹೇಳುವ ೊಗೆ ನಟ



ರಾಧಿಕಾಳನ್ನು ಲಾಡ್‌ಗೆ ಪರಿಚಯಿಸಿಕೊಟ್ಟವಳೇ ಡಾಲರ್ಸ್ ಕಾಲನಿಯ ರೋಹಿಣಿ ಎಂಬಾಕೆ. ಲಾಡ್ ಈಕೆಗೂ ಅದೇ ಡಾಲರ್ಸ್ ಕಾಲನಿಯಲ್ಲೊಂದು ಮನೆ ಕೊಡಿಸಿದ್ದಾನೆ. ಮೂಲತಃ ಕೂರ್ಗಿನವಳಾದ ಈ ರೋಹಿಣಿ ಪ್ರಾರಂಭದಲ್ಲಿ ತಾನು ಸಿನಿಮಾ ನಟಿ ಎಂದು ಚಾಲ್ತಿಯಲ್ಲಿದ್ದವಳು. 'ರಂಭಾ ರಾಜ್ಯದಲ್ಲಿ ರೌಡಿ' ಎಂಬ ವಿಕೃತ ಚಿತ್ರದಲ್ಲಿ ಪುಟ್ಟ ಪಾತ್ರವೊಂದನ್ನು ಮಾಡಿ ಅದನ್ನೇ ತನ್ನ ಕ್ವಾಲಿಫಿಕೇಷನ್ನಾಗಿ ಬಳಸಿದ ಈಕೆ ಒಂದಷ್ಟು ದಿನ ಚೆನ್ನಿಗಪ್ಪನವರ ಆಸ್ಥಾನದ ಲ್ಲಿದ್ದಳು. ಕ್ರಮೇಣ ತಾನೇ ಸಿನಿಮಾ ಮಾಡ್ತೀನಿ ಎಂದು ಪತ್ರಿಕೆಗಳಿಗೆ ಆ್ಯಡ್ ಕೊಡಲಾರಂಭಿಸಿದಳು.

ಈಕೆಗೆ ಕೂಡ್ಲಿಗೆ ಶಾಸಕ ಅನಿಲ್ ಲಾಡ್ ಯಾವ ಗಳಿಗೆಯಲ್ಲಿ ಗಂಟು ಬಿದ್ದನೋ; ಆವತ್ತಿನಿಂದ ಈಕೆಯ ಲಕ್ಕೇ ಕುದುರಿಬಿಟ್ಟಿತು. ಅನಿಲ್ ಲಾಡ್ ಜಯಮಹಲ್‌ನಲ್ಲಿ ನಡೆಸುವ ಸರ್ವೀಸ್ ಅಪಾರ್ಟ್‌ಮೆಂಟ್‌ನಲ್ಲಿ ಈಕೆಗೊಂದು ಖಾಯಂ ಫ್ಲಾಟಿದೆ. ಜೊತೆಗೆ ನಂ. 12, ಎಸ್.ಬಿ. ಬಡಾವಣೆ, 1ನೇ ಮುಖ್ಯರಸ್ತೆ, ಡಾಲರ್ಸ್ ಕಾಲನಿ, ಆರ್‌ಎಂವಿ ಸೆಕೆಂಡ್ ಸ್ಟೇಜ್ ವಿಳಾಸದ ಅನಿಲ್ ಲಾಡ್‌ನ ಬಂಗಲೆಯಲ್ಲಿ ಪದೇಪದೇ ಕಾಣಿಸಿಕೊಳ್ಳುತ್ತಾಳೆ.

ಈಗ ಕುಮಾರಸ್ವಾಮಿಯಿಂದ 4 ಕೋಟಿಯ ವಜ್ರದುಂಗುರವನ್ನು ಉಡುಗೊರೆಯಾಗಿ ಪಡೆದ ಕೋರಮಂಗಲದ ಮಾಡೆಲ್ ಬೆಡಗಿಯನ್ನು ಈಕೆಯೇ ಅನಿಲ್‌ಗೆ ತಗುಲಿ ಹಾಕಿದ್ದು, ಇದ್ಯಾವುದೂ ಅನಿತಕ್ಕನಿಗೆ ಗೊತ್ತೇ ಇರಲಿಲ್ಲ, ಯಾವತ್ತು ರಾಧಿಕಾ ಮನೆ ರೇಡಾಯಿತೋ ಅದಾಗಿ

ಇದು ಅನಿತಕ್ಕನ ಮನಸ್ಥಿತಿ. ರಾಧಿಕಾ ಮನೆ ರೇಡಿನ ನಂತರ ಆಕೆ ಮಾಡಿದ ಮೊದಲ ಕೆಲಸವೇ ಇಂಟಲಿಜೆನ್ಸ್ ಐಜಿಪಿ ಕಿಶೋರ್ ಚಂದ್ರರನ್ನು ಕರೆಸಿ ಭೂತ ಬಿಡಿಸಿದ್ದು. ಅಮ್ಮಾವ್ರ ಉಗ್ರಾವತಾರ ನೋಡಿಯೇ ಥರಗುಟ್ಟಿದ ಕಿಶೋರ್ ಚಂದ್ರ ಕೋರಮಂಗಲದ ಬೆಡಗಿಗೆ ನಾಲ್ಕು ಕೋಟಿಯ ವಜ್ರದುಂಗುರವನ್ನು ಉಡುಗೊರೆಯಾಗಿ ಕೊಟ್ಟ ಸಂಗತಿಯನ್ನು ಬಾಯಿಬಿಟ್ಟಿದ್ದಾರೆ. ಆಕೆಯನ್ನು ಅಂಟು ಹಾಕಿದ್ದೇ ಅನಿಲ್ ಲಾಡ್ ಎಂಬುದನ್ನೂ ಕಿವಿಮುಟ್ಟಿಸಿದ್ದಾರೆ.



ಅಪರೇಷನ್ ಡೈಮಂಡ್ ರಿಂಗ್!

'ಲ' ಹೆಸರಿನಿಂದ ಆರಂಭವಾಗುವ ಕೋರಮಂಗಲದ ಆ ಮಾಡೆಲ್ ಬೆಡಗಿಯನ್ನು 'ದೊರೆ'ಗೆ ಅಂಟ ಹಾಕಿದ್ದು ಲಾಡೇ ಆದರೂ ಆಕೆಗೆ ಲಾಡ್‌ನ ಕಾಂಟ್ಯಾಕ್ಟ್ ಕೊಡಿಸಿದ್ದು once again ಡಾಲರ್ಸ್ ಕಾಲನಿಯ ರೋಹಿಣಿಯೇ. ಪ್ರಾರಂಭದಲ್ಲಿ ಫ್ಯಾಷನ್ ಗುರುವೊಬ್ಬನ ಗರಡಿಯಲ್ಲಿದ್ದ ಈ ಮಾಡೆಲ್‌ಗೆ ಕೋರಮಂಗಲದ ಮನೆ ಕೂಡ ಗಿಫ್ಟಾಗಿ ಬಂದಿದೆ. ಅದನ್ನು ಕೊಟ್ಟವರು ಯಾರು? ಈಗ 'ದೊರೆ'ಯೇ ಗಿಫ್ಟಾಗಿ ಕೊಟ್ಟ 4 ಕೋಟಿಯ ಡೈಮಂಡ್ ರಿಂಗ್ ಬಂದಿದ್ದೆಲ್ಲಿಂದ? ಈ ಬಗ್ಗೆ ತನಿಖೆ ಮಾಡುವವರ್ಯಾರು?

ಇಂಥಾ ರುಚಿ ತೋರಿಸಿದ್ದರಿಂದಲೇ ತನ್ನದೇ ಪಕ್ಷದ ಸಂಡೂರು ಶಾಸಕ ಸಂತೋಷ್ ಲಾಡ್‌ನನ್ನು ದೂರವಿಟ್ಟು ಬಿಜೆಪಿಯ ಅನಿಲ್ ಲಾಡ್‌ನನ್ನು ಕುಮಾರಸ್ವಾಮಿ ಅಪ್ಪಿಕೊಂಡರೆ?

ಇದು ಇವತ್ತಿಗೂ ಕುಮಾರಸ್ವಾಮಿ ಆಪ್ತ ವಲಯವನ್ನು ಕಾಡುತ್ತಿರುವ ಸಂದೇಹ. ಏಕೆಂದರೆ ಬರೀ ದುಡ್ಡು ಕಾಸಿನ ನಂಟಷ್ಟೇ ಆಗಿದ್ದರೆ ಸಂತೋಷ್ ಲಾಡ್ ಅನಿಲ್ ಲಾಡ್‌ನಷ್ಟೇ ಶ್ರೀಮಂತ. ಮೈನ್ಸ್ ದಂಧೆಯ ಸಕಲವನ್ನೂ ಬಲ್ಲಾತ. ಆದರೆ ಅನಿಲ್ ಲಾಡ್ ಥರ ನಟಿಯರು, ಮಾಡೆಲ್‌ಗಳ ಸಂಗ ಆತನಿಗಿಲ್ಲ. ಆ ಕಾರಣಕ್ಕೇ ಅನಿಲ್ ಲಾಡ್ ಕುಮಾರಸ್ವಾಮಿಗೆ ಪರಮಾಪ್ತ. ಸದ್ಯ ಕುಮಾರಸ್ವಾಮಿ ತನ್ನ ಅಧಿಕೃತ ಪ್ರವಾಸವನ್ನೂ ಲಾಡ್‌ನ ಖಾಸಗಿ ಹೆಲಿಕಾಪ್ಟರಿನಲ್ಲೇ ಮಾಡುತ್ತಾರೆಂದರೆ, ಮನೆಗೂ ಹೋಗದೆ ರಾತ್ರಿ ಪೂರ್ತಿ ಆತನ ಸರ್ವೀಸ್ ಅಪಾರ್ಟುಮೆಂಟುಗಳಲ್ಲೇ ಕಳೆಯುತ್ತಾರೆಂದರೆ ಏನರ್ಥ?

ಲೇಟೆಸ್ಟ್ ಸುದ್ದಿಯೆಂದರೆ ಇಂಥ ಶೋಕಿಗೆಂದೆ ಅನಿಲ್‌ಲಾಡ್ ಮರವಂತೆ ಸುತ್ತಮುತ್ತ ಖಾಸಗಿ ದ್ವೀಪವೊಂದರ ಖರೀದಿಯಲ್ಲಿದ್ದಾನೆ. ಹಾಲಿವುಡ್‌ನ ಕುಬೇರರಂತೆ ತಮ್ಮದೇ ಖಾಸಗಿ ಐಲ್ಯಾಂಡ್ ಒಂದನ್ನು ಖರೀದಿಸುವುದು ಲಾಡ್-ಕುಮಾರ್ ಜಂಟಿ ಯೋಜನೆಯಂತೆ. ಕರ್ನಾಟಕ ದಿವಾಳಿಯೆದ್ದರೂ ತಮ್ಮ ಐಷಾರಾಮಕ್ಕೆ ಕುಂದಾಗಕೂಡದು. ಇದು ಜಾಲಿ ಫ್ರೆಂಡ್ಸ್‌ಗಳ ಫ್ಯೂಚರ್ ಪ್ಲಾನಂತೆ.

ಹಾಳು ಮಾಡಲು ಲಾಡ್‌ಗಿಂತ ಬೇಕೆ?





ಇಂದಿನ ಲಗ್ಗೆರೆ

ರಿವೇಂಜ್ ಕಿಲ್ಲಿಂಗ್ಸ್ 20

ಡಾ. ಸೋಮನಾಥ್

ಲಗ್ಗೆರೆ ಎಂಬ ಪುಟ್ಟ ನರಕ

ಮಾಗಡಿ ರಸ್ತೆಯಲ್ಲಿ ಕಾಮಾಕ್ಷಿಪಾಳ್ಯ ದಾಟಿ ರಿಂಗ್‌ರಸ್ತೆಯಲ್ಲಿ ಬಲಕ್ಕೆ ಸಿಗುವ ಈ ಲಗ್ಗೆರೆ ಒಂದಾನೊಂದು ಕಾಲಕ್ಕೆ ಬರೇ ಅರವತ್ತು ಮನೆಗಳ ಕುಗ್ರಾಮವಾಗಿತ್ತು. ಅರ್ಧಕ್ಕರ್ಧದಕ್ಕಿದ್ದ ದಲಿತರನ್ನು ಬಿಟ್ಟರೆ ಇನ್ನರ್ಧ ಭಾಗ ಒಕ್ಕಲಿಗರು, ಕುರುಬರು, ತಿಗಳರು, ಹಳ್ಳಿಕಾರರು ಸೇರಿಕೊಂಡಿದ್ದರು. ಬೆಂಗಳೂರಿಗಾಗಿ ಬಲಿಯಾದ ಬೇರೆಲ್ಲಾ ಹಳ್ಳಿಗಳ ಕತೆಯೇ ಒಂದಾದರೆ ಈ ಲಗ್ಗೆರೆಯದು ಅದಕ್ಕೆ ತೀರ ವ್ಯತಿರಿಕ್ತ ಕತೆ. ಇಲ್ಲಿನವರು ಬೀದಿಗೆ ಬಿದ್ದು ರೌಡಿಗಳಾದವರಲ್ಲ. ಬದಲಿಗೆ ಸುಖಕ್ಕೆ ಬಿದ್ದು ಹಾಳಾದವರು. ಭೂಮಿಗಾಗಿ ಬಡಿದಾಡಿದವರು. ಇಂಥ ಲಗ್ಗೆರೆಯೆಂಬ ಪುಟ್ಟ ನರಕದ ಕತೆ ಇಲ್ಲಿದೆ......

ಭಾರತದ ಸಂವಿಧಾನ, ಈ ನೆಲದ ಕಾನೂನು ಯಾವುದೂ ಅಲ್ಲಿ ಪ್ರಯೋಜನಕ್ಕೆ ಬರುವುದಿಲ್ಲ. ಯಾವಾತ ಹೆಚ್ಚು ಮಂದಿ ರೌಡಿಗಳನ್ನು ಕಲೆಹಾಕಿ, ಪೊಲೀಸರನ್ನೂ ಜೊತೆಗಿಟ್ಟುಕೊಂಡು ನುಗ್ಗುತ್ತಾನೋ, ಅಡ್ಡ ಬಂದವರನ್ನು ಕತ್ತರಿಸುತ್ತಾನೋ ಅಲ್ಲಿ ಆತನೇ ಸೈಟಿನ ಯಜಮಾನ!


ಅದು ಲಗ್ಗೆರೆ!

ಯಂಡಮೂರಿ ವಿರೇಂದ್ರನಾಥ್ ಕಾದಂಬರಿ 'ಸ್ಟುವರ್ಟ್‌ಪುರಂ ಪೊಲೀಸ್ ಸ್ಟೇಷನ್' ಥರದ್ದೇ ಬೆಂಗಳೂರಿನಲ್ಲೊಂದು ಪೊಲೀಸ್ ಠಾಣೆ ಇದೆಯೆಂದರೆ ಅದಕ್ಕೆ ಫಿಟ್ ಆಗುವುದು ರಾಜಗೋಪಾಲನಗರ ಪೊಲೀಸ್ ಠಾಣೆಯೇ. ಈ ಲಗ್ಗೆರೆ ರಾಜಗೋಪಾಲನಗರ ಪೊಲೀಸ್ ಠಾಣೆಯ ವ್ಯಾಪ್ತಿಗೆ ಬರುತ್ತದೆ. ಯಾರೆಲ್ಲ ಈ ಠಾಣೆಗೆ ಇನ್ಸ್‌ಪೆಕ್ಟರ್‌ಗಳಾಗಿ ಬಂದರೋ ಅವರೆಲ್ಲರೂ ತನ್ನ ಶಕ್ತ್ಯಾನುಸಾರ ಸೈಟುಗಳನ್ನೂ, ಎಲ್ಲೆಲ್ಲಿಂದಲೋ ಬಂದ ರೌಡಿಗಳಿಗೆ ಕೈತುಂಬಾ ಕಾಸನ್ನೂ ಮತ್ತು ಸೈಟು ಕೊಂಡ ಅಮಾಯಕರಿಗೆಲ್ಲ ಬಟ್ಟ ತಿರುಪತಿ ಯಾತ್ರೆಯನ್ನು ಕರುಣಿಸುತ್ತಲೇ ಬಂದ ಲಗ್ಗೆರೆ ಬೆಂಗಳೂರಿನ ಬಹುತೇಕ ಲ್ಯಾಂಡ್ ಮಾಫಿಯಾಗಳ, ರೌಡಿಗಳ ಮತ್ತು ಪಾಪಿ ಪೊಲೀಸರ ಕರಾಳ ಜಂಕ್ಷನ್.

ಮಂಡ್ಯ ಕೃಷ್ಣನೆಂಬ ಪುಡಿ ರೌಡಿಯೊಬ್ಬ ಇಲ್ಲಿಗೆ ಕಾಲಿಟ್ಟದ್ದರಿಂದಲೇ ಎಲ್ಲಾ ರೌಡಿಗಳು ಇಲ್ಲಿಗೆ ಬರುವಂತಾಯಿತಾ? ಆತ ಇರದೇ ಹೋಗಿದ್ದರೆ ಮುಲಾಮ ಲಗ್ಗೆರೆಗೆ ಬರುತ್ತಿದ್ದನಾ? ಇಲ್ಲಿಗೆ ಬಂದ ಕಾರಣಕ್ಕಾಗಿಯೇ ಮುಲಾಮನಿಗೆ ಮತ್ತೆ ಅಂಡರ್‌ವರ್ಲ್ಡ್‌ನಲ್ಲಿ ಸಕ್ರಿಯನಾಗಲು ಸಂಪನ್ಮೂಲ ಸಿದ್ಧಿಯಾಯಿತಾ? ಇಲ್ಲಿನ ಲ್ಯಾಂಡ್ ಡಿಸ್‌ಪ್ಯೂಟುಗಳೇ ಮಚ್ಚನನ್ನು ಲಗ್ಗೆರೆಯ ಕನಕ ಕೈಬೀಸಿ ಕರೆಯಿತಾ? ಅಂತಿಮವಾಗಿ ಅದೇ ಮಚ್ಚನ ಹತ್ಯೆಗೆ ಮೂಲವಾಯಿತಾ?

ಒಂದಂತೂ ಸತ್ಯ. ಈ ಎಲ್ಲದಕ್ಕೂ ಬಳಕೆಯಾದ ರೌಡಿಗಳಿಗೆ ಕಾರು ಮತ್ತು ಕಾಸು ಒದಗಿ ಬಂದಿದ್ದೇ ಲಗ್ಗೆರೆಯಿಂದ!

ಮಾಗಡಿ ರಸ್ತೆಯಲ್ಲಿ ಕಾಮಾಕ್ಷಿಪಾಳ್ಯ ದಾಟ ರಿಂಗ್‌ರಸ್ತೆಯಲ್ಲಿ ಬಲಕ್ಕೆ ಸಿಗುವ ಈ ಲಗ್ಗೆರೆ ಒಂದಾನೊಂದು ಕಾಲಕ್ಕೆ ಬರೇ ಅರವತ್ತು ಮನೆಗಳ ಕುಗ್ರಾಮವಾಗಿತ್ತು, ಅರ್ಧಕ್ಕರ್ಧ ದಕ್ಕಿದ್ದ ದಲಿತರನ್ನು ಬಿಟ್ಟರೆ ಇನ್ನರ್ಧ ಭಾಗ ಒಕ್ಕಲಿಗರು, ಕುರುಬರು, ತಿಗಳರು, ಹಳ್ಳಿಕಾರರು ಸೇರಿಕೊಂಡಿದ್ದರು. ಬೆಂಗಳೂರಿಗಾಗಿ ಬಲಿಯಾದ ಬೇರೆಲ್ಲಾ ಹಳ್ಳಿಗಳ ಕತೆಯೇ ಒಂದಾದರೆ ಈ ಲಗ್ಗೆರೆಯದು ಅದಕ್ಕೆ ತೀರ ವ್ಯತಿರಿಕ್ತ ಕತೆ. ಇಲ್ಲಿನವರು ಬೀದಿಗೆ ಬಿದ್ದು ರೌಡಿಗಳಾದವರಲ್ಲ. ಸುಖಕ್ಕೆ ಬಿದ್ದು ಹಾಳಾದವರು. 1980 ರ ತನಕ ಇಲ್ಲಿ ಕೇವಲ ಎರಡೋ ಮೂರೋ ಸಾವಿರಕ್ಕೆ ಸೈಟು ಸಿಗುತ್ತಿತ್ತು, ಮತ್ತು ಅದೇ ಕಾರಣಕ್ಕೆ ಇಲ್ಲಿ ಸರಿಸುಮಾರು ಮೂವತ್ತಕ್ಕೂ ಅಧಿಕ ಕಿಡಿಗೇಡಿ ಗ್ಯಾಂಗ್‌ಗಳು ಹುಟ್ಟಿಕೊಂಡವು.



ಲಗ್ಗೆರೆಯ ರೌಡಿ ಮುನಿಬೈರ


ಈ ಊರಿಗೆ ಕೊನೆಯ ಬಾರಿಗೆ ಪಟೇಲನಾಗಿದ್ದವನು ತಿಕ್ಕಲು ಭೈರ. ಬೆಂಗಳೂರಿನ ವಿಸ್ತರಣೆಗೆಂದು ಬಿಡಿಎ ಆಗಲಿ, ಕೈಗಾರಿಕೆಗಳಿಗೆಂದು ಕೆಐಎಡಿಬಿಯಾಗಲಿ ಇಲ್ಲಿನ ಯಾವುದೇ ರೈತರ ಜಮೀನನ್ನು ಕಿತ್ತುಕೊಳ್ಳಲಿಲ್ಲವಾದ್ದರಿಂದ ಊರಿನ ಹಿರೀಕರಾದ ಎಲ್.ಜಿ. ರಾಮಣ್ಣ ಆತನ ಮಗ ಮುನಿಗಂಗಪ್ಪ, ಜೋಡಿ ಕೃಷ್ಣಪ್ಪ, ದಲಿತರ ಆಂಜನಪ್ಪ ಎಲ್ಲೇ ಕೃಷ್ಣಪ್ಪ ಮುಂತಾದವರ ಬಳಿ ಸಾಕಷ್ಟು ಜಮೀನಿತ್ತು. 1985 ರ ಹೊತ್ತಿಗೆ ಟೈಲರಿಂಗ್ ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿಯ ಫಕ್ರುದ್ದೀನ್, ಸ್ವಾತಂತ್ರ್ಯ ಹೋರಾಟಗಾರರ ಗೃಹ ನಿರ್ಮಾಣ ಸಂಘದ ವಜ್ರವೇಲು, ಬಾಗಲಗುಂಟೆ ಗೃಹ ನಿರ್ಮಾಣ ಸಂಘದ ನರಸಿಂಹಾಚಾರಿ ಮುಂತಾದವರೆಲ್ಲ ಲಗ್ಗೆರೆಗೆ ಕಾಲಿಟ್ಟು ಒಬ್ಬೊಬ್ಬರೇ ರೈತರ ಭೂಮಿಯನ್ನು ಖರೀದಿಸುವ ತನಕ ಹೊರಪ್ರಪಂಚಕ್ಕೆ ಈ ಊರು ಅಜ್ಞಾತವಾಗೇ ಇತ್ತು. ಹಾಗೇ ಜಮೀನು ಕೊಂಡ ಸೊಸೈಟಿಗಳು ತುಂಬಾ ಅಗದೀ ದರಕ್ಕೆ ಕಂಡಕಂಡವರಿಗೆಲ್ಲ ಸೈಟು ಮಾರಲಾರಂಭಿಸುತ್ತಿದ್ದಂತೆ ಬೆಂಗಳೂರಿನ ಬೇರೆಬೇರೆ ಭಾಗಗಳಿಂದ ಜನ ಲಗ್ಗೆರೆಗೆ ಬರತೊಡಗಿದರು. ಅವರ ಪೈಕಿ ಬಹುತೇಕರು ಕುಣಿಗಲ್, ನಾಗಮಂಗಲ, ಮಾಗಡಿ, ತುಮಕೂರು ಭಾಗದ ಕನ್ನಡಿಗರು ಮತ್ತು ಶ್ರೀರಾಂಪುರ, ಪ್ರಕಾಶನಗರದ ಕಡೆಯ ತಮಿಳರು. ಎರಡೋ ಮೂರೋ ಸಾವಿರಕ್ಕೆ ಕೊಂಡ ಸೈಟುಗಳನ್ನು ಕಾಂಪೌಂಡ್ ಕೂಡ ಹಾಕದೇ ಹಾಗೇ ಬಿಟ್ಟುಕೊಂಡಿದ್ದರು.

1995 ರ ಹೊತ್ತಿಗೆ ಟೈಲರಿಂಗ್ ಹೌಸಿಂಗ್ ಸೊಸೈಟಿಯ ಫಕ್ರುದ್ದೀನ್ ಒಂದೇ ಸೈಟನ್ನು ಮೂರ್‍ನಾಲ್ಕು ಜನಕ್ಕೆ ಮಾರಿದ ಆರೋಪದ ಮೇಲೆ ಜೈಲು ಪಾಲಾದರೆ, ಮಿಕ್ಕ ಸೊಸೈಟಿಗಳು ರೈತರಿಂದ ಭೂಮಿ ಕೊಂಡಿದ್ದೇ ಅನೂರ್ಜಿತ ಎಂದು ಸುಪ್ರೀಂಕೋರ್ಟು ತೀರ್ಪಿತ್ತಿತ್ತು. ಇಷ್ಟಾಗ್ಯೂ ಸೈಟು ಕೊಂಡವರಿಗೆ ಅಂಥ ಆತಂಕಗಳಿರಲಿಲ್ಲ, ಆದರೆ ಮೂಲ ಜಮೀನುದಾರರಿಂದ ಕೇವಲ ಜಿಪಿಎ ಮಾತ್ರ ಮಾಡಿಕೊಂಡಿದ್ದ ಸೊಸೈಟಿಗಳವರು ಮಾಡಿದ ಯಡವಟ್ಟೆಂದರೆ ಜಮೀನಿನ ಮೂಲ ಪತ್ರಗಳನ್ನು ಪಡೆಯದೇ ಭೂಮಾಲೀಕರ ಬಳಿಯೇ ಬಿಟ್ಟುಬಿಟ್ಟದ್ದರು. ಜಮೀನು ಪರಭಾರೆಯ ವೇಳೆಗೆ ಬಾಲ್ಯದಲ್ಲಿದ್ದ ಜಮೀನುದಾರರ ಮಕ್ಕಳು ಮೀಸೆ ಬರುವ ಹೊತ್ತಿಗೆ ಅಪ್ಪ ಮಾರಿದ್ದ ಜಮೀನಿನದೇ ಮೂಲಪತ್ರ ಇಟ್ಟುಕೊಂಡು ನಿವೇಶನದಾರರ ಸುಲಿಗೆಗೆ ನಿಂತರು.



ಮಂಡ್ಯ ಕೃಷ್ಣ

ಸೈಟುದಾರರು ಸೊಸೈಟಿಗಳಿಂದ ಖರೀದಿಸಿದ್ದರೆ ಇವರು ಮೂಲ ಜಮೀನುದಾರರಿಂದಲೇ ಇನ್ಯಾರಿಗೋ ಅದೇ ಸೈಟನ್ನು ಮಾರುತ್ತಿದ್ದರು. ಎಂದೋ ಮಾರಿದ ಜಮೀನಿಗೆ ಬಂದಷ್ಟೂ ಲಾಭವೇ. ಇಂಥ ದಂಧೆಗೆ ಮೊದಲು ನಿಂತವನೇ ಮುನಿಗಂಗಪ್ಪನ ಮಗ ಲಕ್ಷ್ಮಿಕಾಂತ ರೆಡ್ಡಿ. ಈತನ ಶಿಷ್ಯ ರಾಗಿಮಿಷನ್ ವೆಂಕಟೇಶ್ ಎಂಬಾತನ ನೇತೃತ್ವದಲ್ಲಿ ಚಿಕ್ಕದೊಂದು ರೌಡಿ ಪಡೆಯೇ ಹುಟ್ಟಿಕೊಂಡಿತು. ಪಾರ್ವತಿನಗರದ ಸೊಸೈಟಿ ಭೈರ, ರಾಜೀವ್‌ಗಾಂಧೀನಗರದ ಬ್ರೋಕರ್ ರಾವ್, ಲಗ್ಗೆರೆ ಕಾಲೋನಿಯ ಖದೀಮ ಕಿವುಡಾ ರಾಮಕೃಷ್ಣ, ಖೋಟಾ ದಲಿತ ಲೀಡರ್ ಮುನಿಭೈರ, ಪಾರ್ವತಿನಗರದ ಅಟ್ಯಾಕ್ ಸೀನ, ಮುನೇಶ್ವರ ಬಡಾವಣೆಯ ಕುಳ್ಳಾ ವೆಂಕಟೇಶ, ಬ್ರೋಕರ್ ರಾವ್‌ನ ಮಗ ಶಿವಾಜಿ, ಹೀಗೆ ಹುಟ್ಟಿಕೊಂಡ ತರಹೇವಾರಿ ರೌಡಿ ಗ್ಯಾಂಗುಗಳು ಬೇಕಾಬಿಟ್ಟಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ಕಂಡಕಂಡ ಸೈಟುಗಳಿಗೆ ಬೇಲಿ ಹಾಕುವುದನ್ನೇ ಕಾಯಕ ಮಾಡಿಕೊಂಡರು. ಈ ಪೈಕಿ ರೌಡಿಗಳಾದ ಲಕ್ಷ್ಮಿಕಾಂತರೆಡ್ಡಿ, ರಾಗಿ ಮಿಷಿನ್ ವೆಂಕಟೇಶ ಮತ್ತು ಅಟ್ಯಾಕ್ ಸೀನರಂಥವರನ್ನು ಶಾಸಕ ಅಶೋಕರೇ ಕರೆದು ಬಜೆಪಿಯ ಪದಾಧಿಕಾರಿಗಳನ್ನಾಗಿ ನೇಮಿಸಿಬಿಟ್ಟರು. ಸಂಜೆಯಾದರೆ ಎಣ್ಣೆಪಾರ್ಟಿ, ಬೆಳಗ್ಗೆಯಾದರೆ ಯಾರದ್ದೋ ಸೈಟು ನುಂಗುವುದು ಲಗ್ಗೆರೆಯ ಜಮೀನ್ದಾರರ ಮಕ್ಕಳ ಹುಟ್ಟುಗುಣವಾಯಿತು. ಊರಿಗೆ ಊರೇ ಲಂಪಟತನಕ್ಕೆ ಬಿತ್ತು. ಜಮೀನ್ದಾರ ಎಲ್.ಜಿ. ರಾಮಣ್ಣನ ಮಕ್ಕಳಾದ ಮುನಿರಾಜು ಮತ್ತು ಸ್ವಾಮಿ ಕುಡಿಕುಡಿದೇ ನಾಶವಾದರು. ಈ ಬ್ರದರ್‌ಗಳೇ ಮುಂದೆ ನಟೋರಿಯಸ್ ಮಂಡ್ಯ ಕೃಷ್ಣನನ್ನು ಲಗ್ಗೆರೆಗೆ ಕರೆತಂದದ್ದು.



ಮುಲಾಮ

ಪ್ರಾರಂಭದಲ್ಲಿ ಮನೆಮನೆಗೆ ಹಾಲು ಹಾಕುತ್ತಿದ್ದ ಮಂಡ್ಯ ಕೃಷ್ಣ ದಿನ ಕಳೆದಂತೆ ಸೈಟಿನ ರುಚಿ ಕಂಡ. ಪೊಲೀಸರನ್ನು ಸರಿ ಮಾಡಿಕೊಂಡು ಯಾರ್‍ಯಾರದೋ ಸೈಟು ಕಬಳಿಸುತ್ತಿದ್ದ, ಈತನ ಶಿಷ್ಯರಾದ ಸರ್ಕಲ್ ಮಂಜ, ಆತನ ತಮ್ಮ ಉಮೇಶ ಮತ್ತು ಕುಳ್ಳಾ ವೆಂಕಟೇಶ್ ಮುಂತಾದವರೆಲ್ಲ ರಾತ್ರೋರಾತ್ರಿ ಕೋಟ್ಯಧಿಪತಿಗಳಾದರು. ಮಂಡ್ಯ ಕೃಷ್ಣನೇ ಲಗ್ಗೆರೆಯಲ್ಲೊಂದು, ಪಿಳ್ಳಪ್ಪನ ಕಟ್ಟೆ ಬಳಿ ಮತ್ತೊಂದು, ತನ್ನ ಊರಿನಲ್ಲಿ ಮಗದೊಂದು ಹೀಗೆ ಮೂರು ಮನೆ ಕಟ್ಟಿಸಿಕೊಂಡ. ಲಗ್ಗೆರೆಯ ವಿಶೇಷವೇನೆಂದರೆ ಅಲ್ಲಿ ಯಾರದೇ ಸೈಟಿಗೆ ಒಂದು ಗ್ಯಾಂಗ್ ಮುಗಿಬಿತ್ತೆಂದರೆ ಸೈಟುದಾರ ಕೊಂಚ ತಾಕತ್ತಿನವನೆಂದರೆ ಆತನ ವಿರುದ್ಧ ಮಿಕ್ಕೆಲ್ಲಾ ಗ್ಯಾಂಗುಗಳೂ ಒಂದಾಗಿ ಬಡಿದಾಟಕ್ಕಿಳಿಯುತ್ತವೆ. ಮಂಡ್ಯ ಕೃಷ್ಣನಿಗೆ ತನ್ನ ಸೈಟ್ ಆಕ್ರಮಣಕ್ಕೆ ಹೊರಗಿನ ರೌಡಿಗಳ ಅಗತ್ಯವೇ ಇರಲಿಲ್ಲ ನಿಜ. ಹಾಗಂತ ದುರಾಶೆ ಬಿಡಬೇಕಲ್ಲ, ಆತನಕ ಭೂಗತ ಜಗತ್ತಿನಿಂದ ದೂರವೇ ಉಳಿದಿದ್ದ ಮುಲಾಮನನ್ನು ಅನಗತ್ಯವಾಗಿ ಲಗ್ಗೆರೆಗೆ ಎಂಟ್ರಿ ಮಾಡಿಸಿಬಿಟ್ಟಿದ್ದ.

ಅದು 2000 ದ ಇಸವಿಯ ಕಾಲ. ಆಗಿನ್ನೂ ಮಚ್ಚ ಮತ್ತು ಮುಲಾಮ ಒಟ್ಟೊಟ್ಟಾಗಿಯೇ ಸುತ್ತಾಡುತ್ತಿದ್ದರು. ಮುಲಾಮನಿಗೆ ಜೇಕೆ ವೈರಿಯಾದರೆ ಮಚ್ಚನಿಗೆ ಜೇಕೆ ಜೊತೆ ಆಪ್ತನಾಗಿದ್ದ ಗೋಪಾಲಯ್ಯ ವೈರಿ. ಬೈಲು ರವಿಯನ್ನು ಕೊಂದು ಜೈಲು ಪಾಲಾದಾಗಲೂ ಮಚ್ಚನ ವಿರುದ್ಧ ಸಾಕ್ಷ್ಯ ಹೇಳಿಸದಂತೆ ಮುಲಾಮನೇ ಗೋಪಾಲಯ್ಯನ ಬಳಿ ರಾಜಿ ಸೂತ್ರ ಮಂಡಿಸಿದ್ದ. ಮುಲಾಮನೇ ನಿಂತು ಮಚ್ಚನನ್ನು ಬೈಲು ರವಿಯ ಕೊಲೆ ಕೇಸಿನಿಂದ ಬಚಾವು ಮಾಡಿದ್ದ. ಮೊದಮೊದಲು ಇಬ್ಬರೂ ಒಟ್ಟೊಟ್ಟಿಗೇ ಲ್ಯಾಂಡ್ ಡೀಲುಗಳಿಗೆ ಕೈಹಾಕಿದ್ದರು. ತನಗೆಂದು ಲಗ್ಗೆರೆಯಲ್ಲಿ ಬಂಗಲೆಯನ್ನೇ ಕಟ್ಟಿಸಿಕೊಂಡಿದ್ದ ಮುಲಾಮ ಕ್ರಮೇಣ ಮಚ್ಚನನ್ನೂ ಲಗ್ಗೆರೆಗೆ ಕರೆತಂದು ಲ್ಯಾಂಡಿನ ರುಚಿ ತೋರಿಸಿಕೊಟ್ಟ. ಬರುಬರುತ್ತ ಇಬ್ಬರ ಮಧ್ಯೆಯೇ ಪೈಪೋಟಿ ಶುರುವಾಯಿತು. ಸುಂಕದಕಟ್ಟೆ, ಹೆಗ್ಗನಹಳ್ಳಿ, ಗೊಲ್ಲರಹಟ್ಟಿ, ಹೇರೋಹಳ್ಳಿ ಏರಿಯಾಗಳಲ್ಲಿ ಇಬ್ಬರೂ ತಂತಮ್ಮದೇ ಹುಡುಗರ ಪಡೆಗಳನ್ನು ಹುಟ್ಟಿಹಾಕಿದರು. ಮುಲಾಮನನ್ನು ಮೀರಿಸಿ ತಾನು ಬೆಳೆಯಬೇಕೆಂದು ಮಚ್ಚ, ಮಚ್ಚನನ್ನು ತುಳಿದು ತಾನು ತಲೆ ಎತ್ತಬೇಕೆಂದು ಮುಲಾಮ.

ಹೀಗಿರುವಾಗಲೇ ಮುಲಾಮನ ಶಿಷ್ಯರಾದ ತಿಮ್ಮೇನಹಳ್ಳಿಯ ಲ್ಯಾಂಡ್ ಡೀಲರುಗಳಾದ ಮಲ್ಲಿಕಾರ್ಜುನ ಮತ್ತು ಮೋಹನ ಹೇರೋಹಳ್ಳಿಯಲ್ಲಿ ಮಾಡಿದ್ದ ಲೇಔಟಿಗೆ ಮಚ್ಚನ ಕಾಟ ಶುರುವಾಯಿತು. ಲ್ಯಾಂಡ್ ಡೀಲು ಮಾಡಿಯೇ ಕುಬೇರರಾದ ಮಲ್ಲಿಕಾರ್ಜುನ ಮತ್ತು ಮೋಹನ್ ಮುಂದೆ ತಮ್ಮ ಗಳಿಕೆಯನ್ನೆಲ್ಲಾ ಗಾಂಧಿನಗರದ ವಂಚಕ ನಿರ್ದೇಶಕ ಶರಣ್ ದಾವಣಗೆರೆಯ ಕೈಗಿಟ್ಟು 'ಪೂಜಾರಿ' ಎಂಬ ತೋಪು ಸಿನಿಮಾ ಮಾಡಿ ಕೈ ಸುಟ್ಟುಕೊಂಡರು. ಆವತ್ತು ಇವರ ಹೇರೋಹಳ್ಳಿಯ ಲೇಔಟಿಗೆ ನುಗ್ಗಿದ ಮಚ್ಚ ಎಂಥಾ ಯಡವಟ್ಟು ಮಾಡಿಕೊಂಡನೆಂದರೆ, ಮೋಹನನನ್ನು ಅಟಕಾಯಿಸಿಕೊಂಡಿದ್ದೇ 'ಅವನಮ್ಮನ್ ಆ ಗಾಂಡು ಮುಲಾಮನಿಗೆ ಹೇಳು ಮಚ್ಚಾ ಬಂದಿದ್ದ ಅಂತ....!' ಎಂದು ಅಧಿಕ ಪ್ರಸಂಗಿತನ ಮಾಡಿಬಿಟ್ಟ!

ಇದು ಮಚ್ಚನ ದುಡುಕು ಬುದ್ಧಿಯಲ್ಲದೇ ಮತ್ತೇನಾಗಿರಲಿಲ್ಲ, ಒಂದೆರಡು ಬಾರಿ ಒಳ್ಳೇ ರೀತಿಯಲ್ಲೇ ಮುಲಾಮ ಮಚ್ಚನಿಗೆ ಬುದ್ಧಿ ಹೇಳಿದ್ದಾನೆ. ಅದನ್ನೂ ಲೆಕ್ಕಿಸದೇ ಮಚ್ಚ ಮತ್ತೆಮತ್ತೆ ಹೋಗಿ ಮುಲಾಮನ ಶಿಷ್ಯ ಮೋಹನನನ್ನು ಪೀಡಿಸಿದ್ದಾನೆ. ಇದಾದ ನಂತರ ಲಗ್ಗೆರೆಯ ಸೈಟೊಂದಕ್ಕೆ ಸಂಬಂಧಪಟ್ಟಂತೆ ಮತ್ತೆ ಮಚ್ಚಾ ಮತ್ತು ಮುಲಾಮ ಕಿತ್ತಾಡಿದ್ದಾರೆ. ಇದು ಗೊತ್ತಾಗಿಯೇ ಹಳೇ ಭೂಗತ ದೊರೆಯೊಬ್ಬ ಇಬ್ಬರಿಗೂ ರಾಜಿ ಮಾಡಿಸಿದ್ದಾನೆ. ಮೇಲುನೋಟಕ್ಕೆ ಮುಲಾಮ ದೋಸ್ತಿ ಕಾ ಹಾತ್ ಮಿಲಾಯಿಸಿದ್ದನಾದರೂ ಒಳಗೊಳಗೇ ಮಚ್ಚನ ವಿರುದ್ಧ ಕತ್ತಿಮಸೆಯುತ್ತಲೇ ಇದ್ದ.

ಲ್ಯಾಂಡ್ ಡೀಲ್, ಅದರ ಉತ್ಪತ್ತಿ, ಅವರವರದೇ ಶಿಷ್ಯರ ಪಡೆಗಳು ಅಂತಿಮವಾಗಿ ಪ್ರಾಣಸ್ನೇಹಿತರಂತಿದ್ದ ಮಚ್ಚ ಮತ್ತು ಮುಲಾಮರನ್ನು ಪರಮಶತ್ರುಗಳನ್ನಾಗಿ ಮಾಡಿಬಿಟ್ಟವು. ಇದರ ಪರಿಣಾಮವೇ ಸುಂಕದಕಟ್ಟೆಯಲ್ಲಿ ಮುಲಾಮ ಮಾಡಿಸಿದ ಡಬ್ಬಲ್ ಮರ್ಡರ್ ಮತ್ತು ಅದಕ್ಕೆ ಪ್ರತಿಯಾಗಿ ಮಚ್ಚನ ಶಿಷ್ಯರು ಪುನೀತೇಶ ಎಂಬ ಮುಲಾಮನ ಬಂಟನನ್ನು ಅಟ್ಟಾಡಿಸಿ ಕೊಂದದ್ದು. ಅದು ಸುಂಕದಕಟ್ಟೆ ಎಂಬ ಮತ್ತೊಂದು ಊರಿನ ದುರಂತವಾಗಿತ್ತು.

(ಮುಂದುವರೆಯುವುದು)

ಕುಮಾರಸ್ವಾಮಿ ಕೇಬಲೀಕರಣಕ್ಕೆ ಲೋಕಲ್ ನೆಟ್‌ವರ್ಕ್‌ಗಳು ಬಲಿ!

ಕೊಪ್ಪಳ-ರಾಯಚೂರು

ಜಾಗತೀಕರಣದ ಪ್ರಭಾವಕ್ಕೆ ತೇಗೆ ಈ ದೇಶದ ಪಟ್ಟಣದ ಮಧ್ಯಮ, ಕೆಳವರ್ಗಗಳು ಕಂಗೆಟ್ಟಿ ...ೇ, ಅದೇ ರೀತಿ ಈ ರಾಜ್ಯದ ಘನ ಮುಖ್ಯಮಂತ್ರಿ ...ಡಿ. ಕುಮಾರಸ್ವಾಮಿ ಪತ್ನಿ ಅನಿತಾ ಕುಮಾರ ...ಯುವರ ಕೇಬಲೀಕರಣಕ್ಕೆ ನಾಡಿನ ಸಣ್ಣ-ಪುಟ್ಟ ...ರೇಟರ್‌ಗಳು ತರಗಲೆಯಂತೆ ...ರಿಹೋಗುತ್ತಿದ್ದಾರೆ. ಇವತ್ತು ತಂತ್ರ ... ಯಾವ ಪರಿ ಬೆಳೆದಿದೆ ಎಂದರೆ ... ಹಳಿಗಳ ಪಕ್ಕ ಹಾಕಿರುವ ಓಎಫ್‌ಸಿ ...ಲ್ ಮೂಲಕವೂ ಇಂದು ಕೇಬಲ್ ಚಾನೆಲ್‌ಗಳನ್ನು ...ರ ಮಾಡಬಹುದು. ಮೊದಲಿನಂತೆ ಆಂಟೇನಾ ...ಿ, ವೈರ್ ಎಳೆಯುವ ಅವಶ್ಯಕತೆ ಇಲ್ಲ. ಒಂದು ... ಈ ಓಎಫ್‌ಸಿ ಲಿಂಕ್ ತಗೊಂಡು, ಎಲ್ಲಿಗೆ ...ಾದರೂ ಲಿಂಕ್ ಕೊಡಬಹುದು, ಇರಲಿ.


ಸದರಿ ಕುಮಾರಸ್ವಾಮಿಯ ಕೇಬಲೀಕರಣಕ್ಕೆ ...ಯಾದ ಒಂದು ಉದಾಹರಣೆ ರಾಯಚೂರಿನ ...ಕ ಮೇಘಾ ಚಾನೆಲ್‌ನ ಒತ್ತಾಯದ ಖರೀದಿ. ...ಮ, ಇದು ಸದ್ದಿಲ್ಲದೇ ಎರಡು ತಿಂಗಳ ಹಿಂದೆ ...ಮಹೋಗಿದೆ. 1999ರಲ್ಲಿ ಕ್ಯಾಪ್ಟನ್ ಚೌಧರಿ ಎನ್ನುವ ...ಟರಿಯ ಮಾಜಿ ಸೈನಿಕ ಮೇಘಾ ಚಾನೆಲ್ ಚಾಲೂ ...ಡಿದ್ದರು. ಅವರಿಗೆ ಕೇಂದ್ರ ವಾರ್ತಾ ಮತ್ತು ಪ್ರಸಾರ ...ತೀಯ ಅನುಮತಿ ಇತ್ತೋ ಇಲ್ಲವೋ ಗೊತ್ತಿಲ್ಲ. ...ನಲ್ಲಿ ನಿತ್ಯ ಲೋಕಲ್ ಸುದ್ದಿಗಳನ್ನು ತೋರಿಸಲಾ...ತ್ತು ಮತ್ತು ಅದು ಪಾಪುಲರ್ ಆಗಿತ್ತು. ಈ ...ಘಾ ಚಾನಲ್ ವಿರುದ್ಧ ಆನಂತರ ಆರಂಭವಾದ ...ನೈಟೆಡ್ ಕೇಬಲ್ ನೆಟ್‌ವರ್ಕ್ ಎಂಬುದು ...ದರೂ ಅದು ಅಷ್ಟು ಗಮನ ಸೆಳೆಯಲಿಲ್ಲ.

2001 ರಲ್ಲಿ ಆರ್‌ಸಿಎನ್ ಎಂಬ ಹೊಸ ಕೇಬಲ್ ...ವರ್ಕ್ ಆರಂಭವಾಯಿತು. ಒಂದೆಡೆ ಮೇಘಾ, ...ನ್ನೊಂದೆಡೆ ಆರ್‌ಸಿಎನ್! ಇವೆರಡರಲ್ಲಿ ಅಂದಿನ ...ರಾಯಚೂರು ನಗರಸಭೆಯ ಅಧ್ಯಕ್ಷ ಈರಣ್ಣನ ...ಭ್ರಷ್ಟಾಚಾರಗಳನ್ನೆಲ್ಲಾ ಮೇಘಾ ಬಿತ್ತರಿಸಿತ್ತು. ಆ ಸೇಡಿಗೆ ...ದಾ ಕೇಬಲ್ ನೆಟ್‌ವರ್ಕ್‌ನ್ನು ಈರಣ್ಣ ಆರಂಭಿಸಿ... ಆದರೆ ಯಾವ ಮೇಘಾ ಚಾನಲ್‌ನ್ನು ಮುಗಿಸಲು ...ದಾ ಕೇಬಲ್ ನೆಟ್‌ವರ್ಕ್ ಅನ್ನು ಆರಂಭಿಸಿದ್ದನೋ ...ಂದು ಬಟ್ಟು ಆರೇ ತಿಂಗಳಿಗೆ ಶಾರದಾ ಸೇರಿದಂತೆ ...ವೂ ಅಡ್ಡ-ಉದ್ದ ಮಲಗಿಬಿಟ್ಟವು.

ಆದರೆ ನೂರೆಂಟು ಹಗರಣಗಳ ಸರದಾರ ಈರಣ್ಣ ...ನಿರಲಿಲ್ಲ. ಮತ್ತೆ ಮೂರು ವರ್ಷಗಳ ನಂತರ 2005 ರಲ್ಲಿ ಪದ್ಮಶ್ರೀ ನೆಟ್‌ವರ್ಕ್ ಮೂಲಕ ಮೇಘಾ ಚಾನಲ್‌ನ್ನು ಹಣಿಯಲು ಹೊರಟ. ಈತನ ಪದ್ಮಶ್ರೀಯನ್ನು ಆಗಿನ ಸಿಎಂಸಿ ಮೆಂಬರ್ ರಹೀಂ ಮತ್ತು ಅಶೋಕ ನಡೆಸುತ್ತಿದ್ದರು. ಆದರೆ ಅದ್ಯಾವುದೋ ಕಾರಣಕ್ಕೆ ಇವರಿಬ್ಬರ ನಡುವೆ ಜಗಳ ಪ್ರಾರಂಭವಾಯಿತು. ಇವರ ಜಗಳ ಕಂಡು ರೋಸಿಹೋದ ಈರಣ್ಣ ತನ್ನ ಪದ್ಮಶ್ರೀಯನ್ನು ಒಯ್ದು ಮತ್ತದೇ ಮೇಘಾದೊಳಗೆ ಮರ್ಜ್ ಮಾಡಿ ಎರಡನೆ ಸಾರಿ ಸೋಲೊಪ್ಪಿಕೊಂಡ.

ಒಳಗೊಳಗೇ ಬೆದರಿಸುವ ತಂತ್ರಗಳೂ ನಡೆದವು.

ಒಮ್ಮೆಯಂತೂ ಸ್ವತಃ ಅನಿತಾ ಮೇಡಂ ಬಂದುಹೋದರೂ ಚೌಧರಿ ಬಗ್ಗಲಿಲ್ಲವಂತೆ. ಕೊನೆಗೆ ಕಾಣದ ಕಾರಣಕ್ಕೆ ಬಾಗಿದ ಚೌಧರಿಯನ್ನು ಪಳಗಿಸಿ



"ನಾನೇನು, ನನ್ನ ಲೆವೆಲ್ ಏನು!? ನನ್ನ ಕಂಡ್ರೆ ಬೇಸಿಗೆಯೊಳಗೂ ನಡುಗಬೇಕು, ಚಳಿಯಲ್ಲೂ ಬೆವರ ಬೇಕು" ಎನ್ನುವ ಈರಣ್ಣನಿಗೆ ತಾನು ಬರೀ ನಗರಸಭೆಗೆ ಅಧ್ಯಕ್ಷನಾದರೆ ಅದು ತನ್ನ ವೈಟ್‌ಗೆ ತಕ್ಕದ್ದಲ್ಲ ಅಂತ ತಾನು ಎಂಎಲ್‌ಎ ಕ್ಯಾಂಡಿಡೇಟ್ ಅಂತ ಹೇಳಿಕೊಂಡರೂ ಕಾಂಗ್ರೆಸ್‌ನಲ್ಲಿ ಅವಕಾಶಗಳ ಕೊರತೆ. ಹೀಗಾಗಿ ಕಾಂಗೈಗಳ ಜೊತೆ ಜಗಳ ಆಡಿ ಜನತಾ ದಳಕ್ಕೆ ಜಂಪ್ ಹೊಡೆದ ಈರಣ್ಣ! ಅದೇ ಹೊತ್ತಿಗೆ ಕುಮಾರಸ್ವಾಮಿ ಪತ್ನಿ ಅನಿತಾರವರ ಅಮೋಘ ಆರಂಭವಾದದ್ದು. ಅದರಲ್ಲೂ ರೈಲು ಹಳಿಗುಂಟ ಅಮೋಘ ಬರುತ್ತಿದ್ದಾಗ, ಈರಣ್ಣನೆ ಓಡಾಡಿ ಅಮೋಘವನ್ನು ಕರೆತಂದು ತನ್ನ ಒಂದು ಕಾಲದ ವಿರೋಧಿ ಮೇಘಾ ಚಾನೆಲ್‌ನ್ನು ಖರೀದಿಸುವಂತೆ ದುಂಬಾಲು ಬಿದ್ದ. ಆದರೆ ಕ್ಯಾಪ್ಟನ್ ಚೌಧರಿ "ಇದನ್ನು ಮಾರಲು ನಾನು ಸಿದ್ಧವಿಲ್ಲ" ಎಂದಾಗ ಅವರನ್ನು

ಎರಡು ಕೋಟಿ ರೂ.ಗೆ ಮೇಘಾ ನೆಟ್‌ವರ್ಕ್ ಖರೀದಿಯಾಗಿ ಹೋಗಿದೆ. ಮಾಲೀಕನಾಗಿದ್ದ ಚೌಧರಿ ಕುಮಾರಸ್ವಾಮಿಯ ಕೇಬಲೀಕರಣಕ್ಕೆ ಈಗ ಕೇವಲ ಸಂಚಾಲಕ. ಇಲ್ಲದಿದ್ದರೆ ಅದೂ ಇಲ್ಲ. ಈತನಂತೆ ಹತ್ತಾರು ಆಪರೇಟರ್‌ಗಳು ಅತಂತ್ರ ಸ್ಥಿತಿಯಲ್ಲಿದ್ದಾರೆ.


ಇಷ್ಟು ಮಾಡಿದ್ದಕ್ಕೆ "ಕುಮಾರಸ್ವಾಮಿ ನೆಕ್ಸ್ಟ್ ನನಗೇ ಟಿಕೆಟ್ ಕೊಡ್ತಾರೆ, ನಾನು ಗೆದ್ದಂಗೆ" ಅಂತ ಈರಣ್ಣ ಭ್ರಮಿಸುತ್ತಿದ್ದಾನೆ. ಸದ್ಯ ಈರಣ್ಣ ರಾಜ್ಯ ಜೆಡಿಎಸ್‌ನ ಪ್ರಧಾನ ಕಾರ್ಯದರ್ಶಿ.

ಇದೇರೀತಿ ಕುಮಾರಸ್ವಾಮಿಯ ಅಮೋಘಕ್ಕೆ ಧಾರವಾಡದ ಸಂಪೂರ್ಣ ಕೇಬಲ್ ಲೈನ್‌ಗಳು, ಹುಬ್ಬಳ್ಳಿಯ ಅರ್ಧದಷ್ಟು ನೆಟ್‌ವರ್ಕ್ ಬಂದಿವೆ. ಗದಗನಲ್ಲೂ ಅಮೋಘ ಆರಂಭವಾಗಿದೆ.

ಈ ನಡುವೆ ಗಣಿ ಧಣಿ ಜನಾರ್ದನ್ ರೆಡ್ಡಿ ಕೂಡ ಬಳ್ಳಾರಿಯಲ್ಲಿ ನೆಟ್‌ವರ್ಕ್ ಆರಂಭಿಸಿದ್ದಾರೆ. ಒಟ್ಟಿನಲ್ಲಿ ಗಣಿ ಧೂಳನ್ನು ಪರಸ್ಪರ ಎರಚಾಡಿದ್ದ ಜನಾರ್ದನ ರೆಡ್ಡಿ-ಕುಮಾರಸ್ವಾಮಿ ಈಗ ಕೇಬಲ್ ವೈರ್ ಹಿಡಿದು ಬಡಿದಾಡಲಿದ್ದಾರೆ. ಇನ್ಮುಂದೆ ರೈಲು ಹಳಿ ಇರುವ ಊರಲ್ಲೆಲ್ಲಾ ಈ ಎರಡು ಕೇಬಲ್‌ಗಳು ಬಡಿದಾಡಿಕೊಳ್ಳುವುದು ಖಚಿತ. ಆದರೆ ಈ ಇಬ್ಬರ ದರ್ಪಕ್ಕೆ ಸಣ್ಣ-ಪುಟ್ಟ ಆಪರೇಟರ್‌ಗಳು ಮಾತ್ರ ಚಿಂದಿಯಾಗುತ್ತಿದ್ದಾರೆ.

-ವರದಿಗಾರ

ಅನ್ಸಾರಿದು ಇದೇ ಕಥೆ!



ಯಾವಾಗ ರಾಯಚೂರಿನಲ್ಲಿ ತನ್ನ ವಿರುದ್ಧ ನ್ಯೂಸ್ ತೋರಿಸುತ್ತಿದ್ದ ಮೇಘಾ ನೆಟ್‌ವರ್ಕ್ ಅನ್ನು ಮಣಿಸಲು ಈರಣ್ಣ ತನ್ನದೇ ಕೇಬಲ್ ಚಾನೆಲ್ ಆರಂಭಿಸಿದನೋ ಅದೇ ರೀತಿ ಪಕ್ಕದ ಕೊಪ್ಪಳ ಜಿಲ್ಲೆಯ ಗಂಗಾವತಿಯ ಇಂದಿನ ಸಚಿವ ಇಕ್ಬಾಲ್ ಅನ್ಸಾರಿಯೂ ಮಾಡಿದ್ದ. ನಾಲ್ಕು ವರ್ಷಗಳ ಹಿಂದೆ ತನ್ನ ವಿರೋಧಿ ಶ್ರೀನಾಥ ಪರ ಅಲ್ಲಿನ ಸಿಬಿಎಸ್ ಚಾನಲ್ ಸುದ್ದಿ ತೋರಿಸುತ್ತದೆ ಅಂತ ಕಾರಣಕ್ಕೇ ಈತ ATV (ಅನ್ಸಾರಿ ಟೆಲಿವಿಷನ್) ಆರಂಭಿಸಿ ಕಡಿಮೆ ದರದಲ್ಲಿ ಪಾಪುಲರ್ ಆದ. ಕಳೆದ ಚುನಾವಣೆ ಸಂದರ್ಭದಲ್ಲಿ ತನ್ನ ಚಾನೆಲ್ ಮೂಲಕ ಪುಕ್ಕಟೆ ಪ್ರಚಾರ ಪಡೆದು ಕೂದಲೆಳೆಯಲ್ಲಿ ಗೆದ್ದ. ಆದರೆ ಮಂತ್ರಿಯಾದ ಮೇಲೆ ATV ಮೆಂಟೇನ್ ಮಾಡಲಾಗದೇ ಆಂಧ್ರದವರಿಗೆ ಲೀಸ್ ಮೇಲೆ ಕೊಟ್ಟಿದ್ದಾನೆ.

ರಾಯಚೂರಿನ ಈರಣ್ಣ ಗಂಗಾವತಿಯ ಇಕ್ಬಾಲ್‌ಣ್ಣ ಇಬ್ಬರೂ ಮುಗ್ಗರಿಸಿದ್ದು ಸೇಮ್‌ಸ್ಟೋರಿ. ಸದ್ಯ ಗಂಗಾವತಿಗೆ ರೈಲು ಸೌಲಭ್ಯವಿಲ್ಲ. ಹೀಗಾಗಿ ಅಲ್ಲಿಗೆ ಕುಮಾರಸ್ವಾಮಿಯ ಅಮೋಘ ಬರಲ್ಲ. ಆ ಮಟ್ಟಿಗೆ ಅನ್ಸಾರಿ ಲೀಸ್‌ಗೆ ಬಿಟ್ಟಿರುವ ಚಾನೆಲ್ ಸೇಫು!

ಮಹಾ ವಂಚಕ ಸಿದ್ಧಲಿಂಗಸ್ವಾಮಿ ಪೊಲೀಸ್ ಕಸ್ಟಡಿಯಿಂದ ಪರಾರಿ

ಮೈಸೂರು

ಕೊಪ್ಪಳ ಎಸ್ಪಿ ಎಚ್.ಎನ್. ಸಿದ್ಧಣ್ಣನ ಖಾಸಾ ... ಎಂದು ಹೇಳಿಕೊಂಡು ಸೈಟು ಕೊಡಿಸುತ್ತೇನೆ, ... ಡಬ್ಲಿಂಗ್ ಮಾಡುತ್ತೇನೆ ಎಂದೆಲ್ಲಾ ಬೊಗಳೆ ... ಬೆಂಗಳೂರು-ಮೈಸೂರು ಭಾಗದಲ್ಲಿ ಲಕ್ಷಾಂತರ ...ಾಯಿ ವಂಚನೆ ಮಾಡಿ, ಮೂರು ತಿಂಗಳ ಹಿಂದೆ ...ೀಸರಿಗೆ ಸಿಕ್ಕಿಬಿದ್ದಿದ್ದ ಈ ಸಿದ್ಧಲಿಂಗಸ್ವಾಮಿ ...ೋಟಾನೋಟಿನ ಜಾಲವೊಂದರ ಸದಸ್ಯನಾಗಿದ್ದ. ಇವನು ...ಸೂರು ಜೈಲಲ್ಲಿ ಕಂಬಿ ಎಣಿಸುತ್ತಿದ್ದ. ಇದೇ ...ಲಿಂಗಸ್ವಾಮಿ ಚಿಕಿತ್ಸೆ ನೆಪದಲ್ಲಿ ಬೆಂಗಳೂರು ಜಯ... ಆಸ್ಪತ್ರೆಗೆ ಬಂದು ಅಲ್ಲಿ ರಿಸರ್ವ್ ಪೊಲೀಸರಿಗೆ ...ಹಣ್ಣು ತಿನ್ನಿಸಿ ಲೀಡಿಂಗ್ ಚೈನು, ಹ್ಯಾಂಡ್‌ಕಪ್ ...ತ ಈಗ ಪರಾರಿಯಾಗಿದ್ದಾನೆ.

...ಎಸ್.ಪಿ. ಸಿದ್ಧಣ್ಣನ ಕಸಿನ್ ಬ್ರದರ್ ಆದ ...ಲಿಂಗಸ್ವಾಮಿ ವಂಚನೆಗೆ ಎಂತೆಂಥವರು ಎಷ್ಟೆಷ್ಟು ...ಟ್ಟು ಪಂಗನಾಮ ಹಾಕಿಸಿಕೊಂಡರೆಂಬುದಕ್ಕೆ ...ಳೂರು, ಮೈಸೂರು ಇತರೆ ಪೊಲೀಸ್ ಠಾಣೆಯಲ್ಲಿ ...ಲಾಗಿರುವ ಸಾಕಷ್ಟು ದೂರುಗಳು ಸಾಕ್ಷಿ ನುಡಿ...ತ್ತವೆ.


ಪೊಲೀಸರಿಂದ ತಲೆ ಮರೆಸಿಕೊಂಡಿದ್ದ ವಂಚಕ ...ಲಿಂಗಸ್ವಾಮಿ ಮೂಲತಃ ಮೈಸೂರು ಜಿಲ್ಲೆಯ ...ರಸೀಪುರ ತಾಲ್ಲೂಕಿನ ಚಿಕ್ಕಬಾಗಿಲಿನವನಾದರೂ, ...ೇಗಾಲ ಇವನ ಕಾರ್ಯಕ್ಷೇತ್ರವಾಗಿತ್ತು.

...ಇತ್ತೀಚೆಗೆ ಮೈಸೂರಿನ ಉಪನ್ಯಾಸಕ ...ಮಣ್ಣ ಎಂಬುವರ ಪತ್ನಿ ...ಬಿಸಿ ಏಜೆಂಟ್)ಯಿಂದ ತನ್ನ ... ಬಿಡಿಎನಲ್ಲಿ ನೌಕರಿಯಲ್ಲಿದ್ದಾರೆ, ತಾನು ಎಸ್ಪಿಯ ...ೋದರ, ನಿಮಗೊಂದು ಸೈಟು ಕೊಡಿಸುತ್ತೇನೆಂದು ..., ಬರೋಬ್ಬರಿ ಒಂದೂವರೆ ಲಕ್ಷ ಕಿತ್ತು ಮೋಸ ...ದ್ದ ಸಿದ್ಧಲಿಂಗಸ್ವಾಮಿ. ಈ ಬಗ್ಗೆ ಕೊಳ್ಳೇಗಾಲ ... ಠಾಣೆಯಲ್ಲಿ ದೂರು ದಾಖಲಾಯಿತು.

...ಹಾ ವಂಚಕ ಸಿದ್ಧಲಿಂಗಸ್ವಾಮಿಯನ್ನು ಕಳೆದ ...ರ್‌ನಲ್ಲಿ ಹರಸಾಹಸ ಮಾಡಿ ಕೊಳ್ಳೇಗಾಲ ಎಸ್‌ಐ ... ಸಿದ್ಧಪ್ಪ, ಡಿವೈಎಸ್‌ಪಿ ಡಿ.ಸಿ. ನಾಗರಾಜ್ ... ವಿಚಾರಣೆ ನಡೆಸಿದರು. ಮಾಡಿದ ಎಲ್ಲಾ [illegible]

ವಂಚಿಸಿರುವುದಾಗಿ ತಿಳಿಸಿದ. ಪೊಲೀಸರ ಟ್ರೀಟ್‌ಮೆಂಟಿನ ಡಿಗ್ರಿಗಳು ಹೆಚ್ಚಿದಂತೆ ಖೋಟಾನೋಟು ದಂಧೆ ನಡೆಸುತ್ತಿರುವುದಾಗಿಯೂ ಬಾಯಿಬಿಟ್ಟ!

ತನ್ನ ಸಹೋದರ ಸಂಬಂಧಿ ಪಿರಿಯಾಪಟ್ಟಣ ತಾಲ್ಲೂಕಿನ ಬೈಲಗುಪ್ಪೆಯ ಸಿ.ಎಂ. ರಾಜು ಎಂಬುವನ ಫೋಟೋ ಸ್ಟುಡಿಯೋದಲ್ಲಿ ನಕಲಿ ನೋಟು ಪ್ರಿಂಟು ಮಾಡುತ್ತಿರುವುದಾಗಿ ತಿಳಿಸಿದ. ತಕ್ಷಣ ಪೊಲೀಸರು ರಾಜುವನ್ನು ಬಂಧಿಸಿ, ದಂಧೆಗೆ ಬಳಸುತ್ತಿದ್ದ ಸ್ಟುಡಿಯೋದ ಕಂಪ್ಯೂಟರ್ ಮತ್ತೆಲ್ಲವನ್ನೂ ಜಪ್ತಿ ಮಾಡಿದ್ದರು.



ಸಿದ್ಧಲಿಂಗಸ್ವಾಮಿ

ಹೆಚ್ಚಿನ ವಿಚಾರಣೆಗಾಗಿ ರಾಜು ಮತ್ತು ಸಿದ್ಧಲಿಂಗಸ್ವಾಮಿಯನ್ನು ಮೈಸೂರಿನ ಐಜಿಪಿ ಶರ್ಮ ಅವರ ವಶಕ್ಕೆ ಒಪ್ಪಿಸಿದರು. ಆದರೆ ಈ ದಂಧೆಯಲ್ಲಿ ಭಾಗಿಗಳೆನ್ನಲಾದ ರಾಜುವಿನ ಖಾಸಾ ತಮ್ಮ ಮಹದೇವ ಮತ್ತು ಸಂಬಂಧಿ ಚಂದ್ರು ಪೊಲೀಸರಿಗೆ ಸಿಗದೇ ಜಾಮೀನು ಪಡೆದುಬಿಟ್ಟರು.

[illegible]

ವಂಚಕ ಸಿದ್ಧಲಿಂಗಸ್ವಾಮಿ ಬಂಧನಕ್ಕೆ ಮುಂಚೆಯೂ ಪೊಲೀಸರ ಕಣ್ತಪ್ಪಿಸಿಕೊಂಡು ಎಷ್ಟು ಕಾಡಿದ್ದನೋ, ಅದಕ್ಕಿಂತ ಬಂಧನಕ್ಕೊಳಗಾದ ಮೇಲೂ ಪೊಲೀಸರನ್ನು ಹೆಚ್ಚು ಬೇಸ್ತು ಬೀಳಿಸಿದ್ದಾನೆ.

ಠಾಣೆಯಲ್ಲಿ ಡಿವೈಎಸ್‌ಪಿ ನಾಗರಾಜ್ ವಿಚಾರಣೆ ಮಾಡುವಾಗ ತನ್ನ ನಖರಾ ಶುರು ಮಾಡಿದ ಸಿದ್ಧಲಿಂಗಸ್ವಾಮಿ "20 ಗುಂಡು ಪಿನ್ನು ನುಂಗಿದ್ದೇನೆ, ಹೊಟ್ಟೆ ನೋಯುತ್ತಿದೆ" ಎಂದು ಅವಲತ್ತುಕೊಂಡಿದ್ದ. ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ಮಾಡಿ ಪರೀಕ್ಷಿಸಿದಾಗ ನಾಲ್ಕು ಗುಂಡು ಪಿನ್ನುಗಳು ಪತ್ತೆಯಾದವು. ಪೊಲೀಸರು ಚಿಕಿತ್ಸೆ ಕೊಡಿಸಿದರು.

ಸಿದ್ಧಲಿಂಗಸ್ವಾಮಿಯನ್ನು ಸಂಭಾಳಿಸುವುದು ತಮ್ಮ ನೌಕರಿಗೆ ಕುತ್ತು ತರುತ್ತದೆಂದು ಭಾವಿಸಿದ ಪೊಲೀಸರು ಮೈಸೂರಿನ ಸಬ್ ಜೈಲಿಗೆ ಅಟ್ಟಿದರು. ಅಲ್ಲೂ ಇವನ ನಖರಾಗಳು ಕಡಿಮೆ ಆಗಲಿಲ್ಲ. ಸೆಂಟ್ರಲ್ ಜೈಲಿಗೆ ಪ್ರಮೋಷನ್ ಮಾಡಿದರು.

ಇಷ್ಟಾದರೂ ಸುಮ್ಮನಾಗದ ಸಿದ್ಧಲಿಂಗಸ್ವಾಮಿಯು ಮೊನ್ನೆ ಫೆ. 21 ರಂದು ಬ್ಲೇಡು ನುಂಗಿದ್ದೇನೆಂದು ಹೇಳಿ ನರಳಾಟ ಶುರು ಮಾಡಿದ್ದಾನೆ. ಚಿಕಿತ್ಸೆಗಾಗಿ ಮೈಸೂರಿನ ರಿಸರ್ವ್ ಪೊಲೀಸರು ಬೆಂಗಳೂರಿಗೆ ಕರೆತಂದು ಬೆಂಗಳೂರಿನ ರಿಸರ್ವ್ ವಾಹನದಲ್ಲಿ ಜಯದೇವ ಆಸ್ಪತ್ರೆಯಲ್ಲಿ ಪರೀಕ್ಷಿಸಿದ್ದಾರೆ. ಅವನು ಬ್ಲೇಡು ನುಂಗಿದ್ದನೋ ಇಲ್ಲವೋ ಎಂದು ಖಾತ್ರಿ ಮಾಡಿಕೊಳ್ಳುತ್ತಿದ್ದಾಗ ಪೊಲೀಸರು ಕರೆದೊಯ್ದು ವಾಹನದಲ್ಲಿ ಕೂರಿಸಿದ್ದಾರೆ.

ಲೀಡಿಂಗ್ ಚೈನ್ ಮತ್ತು ಹ್ಯಾಂಡ್‌ಕಫ್ ಹಾಕಿದ್ದರಿಂದ ಪೊಲೀಸರು ಒಂದಷ್ಟು ನೆಗ್ಲೆಕ್ಟ್ ಮಾಡಿದ್ದಾರೆ. ಅದನ್ನೇ 'ಸುವರ್ಣ ಅವಕಾಶ ಎಂದು ಬಳಸಿಕೊಂಡು ಸಿದ್ಧಲಿಂಗಸ್ವಾಮಿ ಇದ್ದ ಸ್ಥಿತಿಯಲ್ಲೇ ಪರಾರಿಯಾಗಿದ್ದಾನೆ.

ಜಯದೇವ ಆಸ್ಪತ್ರೆಯಲ್ಲಿ ಬ್ಲೇಡು ನುಂಗಿಲ್ಲ ಎಂಬುದು ಸಾಬೀತು ಆದ ಮೇಲೂ ಸಿದ್ಧಲಿಂಗಸ್ವಾಮಿಯನ್ನು ಪೊಲೀಸರು ಏಕೆ ಬಿಗಿ ಮಾಡಲಿಲ್ಲ? ಪೊಲೀಸರನ್ನು ಖೋಟಾನೋಟಿನ ದಂಧೆಯವರು ಬುಕ್ ಮಾಡಿದರ? ತನ್ನ ಕಸಿನ್ ಬ್ರದರ್ ಮೇಲೆ ಕೊಪ್ಪಳದ ಎಸ್ಪಿ ಏನಾದರೂ ಕರುಣೆ ತೋರಿದರಾ? ಬಹುಶಃ ಈ ಪ್ರಶ್ನೆಗಳಿಗೆಲ್ಲ ಪೊಲೀಸರಲ್ಲಿ ಉತ್ತರವಿರಲಾರದು.

ಮಾಮೂಲಿಯಂತೆ, ಪೊಲೀಸ್ ಕಸ್ಟಡಿಯಿಂದ ಆರೋಪಿಗಳು ತಪ್ಪಿಸಿಕೊಂಡಾಗಲೆಲ್ಲಾ ಮಾಡುವಂತೆ ಹಿರಿಯ ಪೊಲೀಸ್ ಅಧಿಕಾರಿಗಳು ಸಿದ್ಧಲಿಂಗಸ್ವಾಮಿಯನ್ನು ಆಸ್ಪತ್ರೆಗೆ ಕರೆದೊಯ್ದಿದ್ದ ಎಎಸ್‌ಐ ಮಾದಯ್ಯ, ಹೆಡ್‌ಕಾನ್ಸ್‌ಟೇಬಲ್ ಮಲ್ಲೇಶ್, ಕಾನ್ಸ್‌ಟೇಬಲ್ ಗಂಗಾಧರ, ಸುರೇಶ್ ಎಂಬ ನಾಲ್ವರನ್ನು ಅಮಾನತ್ತು ಮಾಡಿ ಕೈತೊಳೆದುಕೊಂಡಿದ್ದಾರೆ.

ಲೀಡಿಂಗ್ ಚೈನು ಮತ್ತು ಹ್ಯಾಂಡ್ ಕಫ್ ಸಮೇತ ಪರಾರಿಯಾಗಿರುವ ಸಿದ್ಧಲಿಂಗ ಅದನ್ನು ಬಿಚ್ಚಿಸಿಕೊಳ್ಳಲು ಮತ್ತೆ ಠಾಣೆಗೆ ಬಂದರೂ ಆಶ್ಚರ್ಯವಿಲ್ಲ. ಯಾಕೆಂದರೆ ಪೊಲೀಸರು ಅರೆಸ್ಟ್ [illegible] ಮತ್ತೆ ಪರಾರಿ [illegible] ಬಟ್ಟೆ [illegible] ಸ್ವಾಮಿಗಿದೆ.

-ಚಿಕ್ಕಮಾಳಿಗೆ

ಪೋಲೀಸರ ಗೂಂಡಾಗಿರಿ

ಕಳ್ಳತನದ ಕೇಸಿನಲ್ಲಿ ಸಿಕ್ಕವರಿಗೆ ಕತ್ತರಿ ಹಾಕಿ ಸಿಕ್ಕಿದ್ದನ್ನೆಲ್ಲ ಸ್ವಾಹಾ ಮಾಡುತ್ತಿರುವ ಇಲ್ಲಿನ ಪೊಲೀಸರನ್ನು ಕಂಡು ಜನ "ಇವರ ತೂಬಿಗೆ ಮಿತಿ ಇಲ್ಲವಾಂಗ ಆಗ್ಯೈತಿ" ಎಂದು ಲಟಿಕೆ ಮುರಿಯುತ್ತಿದ್ದಾರೆ. ಅದರಲ್ಲೂ ಡಿ.ವೈ.ಎಸ್.ಪಿ ಎಂ. ಎಂ. ಅಗಡಿಯ ಗರಡಿಯಲ್ಲಿ ತಯಾರಾಗಿರುವ ಖಾಕಿ ಖದೀಮರನ್ನು ಕಂಡರೆ ಜನ ಬೇಸ್ತು ಬೀಳುತ್ತಿದ್ದಾರೆ.

ಇದೇ ಅಗಡಿ ಸಾಹೇಬರು ತಮ್ಮ ತಿಂಗಳ ಮಾಮೂಲಿಯನ್ನು ಸಲೀಸಾಗಿ ಪಡೆಯಲು ಪೊಲೀಸ್ ಇಲಾಖೆಯ ವಿವಿಧ ವಿಭಾಗಗಳಿಂದ ಕೆಲವು 'ಗಟ್ಟಿ ಕಾಳು'ಗಳನ್ನು ಆಯ್ದುಕೊಂಡು ವಿಶೇಷ ಕಾರ್ಯಪಡೆಯೊಂದನ್ನು ರಚಿಸಿದ್ದರು. ಲಕ್ಷ್ಮೀ ಪೂಜೆಗೆ ಸಿದ್ಧವಾದ ಈ ಪಡೆ ಯಾವ ಕೇಸು ಯಾವ ಠಾಣೆಯಲ್ಲಿ ದಾಖಲಾದರೂ ಸರಿ, ತಮಗೆ ಬರಬೇಕಾದ ಮಾಮೂಲು ಬರಲೇಬೇಕೆಂದು ಕಾರ್ಯಕ್ಕೆ ಇಳಿಯುತ್ತಿತ್ತು. ಈ ಪಡೆಗೆ ಕಾಸು ಕೊಡದವರನ್ನು ಅನಧಿಕೃತವಾಗಿ ಬಂಧಿಸಿ ಲಾಠಿ ರುಚಿ ತೋರಿಸಲಾಗುತ್ತಿತ್ತು. ಈ ರುಚಿಯನ್ನು ತಡೆಯಲಾರದೆ ಆತ ಹಣ ತೆತ್ತನಂತರ ಅವನನ್ನು ಬಿಡುಗಡೆ ಮಾಡುತ್ತಿತ್ತು. ಮೊನ್ನೆಯೂ ಇಂತಹದ್ದೊಂದು ಪ್ರಕರಣ ನಡೆದು, ಅಗಡಿ ಸಾಹೇಬರ ವಿಶೇಷ ಕಾರ್ಯಪಡೆಯ ಮೂವರು ಸದಸ್ಯರು ಲೋಕಾಯುಕ್ತರ ಬಲೆ ಸಿಕ್ಕಿ ಬಿದ್ದಿದ್ದಾರೆ.



ಡಿ.ವೈ.ಎಸ್.ಪಿ. ಅಗಡಿ


[illegible]

ದಾವಣಗೆರೆ ಜಿಲ್ಲೆ ಬಸವಾಪಟ್ಟಣದ ಮಂಜುನಾಥ ತುಮಕೂರು ಜಿಲ್ಲೆಯ ಬರಗೂರು ಗ್ರಾಮದ ತಮ್ಮ ಭತ್ತದ ಗದ್ದೆಯ ಸಾಗುವಳಿಗೆಂದು ಉಕ್ಕಡಗಾತ್ರಿ ನಂದಿಗುಡಿಯ ಗದಿಗೇಶ ಎಂಬುವವರಿಂದ 40 ಸಾವಿರ ರೂಪಾಯಿ ಕೈಸಾಲ ಪಡೆದಿದ್ದ. ಭತ್ತದ ಬೆಳೆ ಬಂದ ನಂತರ ಹಣ ಹಿಂದಿರುಗಿಸುವುದಾಗಿ ವಾಗ್ದಾನವಾಗಿತ್ತು. ಆದರೆ ಸಮಯಕ್ಕೆ ಸರಿಯಾಗಿ ಯಾವುದೂ ನಡೆಯದಿದ್ದರಿಂದ, ನಂದಿಗುಡಿ ಗದಿಗೇಶ ಮಂಜುನಾಥನ ಮೇಲೆ ಸಿನಿಮಾ ಸ್ಟೈಲಿನಲ್ಲಿ ಅಟ್ಯಾಕ್ ಮಾಡಿದ್ದಾನೆ. ಈ ಘನಕಾರ್ಯದಲ್ಲಿ ಗದಿಗೇಶನಿಗೆ ನೆರವು ನೀಡಿದವನು ಅವನ ಸ್ನೇಹಿತ ಡ್ರೈವರ್ ಸುರೇಶ. ಇದಾದ ನಂತರ ಮಾಮೂಲಿನಂತೆ ಮಂಜುನಾಥ, ಗದಿಗೇಶ ಮತ್ತು ಸುರೇಶ- ಈ ಮೂವರೂ ಶಿರಾ ಪೊಲೀಸ್ ಠಾಣೆಯ ಅತಿಥಿಗಳಾಗಿದ್ದಾರೆ.

ಹಾವೇರಿ

ಈ ಘಟನೆ ನಡೆದದ್ದು ಫೆಬ್ರವರಿ 11ನೇ ತಾರೀಖು. ಅಂದು ರಾಜ್ಯದೆಲ್ಲೆಡೆ ಕಾವೇರಿ ಬಂದ್ ಇದ್ದದ್ದರಿಂದ ಅವರನ್ನು ಅದೇ ಠಾಣೆಯಲ್ಲಿ ಎರಡು ದಿನಗಳ ಕಾಲ ಕೂಳೆ ಹಾಕಲಾಗಿದೆ. ಮಂಜುನಾಥ ಮತ್ತು ಗದಿಗೇಶನ ನಡುವಿನ ಹಣಕಾಸಿನ ವ್ಯವಹಾರ ರಾಣೆಬೆನ್ನೂರಿನಲ್ಲಿ ನಡೆದಿದ್ದರಿಂದ ಅಲ್ಲೇ ವಿಚಾರಣೆ ನಡೆಯಲೆಂದು ಶಿರಾ ಎಸ್.ಐ ಮಂಜುನಾಥ ಮತ್ತು ಸುರೇಶನನ್ನು ರಾಣೆಬೆನ್ನೂರಿಗೆ ಕಳುಹಿಸಿದ್ದಾರೆ.

ಅಲ್ಲಿನ ಎಸ್.ಐ ಸತೀಶ್‌ರವರು ಮಂಜುನಾಥ ಮತು ಡ್ರೈವರ್ ಸುರೇಶನ ವಿಚಾರಣೆ ನಡೆಸಿ ಫೆ 15ರಂದು ಅವರನ್ನು ಮತ್ತೆ ಶಿರಾಕ್ಕೆ ಕಳುಹಿಸಬೇಕು ಅನ್ನುವಷ್ಟರಲ್ಲಿ ಅಗಡಿ ಸಾಹೇಬರ ವಿಶೇಷ ಪಡೆ ಅಲ್ಲಿಗೆ ಹಾಜರಾಗಿದೆ. ಹೆಡ್ ಕಾನ್ಸಟೇಬಲ್ ಮಂಜಪ್ಪ ಮತ್ತು ಪೇದೆಗಳಾದ ಜಿ.ಬಿ. ಕಾಳೆ, ಕೆ.ಎಚ್. ಸವೂರ, ಎಚ್. ಟಿ ಪಾಟೀಲ ಇದ್ದ ಆ ಪಡೆ "ನಮ್ಮ ತನಿಖೆ ಇನ್ನೂ ಮುಗಿದಿಲ್ಲ, ಮಂಜುನಾಥ ಬೇರೆ ಪ್ರಕರಣದಲ್ಲೂ ಬೇಕಾದವನಾಗಿದ್ದಾನೆ" ಎಂದು ಹೇಳಿ ಅವನನ್ನು ಅಗಡಿ ಸಾಹೇಬರ ಕಚೇರಿಗೆ ಕರೆದೊಯ್ದಿದ್ದಾರೆ. ಅದರಲ್ಲೂ ಅಪರಾಧದ ಹಿನ್ನಲೆಯುಳ್ಳ ಮಂಜುನಾಥನನ್ನು ಎಂಟು ದಿನಗಳ ಕಾಲ ಅನಧಿಕೃತವಾಗಿ ತಮ್ಮ ವಶದಲ್ಲಿ ಇರಿಸಿಕೊಂಡಿದ್ದಾರೆ. ಆದರೆ ಈ ಮಹಾತ್ಮರು ಅವನನ್ನು ಅದ್ಯಾವ ಕತ್ತಲೆ ಕೋಣೆಯಲ್ಲಿ ಇಟ್ಟಿದ್ದರೋ, ಅಗಡಿ ಸಾಹೇಬರಿಗೆ ಮಂಜುನಾಥನ ದರ್ಶನವೇ ಆಗಲಿಲ್ಲವಂತೆ.



ಲೋಕಾಯುಕ್ತ ಎಸ್.ಪಿ.
ಕೆ. ಎಸ್. ನಾಯಕ್

ಕೊನೆಗೂ ಡೀಲು ಕುದುರಿತು

"ಡೀಲ್ ಕುದುರಿಸುವುದರಲ್ಲಿ ನನ್ನದು ಎತ್ತಿದ ಕೈ" ಎನ್ನುವ ಪೊಲೀಸ್ ಪೇದೆ ಕಾಳೆ ಬಸವಾಪಟ್ಟಣದ ಮಂಜುನಾಥನ ಮನೆಗೆ ಫೋನ್ ಮಾಡಿ "ಐದು ಲಕ್ಷ ರೂಪಾಯಿ ಕೊಟ್ಟರೇ ಇವನನ್ನು ಬಿಡುತ್ತೇವೆ" ಎಂದು ಬೆದರಿಸಿದ್ದಾನೆ. ಇದನ್ನು ಕೇಳಿ ಮಂಜುನಾಥನ ಹೆಂಡತಿ ಹಾಗೂ ಸಹೋದರ ಬೆಚ್ಚಿಬಿದ್ದಿದ್ದಾರೆ. ಹೇಗಾದರೂ ಮಾಡಿ ಆತನನ್ನು ಬಿಡಿಸಿಕೊಳ್ಳಬೇಕೆಂದು ಕಂಡಕಂಡವರ ಮುಂದೆ ಹಣಕ್ಕೆ ಕೈಚಾಚಿದ್ದಾರೆ. ಕೊನೆಗೆ ದಾವಣಗೆರೆಯಲ್ಲಿರುವ ಸ್ನೇಹಿತ ಕೃಷ್ಣಮೂರ್ತಿಗೆ ನಡೆದ ಕಥೆ ಹೇಳಿದ್ದಾರೆ. ಕಳ್ಳನಿಗೆ ಹೇಗೆ ಕಳ್ಳನೇ ಮದ್ದೋ ಹಾಗೆಯೇ ಪೊಲೀಸರಿಗೆ ಪೊಲೀಸರೇ ಮದ್ದು ಎಂದು ಅರಿತ ಕೃಷ್ಣಮೂರ್ತಿಯವರು ದಾವಣಗೆರೆ ವಲಯದ ಲೋಕಾಯುಕ್ತ ಎಸ್.ಪಿ. ಕೆ. ಎಸ್. ನಾಯಕ್ ಅವರಿಗೆ ರಾಣೆ ಬೆನ್ನೂರಿನ ಪೊಲೀಸರ ವಿರುದ್ಧ ದೂರು ದಾಖಲಿಸಿದ್ದಾರೆ.



ಪ್ರಭಾರಿ ಎಸ್.ಪಿ.
ಹೊನ್ನಾಳ

ಲೋಕಾಯುಕ್ತ ಪೊಲೀಸರು ಹೆಣೆದ ಪ್ಲಾನ್ ಪ್ರಕಾರ ಪೇದೆ ಕಾಳೆಗೆ ಒಂದೂವರ ಲಕ್ಷ ರೂಪಾಯಿಗಳನ್ನು ಕೊಡುವುದಾಗಿ ಕೃಷ್ಣಮೂರ್ತಿ ಹೇಳಿದ್ದಾರೆ. ಫೆ. 17ರಂದು ಲೋಕಾಯುಕ್ತರೊಂದಿಗೆ ರಾಣೆಬೆನ್ನೂರಿಗೆ ಬಂದು ಪಿ.ಸಿ. ಕಾಳೆನ ಮೊಬೈಲ್‌ಗೆ ಕರೆ ಮಾಡಿದ್ದಾರೆ. ಆಗ ಪೇದೆ ಕಾಳೆ "ರಾಣೆಬೆನ್ನೂರಿನ ಬಸ್ ಸ್ಟ್ಯಾಂಡ್ ಹತ್ತಿರದ ರೇಣುಕಾ ಹೋಟೆಲ್‌ಗೆ ಬನ್ನಿ. ಅಲ್ಲಿಗೇ ಮಂಜುನಾಥನನ್ನು ಕರೆತರುತ್ತೇವೆ" ಎಂದಿದ್ದಾನೆ. ಸಮಯಕ್ಕೆ ಸರಿಯಾಗಿ ಹಾಜರಾದ ಕಾನ್‌ಸ್ಟೇಬಲ್ ಕಾಳೆ, ಸವೂರ ಹಾಗೂ ಪಾಟೀಲ "ಬೇಗ ಹಣ ಕೊಡಿ" ಎಂದಾಗ, ಕೃಷ್ಣಮೂರ್ತಿ "15 ಸಾವಿರ ಮಾತ್ರ ಇದೆ. ಉಳಿದದ್ದನ್ನು ಮುಂದೆ ನೋಡೋಣ" ಎಂದಿದ್ದಾರೆ. ಇದನ್ನು ಕೇಳಿ ಸಿಟ್ಟಿಗೆದ್ದ ಪೊಲೀಸರು ಅವರ ಕೈಯಲ್ಲಿದ್ದ ಹಣವನ್ನು ಕಿತ್ತುಕೊಂಡು "ಉಳಿದದ್ದನ್ನು ಕೊಟ್ಟ ನಂತರ ಮಂಜುನಾಥನನ್ನು ಬಿಡುತ್ತೇವೆ" ಎಂದು ಹೇಳಿದ್ದಾರೆ. ಅಷ್ಟೇ ಅಲ್ಲದೆ, ಕಾಳೆಯೊಂದಿಗಿದ್ದ ಇತರೆ ಪೇದೆಗಳು ಮಂಜುನಾಥನನ್ನು ಕರೆತಂದಿದ್ದ ಮಾರುತಿ ಕಾರಿನಲ್ಲಿ ಹೊನ್ನಾಳಿ ಕಡೆ ಪರಾರಿ ಆಗಿದ್ದಾರೆ.

ಬಲೆ ಬೀಸಿ ಕಾಯುತ್ತಿದ್ದ ಲೋಕಾಯುಕ್ತರು ಹಣದೊಂದಿಗೆ ಸಿಕ್ಕಿಬಿದ್ದ ಕಾಳೆನನ್ನು ಬಂಧಿಸಿದ್ದಾರೆ. ಅನಧಿಕೃತವಾಗಿ ಮಂಜುನಾಥನನ್ನು ಬಂಧಿಸಿದ್ದನ್ನು, ಅವನ ಬಿಡುಗಡೆಗೆ ಹಣ ನೀಡುವಂತೆ ಒತ್ತಾಯಿಸಿದ್ದನ್ನು ಕಾಳೆ ಒಪ್ಪಿಕೊಂಡಿದ್ದಾನೆ. ಕಾಳೆ ಲೋಕಾಯುಕ್ತರ ಬಲೆಗೆ ಬಿದ್ದ ವಿಷಯ ತಿಳಿದ ಉಳಿದ ಪೇದೆಗಳಾದ ಸವೂರ, ಮಂಜಪ್ಪ ಮತ್ತು ಪಾಟೀಲ ದಾರಿ ಮಧ್ಯೆ ಕಾರಿನಿಂದ ಮಂಜುನಾಥನನ್ನು ಇಳಿಸಿ "ನಡೆದದ್ದನ್ನು ಯಾರಿಗೂ ಹೇಳಬೇಡ, ಸ್ವಲ್ಪ ದಿನ ಕಣ್ಮರೆಯಾಗು" ಎಂದು 'ಉಪದೇಶ' ನೀಡಿದ್ದಾರೆ.


ಹಣದ ಆಮಿಷಕ್ಕಾಗಿ ಪೊಲೀಸರು ನೀಡಿದ ಹಿಂಸೆಯನ್ನು ಮಂಜುನಾಥ ಫೆ. 18 ರಂದು ಎಸ್.ಪಿ.

ಜಬೀನ ಸ್ಥಾನಕ್ಕೆ ರಾಮಪ್ಪ?

ಕೋಲಾರ

ಕೋಲಾರ ನಗರಸಭೆಯ ಆಡಳಿತ ಹದಗೆಟ್ಟಿದೆ. ಆಯುಕ್ತೆ ಸಯಿದಾ ನಿಲೂಫರ್ ಜಬೀನ ಸೇರಿದಂತೆ ನಗರಸಭೆಯ ಅಧಿಕಾರಿಗಳು ನಾಗರಿಕರ ಸಮಸ್ಯೆಗಳ್ಯಾವೂ ತಮಗೆ ಸಂಬಂಧಿಸಿದ ವಿಷಯವಲ್ಲವೇನೋ ಎಂಬಂತೆ ನಿರುಮ್ಮಳವಾಗಿ ಕಾಲ ನೂಕುತ್ತಿದ್ದಾರೆ.

ಇದೆಲ್ಲದಕ್ಕೂ ಪ್ರಮುಖ ಕಾರಣವಾಗಿರುವುದು ಆಯುಕ್ತೆ ಸಯಿದಾ ನಿಲೂಫರ್ ಜಬೀನ ಅವರ ಕರ್ತವ್ಯ ನಿರ್ಲಕ್ಷ್ಯ. ಇಲ್ಲಿಗೆ ವರ್ಗವಾಗಿ ವರ್ಷವಾಗುತ್ತಾ ಬಂದಿದ್ದರೂ ಕೇಂದ್ರ ಸ್ಥಾನದಲ್ಲಿ ಆಕೆಯ ವಾಸವಿಲ್ಲ. ಕೇಂದ್ರ ಸ್ಥಾನದಲ್ಲಿ ವಾಸ್ತವ್ಯವಿರಬೇಕೆಂಬ ಸರ್ಕಾರದ ನಿಯಮವನ್ನು ಸ್ಪಷ್ಟವಾಗಿ ಧಿಕ್ಕರಿಸಿ ದಿಟ್ಟ ಹೆಣ್ಣುಮಗಳೆನಿಸಿರುವ(!) ಜಬೀನ, ಬೆಂಗಳೂರಿನಿಂದ ಡೈಲಿ ಟ್ರಾವೆಲರ್. ಅಳಲನ್ನು ಹೇಳಿಕೊಳ್ಳಲು ಬರುವ ನಾಗರಿಕರು 'ನಾನೇ ಬೇರೆ, ನನ್ನ ಸ್ಟೈಲೇ ಬೇರೆ' ಎಂಬ ಮಾತನ್ನು ಆಯುಕ್ತೆ ಜಬೀನರಿಂದ ಪುಕ್ಕಟೆಯಾಗಿ ಕೇಳಿಸಿಕೊಂಡು ಮನರಂಜನೆ ಪಡೆಯಬಹುದಾಗಿದೆ.



ಜಬೀನ

ಆಯುಕ್ತೆ ಜಬೀನ ಕಚೇರಿಗೆ ಬರುವುದೇ ಮಧ್ಯಾಹ್ನ ಮೂರಕ್ಕೆ. ಆಕಸ್ಮಾತ್ ಮೂರೂವರೆ ಮೀರಿಹೋದರೆ ಆ ದಿನ ಆಕೆಯ ದರ್ಶನ ಸಾರ್ವಜನಿಕರಿಗೆ ಲಭ್ಯವಿಲ್ಲ. ಅರ್ಥಾತ್ ಆಕೆ ಅಂದು ಬೆಂಗಳೂರು ಮನೆಯಲ್ಲಿಯೇ ಮೊಕ್ಕಾಂ ಎಂಬುದು ಕಚೇರಿಯಲ್ಲಿ ಕಸ ಗುಡಿಸುವವರಿಂದ ಹಿಡಿದು ಕಾರ್ ಚಾಲಕರವರೆಗೂ ಅರ್ಥವಾಗಿಹೋಗಿದೆ. ಆದರೂ ಅಂದಿನ ಆಕೆಯ ದಿನಚರಿಯಲ್ಲಿ ಕೋಲಾರಕ್ಕೆ ಆಗಮಿಸಿದಂತೆ, ನಗರವನ್ನು ಸುತ್ತಾಡಿದಂತೆ ಮತ್ತು ಇಲಾಖೆಯ ಅಧಿಕಾರಿಗಳ ಸಭೆಗೆ ಹಾಜರಾಗಿದ್ದಂತೆ ಅಧಿಕೃತ ದಾಖಲೆಗಳನ್ನು ಕಚೇರಿಯ ಮ್ಯಾನೇಜರ್ ನಜೀರ್ ಎನ್ನುವ 'ಜೀ ಹುಜೂರ್' ಭೂಪ ಸಿದ್ಧಪಡಿಸುತ್ತಾನೆ.

ಇಷ್ಟಾದರೂ ಮಧ್ಯಾಹ್ನ ಮೂರರ ವೇಳೆಗೆ ಕೆಎಸ್ಸಾರ್ಟಿಸಿ ಬಸ್ಸಲ್ಲಿ ಕೋಲಾರಕ್ಕೆ ಬಂದಿಳಿಯುವ ಆಯುಕ್ತೆ ಜಬೀನ ಅಲ್ಲಿಂದ ನಗರಸಭೆಯ ಕಾರ್‌ನಲ್ಲಿ ಜುಮ್ಮಂತ ಕುಳಿತು ಕಚೇರಿಗೆ ಬಂದಿಳಿಯುತ್ತಾರೆ. ಶಿಷ್ಯ ನಜೀರ್‌ನನ್ನು ಖಾಸಗಿ ಕೊಠಡಿಗೆ ಕಡತಗಳ ಸಮೇತ ಕರೆಸಿಕೊಂಡು ಜಬೀನ ಮಾಡುವುದು ಕೇವಲ ಸಹಿಗಳ ಯಜ್ಞ ಎಂಬುದು ಬಲ್ಲವರ ಅಂಬೋಣ. ಇಂಥಾ ಆಯುಕ್ತೆಗೆ ಅಂಥಾ ನಜೀರ್‌ನಂಥ ಶಿಷ್ಯನಿದ್ದ ಮೇಲೆ ನಗರಸಭೆ ಕಾರ್ಯವೈಖರಿ ಸತ್ತ ಮಲಗದೆ ಉಸಿರಾಡಲು ಸಾಧ್ಯವೆ?



ಆಲಂಗೂರು ಶ್ರೀನಿವಾಸ್

ಆಯುಕ್ತೆ ಜಬೀನರಿಂದ ಆ ಸ್ಥಾನಕ್ಕೆ ಪವರ್ ಆಫ್ ಅಟಾರ್ನಿ ಬರೆಸಿಕೊಂಡಂತೆ ಮೆರೆಯುವ ನಜೀರ್‌ನದು ನಿತ್ಯವೂ ವೇಷ ಹಾಕುವ ಕೈಂಕರ್ಯ. ಸಾರ್ವಜನಿಕರು ಹಾಗೂ ಗುತ್ತಿಗೆದಾರರ ಬಳಿ ಕಲೆಕ್ಷನ್ ಕಾಯಕದಲ್ಲಿ ನಿರತನಾಗಿರುವ ನಜೀರ್ ಅಂತಿಮಗೊಳಿಸುವ ಕಡತಗಳಿಗೆ ಸಹಿ ಹಾಕುವುದು ಆಯುಕ್ತೆ ಜಬೀನರಿಗೆ ಅತ್ಯಂತ ಪ್ರೀತಿಯ ಕೆಲಸ.

ಹಾಗೆಯೇ, ನಗರಸಭೆಯ ಇಂಜಿನಿಯರಿಂಗ್ ವಿಭಾಗದ ಮುಖ್ಯ ಅಧಿಕಾರಿ ಹೊನ್ನಯ್ಯರಿಗೆ ಕಚೇರಿಯ ಕೆಲಸವೆಂದರೆ ಆಲಸ್ಯ. ಮೊದಲಿನಿಂದಲೂ ಕಚೇರಿಯಲ್ಲಿ ಅಪರೂಪವಾಗಿದ್ದ ಹೊನ್ನಯ್ಯ ಈಗ ಕಾರು ಬಂದ ಮೇಲಂತೂ ಸಾರ್ವಜನಿಕರಿಗೆ ದರ್ಶನ ನೀಡುವುದು ದುರ್ಲಭವಾಗಿದೆ. ರೌಂಡ್ಸ್, ರೌಂಡ್ಸ್, ರೌಂಡ್ಸ್.. ಎಂಬುದು ಈ ಸಾಹೇಬರ ನಿತ್ಯ ಮಂತ್ರವಾಗಿ ಹೋಗಿದೆ.


ಇಡೀ ನಗರಾದ್ಯಂತ ಸ್ವಚ್ಛತೆ ಎಕ್ಕುಟ್ಟಿಹೋಗಿದೆ. ಬೇಸಿಗೆ ಆರಂಭಕ್ಕೂ ಮುನ್ನ ಕುಡಿಯುವ ನೀರಿಗೆ ತತ್ವಾರ ಉಂಟಾಗಿದೆ. ಲಭ್ಯವಿರುವ ನೀರನ್ನು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳುವುದನ್ನು ನೀರು ಸರಬರಾಜು ವಿಭಾಗದ ಮುಖ್ಯಸ್ಥರು ಉದ್ದೇಶಪೂರ್ವಕವಾಗಿ ಮರೆ ಮಾಚಿದ್ದಾರೆ. ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಿಯೇ ಹಣ ಮಾಡಿಕೊಳ್ಳಲು ಕಚೇರಿಯಲ್ಲಿನ ಸಿಬ್ಬಂದಿ ರೂಪದ ಬ್ರೋಕರ್‌ಗಳು ಮತ್ತು ಮಾಜಿ ಪುರಪಿತೃಗಳೆಂಬ ಕೆಲವು ದಲ್ಲಾಳಿಗಳೂ ಸಿದ್ಧವಾಗಿ ನಿಂತಿದ್ದಾರೆ. ಅವರುಗಳಿಗೆ ಅನುಕೂಲವಾಗುವಂತೆ 'ಕೃತಕ ಬರ' ವಾತಾವರಣವನ್ನು ಸೃಷ್ಟಿಸಲು ಹೊನ್ನಯ್ಯ ಹೆಣಗಾಡುತ್ತಿದ್ದಾರೆ.

ಇದೇ ಕಾರಣದಿಂದಾಗಿ ನಗರಸಭೆಯಲ್ಲಿ ನಿತ್ಯವೂ ನಾಗರಿಕರಿಂದ ರಂಪಾಟ ಮಾಮೂಲಾಗಿದೆ. ಆಯುಕ್ತೆ ಜಬೀನರ ಈ ಕರ್ತವ್ಯ ನಿರ್ಲಕ್ಷ್ಯವನ್ನು ನಗರಾಭಿವೃದ್ಧಿ ಇಲಾಖೆಯ ಹಿರಿಯ ಅಧಿಕಾರಿ ಯಾರೂ ಪ್ರಶ್ನಿಸಿಲ್ಲ. ಆಡಳಿತಾಧಿಕಾರಿಯಾದ ಡಿಸಿ ಅಂಜುಂ ಪರ್ವೇಜ್ ಇದುವರೆಗೂ ಜಬೀನರನ್ನು ಸಣ್ಣದಾಗಿ ಗದರಿಸಿಯೂ ಇಲ್ಲ. ಅವರೂ ಗಪ್‌ಚುಪ್. ಹಿಂಗಾದ್ರೆ ಕೋಲಾರ ಉದ್ಧಾರವಾಗುವುದಾದರೂ ಹೇಗೆ ಎಂಬುದು ಪ್ರಶ್ನೆಯಾಗಿಯೇ ಉಳಿದಿದೆ.

[illegible]

ಕೋಲಾರದ ಶಾಸಕ ಕೆ. ಶ್ರೀನಿವಾಸಗೌಡ ಕಾಂಗ್ರೆಸ್‌ಗೆ ಹೋದ ನಂತರ ಜವಾನ ಮಟ್ಟದ ನೌಕರನನ್ನೂ ಜೋರಾಗಿ ಮಾತನಾಡಿಸುವ ಪಾಪಕ್ಕೆ ಹೋಗಿಲ್ಲ. ದಳದಲ್ಲಿದ್ದಾಗ ದಿವಂಗತ ಸಿ. ಬೈರೇಗೌಡ ಹಾಗೂ ಅವರ ನಂತರ ಜಿಲ್ಲಾ ಮಟ್ಟದ ರಾಜಕಾರಣದಲ್ಲಿ ಘರ್ಜಿಸುತ್ತಿದ್ದ ಶ್ರೀನಿವಾಸಗೌಡರು ಕಾಂಗ್ರೆಸ್‌ಗೆ ಬಂದ ನಂತರ ಅಧಿಕಾರಶಾಹಿಯ ವಿಚಾರದಲ್ಲಿ ಮೌನವನ್ನೆ ಆಭರಣವನ್ನಾಗಿ ಸಿಂಗರಿಸಿಕೊಂಡು ಕುಳಿತು ಬಿಟ್ಟಿದ್ದಾರೆಂದರೂ ಅತಿಶಯೋಕ್ತಿಯಿಲ್ಲ.

ಇನ್ನು ಆಯುಕ್ತೆ ಜಬೀನರ ಕಾರ್ಯವೈಖರಿಯನ್ನು ಖಂಡಿಸುವ ಮಟ್ಟದಲ್ಲಿ ಗೌಡರು ಎಂದೋ ವಿಫಲರಾಗಿದ್ದಾರೆ ಎಂಬುದನ್ನು ಇಲ್ಲಿನ ಜೆಡಿಎಸ್ ಮುಖಂಡರು ಅರ್ಥ ಮಾಡಿಕೊಂಡಿದ್ದಾರೆ. ಜಬೀನರ ವೈಫಲ್ಯಗಳನ್ನು ಪಟ್ಟಿ ಮಾಡಿಕೊಂಡು ಸಚಿವ ಆಲಂಗೂರು ಶ್ರೀನಿವಾಸ್ ಬಳಿ ದೂರನ್ನು ಒಯ್ದಿರುವ ಈ ಮುಖಂಡರು ಆಯುಕ್ತ ಸ್ಥಾನಕ್ಕೆ ಉತ್ತಮ ಅಧಿಕಾರಿಯನ್ನು ತರುವ ಪ್ರಯತ್ನವನ್ನು ಮಾಡಿದ್ದು, ಕೋಲಾರ ತಾಲೂಕು ಪಂಚಾಯತಿಯ ಹಾಲಿ ಇಒ ಡಾ. ರಾಮೇಗೌಡ ಕೊಂಚ



ಶಾಸಕ ಶ್ರೀನಿವಾಸಗೌಡ

...ಕರ ಮುಂದೆ ವಿವರವಾಗಿ ಹೇಳಿದ್ದಾನೆ. ರೆಡ್ ...ಡ್ ಆಗಿ ಸಿಕ್ಕಿಬಿದ್ದ ಕಾಳೆ ನ್ಯಾಯಾಂಗ ಬಂಧನಕ್ಕೆ ...ಾಗಿದ್ದಾನೆ. ಸವೂರ, ಮುಂಡಪ್ಪ ಮತ್ತು ಪಾಟೀಲ ...ನತ್ತಾಗಿ ಮನೆ ಸೇರಿದ್ದಾರೆ.

[illegible]

...ನ್ನ ಶಿಷ್ಯ ಪಡೆ ಎಂಟು ದಿನಗಳ ಕಾಲ ಒಬ್ಬನನ್ನು ಕಚೇರಿಯಲ್ಲೇ ಬಂಧಿಸಿ, ಮಾಡಬಾರದ್ದನ್ನೆಲ್ಲಾ ...ದ್ದರೂ "ನನಗೇನೂ ಗೊತ್ತೆ ಇಲ್ಲಾ, ಅವರು ...ಂದೊಳಗೆ ಡೀಲ್ ಮಾಡಿಕೊಂಡಿದ್ದರು. ...ನೂ ಇದರಲ್ಲಿ ಪಾಲಿಲ್ಲ" ಅಂತಿದ್ದಾನೆ ಡಿ.ವೈ. ...ಪಿ. ಎಂ. ಎಂ. ಅಗಡಿ. ಆದರೆ ರಾಣೆಬೆನ್ನೂರಿನಲ್ಲೇ ...ಐ. ಆಗಿ, ನಂತರ ಅಲ್ಲೇ ಡಿ.ವೈ.ಎಸ್.ಪಿ. ಆಗಿ, ...ವ ಮೂಲೆಯಿಂದ ಎಷ್ಟು ಮಾಮೂಲು ...ದನ್ನು ಕರಗತ ಮಾಡಿಕೊಂಡಿರುವ ಅಗಡಿ ...ೇಬರು ಅದೇನು ಸಾಧನೆ ಮಾಡಬೇಕು ...ಕೊಂಡು ವಿಶೇಷ ಕಾರ್ಯಪಡೆ ರಚನೆ ಮಾಡಿ ಎಂಬುದು ಮಾತ್ರ ಈಗ ಜನಕ್ಕೆ ಚೆನ್ನಾಗಿ ...ತ್ತಾಗಿದೆ. ಆದರೂ ಈತ ಈಗ "ತನಿಖೆ, ಅದು, ..." ಎಂದು ಸಾರ್ವಜನಿಕರ ಮುಂದೆ ಜಪ ...ಸುತ್ತಿದ್ದಾನೆ.

...ಾಣೆಬೆನ್ನೂರಿನ ಸುತ್ತ ಸುರೇಶ ಕಲಾಲ ಎಂಬು ...ು ಯಾರ ಮುಲಾಜೂ ಇಲ್ಲದೆ ಮಟ್ಕಾ ...ತ್ತಿರುವುದು, ಕುಮಾರಪಟ್ಟಣಂ ಅನ್ನುವುದನ್ನ ...ಕ್ಕಾ ಪಟ್ಟಣಂ ಅನ್ನೋವಷ್ಟು ಪಾಪುಲರ್ ...ರುವುದು ಅಗಡಿ ಸಾಹೇಬರ ಸಹಕಾರದಿಂದಲೇ ...ಂದು ಈಗ ಗುಟ್ಟಾಗೇನೂ ಉಳಿದಿಲ್ಲ.

...ರಡೇ ತಿಂಗಳು ಎಸ್.ಪಿ. ಚೇರಿನಲ್ಲಿ ಕುಳಿತು ...ತಗಾಗಿ ರಿಟೈರ್ ಆಗುವುದಕ್ಕೆ ಕಾಯುತ್ತಿರುವ ...ಿ ಎಸ್.ಪಿ. ಎನ್. ಎಂ. ಹೊನ್ನಾಳ "ಏನಾದರೂ ...ು ಹಣ ಮಾತ್ರ ಸರಿಯಾಗಿ ತಲುಪಿಸು" ...ಷ್ಟೇ ಅಗಡಿಗೆ ಹೇಳಿದ್ದಾರಂತೆ. ಹೋಗುವು ...ಳಗೆ ಸರಿಯಾಗೇ ಬಳಕೊಂಡು ಹೋಗಬೇಕು ...ವ ಸಿದ್ಧಾಂತದ ಹೊನ್ನಾಳ ಮನೆಗೆ ಹೋದ ... ಅಗಡಿಯನ್ನ ಕಾಪಾಡುವವರಾರು?

-ಹುರಳಿಕುಪ್ಪಿ ವಿನಯ



ಅಂಜುಂ ಪರ್ವೇಜ್

ಕಾಲ ಇಲ್ಲಿನ ನಗರಸಭೆಯ ಪ್ರಭಾರ ವಹಿಸಿಕೊಂಡ. ಸಮಯದಲ್ಲಿ ಒಳ್ಳೆಯ ಕೆಲಸಗಳನ್ನು ಮಾಡಿದ ಹೆಸರು ಪಡೆದಿದ್ದರು. ಇಂತಹ ಅಧಿಕಾರಿ ಇಲ್ಲಿನ ಜೆಡಿಎಸ್ ಪುಢಾರಿಗಳಿಗೆ ಬೇಕಿಲ್ಲ.

ಡಾ.ರಾಮೇಗೌಡರನ್ನು ...ಕ್ತ ಪದವಿಗೆ ತರಬೇಕೆನ್ನುವ ಆಕಾಂಕ್ಷೆ ಶಾಸಕ ಕೆ. ...ದಾಸಗೌಡರಿಗಿದ್ದರೂ ಈಗ ಅವರ 'ಕೈ' ನಡೆಯು... ಆದರೆ, ಈ ಸ್ಥಾನಕ್ಕೆ ರಾಮಪ್ಪ ಎಂಬ ಭ್ರಷ್ಟನನ್ನು ...ಕೆನ್ನುವುದು ಜೆಡಿಎಸ್‌ನವರ ಹಂಬಲವಾಗಿದ್ದು ...ಗಿ ಸಾಕಷ್ಟು ಕಾಂಚಾಣವನ್ನೂ ಪಡೆದುಕೊಂಡಿ... ...ಎಂಬ ಸುದ್ದಿ ...ರದಾದ್ಯಂತ ...ೊಂಡಿದೆ. ಅದಕ್ಕೆ ...ಸಚಿವ ...ೂರು ...ದಾಸ್ ಬಳಿ ...ರನ್ನು ...ಯ್ದು ಈಗಾಗಲೇ ...ಪು'ವನ್ನೂ ...ರುವ ಜೆಡಿಎಸ್ ...ಗಳು ...ದವನ್ನು ಮುಗಿಸಿಕೊಂಡಿದ್ದಾರೆ ಎಂಬ ಮಾತು ...ಬರುತ್ತಿದೆ. ಈಗಲೇ ಕುಲಗೆಟ್ಟು ಹೋಗಿರುವ ... ನಗರಸಭೆಯ ಆಯುಕ್ತ ಸ್ಥಾನಕ್ಕೆ ರಾಮಪ್ಪ ... ಆದರೆ, ಮುಂದು ದಿನವನ್ನು ಸಮೃದ್ಧ ... ಮೇಯಲು ಬಿಟ್ಟಂತೆ ಆಗುವುದರಲ್ಲಿ ... ಇಲ್ಲ. ಮಂತ್ರಿ ಆಲಂಗೂರು ಶ್ರೀನಿವಾಸ್ ... ವಹಿಸಿಕೊಂಡು ಕೋಲಾರದ ಸ್ವಾಸ್ಥ್ಯವನ್ನು ...ಕಾಗಿದೆ.



ಇಟ ರಾಮೇಗೌಡ

-ವರದಿಗಾರ

ಚಿಗಟೇರಿ ಜನರಲ್ ಆಸ್ಪತ್ರೆ- ರೋಗಿಗಳ ದುಡ್ಡು ಅಧಿಕಾರಿಗಳ ಮಜಾ

ದಾವಣಗೆರೆ

"ಬರೋದಿಲ್ಲಣ್ಣೋ ಸರ್ಕಾರಿ ದವಾಖಾನೆಗೆ....." ಈ ಹಾಡು ಸರ್ಕಾರಿ ಆಸ್ಪತ್ರೆಯ ಅವ್ಯವಸ್ಥೆಯನ್ನು ಹಾಗೂ ಆಸ್ಪತ್ರೆಯ ಸಿಬ್ಬಂದಿಯ ವಂಚನೆ ಕ್ರೌರ್ಯಗಳನ್ನು ಎಳೆಎಳೆಯಾಗಿ ಬಿಡಿಸಿಟ್ಟು ಜನಸಾಮಾನ್ಯರ ನಡುವೆ ದಶಕಗಳ ಹಿಂದೆಯೇ ಪ್ರಸಿದ್ಧಿಯಾಗಿತ್ತು. ಸಾವು ಬಂದು ಸತ್ತರೂ ಸರಿ, ಸರ್ಕಾರಿ ಆಸ್ಪತ್ರೆಯ ಗೊಡವೆ ಬೇಡ ಎಂದು ಸಾಮಾನ್ಯವಾಗಿ ಜನರು ಹೇಳುತ್ತಾರಾದರೂ ತಮ್ಮ ದಯನೀಯವಾದ ಪರಿಸ್ಥಿತಿಯು ಅವರನ್ನು ಸರ್ಕಾರಿ ಆಸ್ಪತ್ರೆಗೇ ಅಂಟಿಕೊಳ್ಳುವ ಅನಿವಾರ್ಯತೆಯನ್ನು ತಂದೊಡ್ಡಿರುವುದರಿಂದ "ಅನ್ ವಾಂಟೆಡ್ ಪೇಶಂಟ್‌"ಗಳಾಗಿ ಆಸ್ಪತ್ರೆಗೆ ಸೇರಿ ಪಡಬಾರದ ಕಷ್ಟಗಳನ್ನು ಪಡುವುದೂ ಅಲ್ಲದೆ, ಕಾಯಿಲೆ ವಾಸಿಯಾಗದೇ ಇದ್ದರೂ ಆಸ್ಪತ್ರೆ ಸಿಬ್ಬಂದಿಯ ಜೇಬುಗಳನ್ನಂತೂ ಭರ್ತಿ ಮಾಡುತ್ತಾರೆ.

ದಾವಣಗೆರೆ, 'ಚಿಗಟೇರಿ ಜನರಲ್ ಆಸ್ಪತ್ರೆ'ಯನ್ನು ಇಲ್ಲಿನ ಜನರು 'ದೊಡ್ಡಾಸ್ಪತ್ರೆ' ಎಂದು ಕರೆಯುತ್ತಾರೆ. ಇದು ಜಿಲ್ಲೆಯ ಅತಿದೊಡ್ಡ, 930 ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆ. ಈ ಆಸ್ಪತ್ರೆಯ ಗ್ರೌಂಡ್‌ಫ್ಲೋರಿನ ಎಲ್ಲಾ ವಾರ್ಡುಗಳಲ್ಲಿ ಇಲಿ-ಹೆಗ್ಗಣಗಳು ರೋಗಿಗಳನ್ನೇ ಕಿತ್ತು ತಿನ್ನುವಷ್ಟಿವೆಯಾದರೂ ಅವು ರೋಗಿಗಳು ತಂದ ಪದಾರ್ಥಗಳನ್ನು ಮಾತ್ರ ತಿಂದು ನೆಮ್ಮದಿಯಾಗಿ ಜೀವಿಸುತ್ತಿವೆ. ಆದರೆ ಈ ಆಸ್ಪತ್ರೆಯ ಸಿಬ್ಬಂದಿ ಎಂಬ ಇಲಿ-ಹೆಗ್ಗಣಗಳು ಮಾತ್ರ ಹಣ ಬಿಚ್ಚದಿದ್ದರೆ ರೋಗಿಗಳ ಬದುಕನ್ನೇ ತಿನ್ನಲು ತಯಾರಾಗಿದ್ದಾರೆ. ಪ್ರತ್ಯೇಕವಾಗಿ ಈ ಬಗ್ಗೆ ಇನ್ನೊಮ್ಮೆ ಸವಿಸ್ತಾರವಾಗಿ ಬರೆಯಬಹುದಾದರೂ ಈಗ ಚಿಗಟೇರಿ ಜನರಲ್ ಆಸ್ಪತ್ರೆಯ ಮೇಲ್ಪದರದ ಸಿಬ್ಬಂದಿಯ ವಂಚನೆಯ ಒಂದು ಎಳೆಯನ್ನು ಮಾತ್ರ ನೋಡಿ.

ಹೆಸರು ಆರೋಗ್ಯ ರಕ್ಷಾ ಸಮಿತಿಯದು- [illegible] ಅಧಿಕಾರಿಗಳದು

ಈ ಆಸ್ಪತ್ರೆಗೆ ಸಂಬಂಧಿಸಿದಂತೆ 'ಆರೋಗ್ಯ ರಕ್ಷಾ ಸಮಿತಿ' ಎನ್ನುವುದೊಂದಿದೆ. ಜಿಲ್ಲಾಧಿಕಾರಿ ಇದರ ಅಧ್ಯಕ್ಷ, ಜಿಲ್ಲಾ ಮೇಲ್ವಿಚಾರಕ (District Superintendent) ಇದರ ಕಾರ್ಯದರ್ಶಿ. ಹೆಸರಿಗೆ ತಕ್ಕಂತೆ ರೋಗಿಗಳ ಆರೋಗ್ಯ ರಕ್ಷಣೆ ಮಾಡುವುದು ಈ ಸಮಿತಿಯ ಜವಾಬ್ದಾರಿ. ಈ ಸಮಿತಿಯಿಂದ ಹೊರರೋಗಿಗಳಿಗೆ 10ರೂ. ಒಳರೋಗಿಗಳಿಗೆ 30ರೂ., ಎಕ್ಸ್‌ರೇಗಾಗಿ 50 ರಿಂದ 150, ರಕ್ತ, ಮೂತ್ರ ಮುಂತಾದವುಗಳ ಪರೀಕ್ಷೆಗಾಗಿ 10ರಿಂದ 150 ರೂ.ಗಳ ವರೆಗೆ ಸಂಗ್ರಹಿಸಲಾಗುತ್ತದೆ.

ಹೀಗೆ ಸಂಗ್ರಹಿಸಿದ ಹಣ ದಿನವೊಂದಕ್ಕೆ 10ರಿಂದ 25 ಸಾವಿರದವರೆಗೆ ಆಗುತ್ತದೆ. "ಈ ಹಣವನ್ನು ಆಸ್ಪತ್ರೆಯಲ್ಲಿ ದಾಖಲಾದ ಬಡ ರೋಗಿಗಳ ಅವಶ್ಯಕತೆಗಾಗಿ ಉಪಯೋಗಿಸಬೇಕು" ಎನ್ನುವುದು ಆರೋಗ್ಯ ರಕ್ಷಾ ಸಮಿತಿಯ "ಧ್ಯೇಯ ಘೋಷ". ಬಿ.ಪಿ.ಎಲ್., ಎ.ಪಿ.ಎಲ್. ಕಾರ್ಡುಗಳಿದ್ದವರಿಗೆ ಕೆಲವು ಫೀಜುಗಳ ವಿನಾಯಿತಿ ಇದೆ. ಈ ಕಾರ್ಡುಗಳಿಲ್ಲದ ಬಡರೋಗಿಗಳಿಗೂ ಕೂಡಾ ಹೆಚ್ಚಿನ ಚಿಕಿತ್ಸೆ ಮತ್ತು ಔಷಧಗಳಿಗೆ ಬೇಕಾದ ಹಣವನ್ನು ಈ ಸಮಿತಿಯಿಂದ ಪೂರೈಸಬಹುದಾಗಿದೆ.

ಒಟ್ಟಾರೆ ಆಸ್ಪತ್ರೆಯಲ್ಲಿ ಸಿಗದೇ ಇದ್ದ ಔಷಧಿಯನ್ನು ರೋಗಿಗಳಿಗೆ ವಿತರಿಸಲು, ಹೆಚ್ಚಿನ ಚಿಕಿತ್ಸೆಯ ಅವಶ್ಯಕತೆ ಬಿದ್ದರೆ ಅದನ್ನು ಕೊಡಿಸಲು ಜನರಿಂದ ಸಂಗ್ರಹಿಸಿದ ಈ ಹಣವನ್ನು ಬಳಸಬೇಕು. ಈ ಹಣವನ್ನು ರೋಗಿಗಳ ಆರೋಗ್ಯ ಕಲ್ಯಾಣಕ್ಕಾಗಿ ಬಳಸುತ್ತೇವೆಂದು ಬರೆದುಕೊಂಡಿರುವ ಚಿಗಟೇರಿ ಜನರಲ್ ಆಸ್ಪತ್ರೆಯ ಅಧಿಕಾರಿಗಳು ಕಮಿಶನ್ ಹೊಡೆಯುವ ಸಲುವಾಗಿ ಬೇರೆ ರೂಪದಲ್ಲಿ ಈ ಹಣವನ್ನು ಖರ್ಚು ಮಾಡುವ ದಾರಿಯನ್ನು ಹುಡುಕಿಕೊಂಡಿದ್ದಾರೆ.

ಕಾಮಗಾರಿ ಕೆಲಸವಲ್ಲ- ಕಮಾಯಿ ಕೆಲಸ

ವರ್ಷಕ್ಕೆ ಹತ್ತಿರತ್ತಿರ ಕೋಟಿಗಟ್ಟಲೆ ಸಂಗ್ರಹವಾಗುವ ಜನರ ಹಣವನ್ನು ಜನರಿಗಾಗಿಯೇ ಉಪಯೋಗಿಸಿದ್ದರೆ ಔಷಧಿ ಕೊಳ್ಳಲಾಗದೆ ಭಿಕಾರಿಗಳಂತೆ ಸತ್ತ ನೂರಾರು ಮಂದಿ ಬಡವರ ಪ್ರಾಣಗಳು ಉಳಿಯುತ್ತಿದ್ದವು. ಆದರೆ ದಂಡಿಯಾಗಿ ಸಿಗುವ ಕಮಿಶನ್ ಮುಂದೆ ಬಡರೋಗಿಗಳ ಪ್ರಾಣಗಳು ಯಾವ ಲೆಕ್ಕ? ನಾಲ್ಕು ತಿಂಗಳ ಹಿಂದೆ ಇದ್ದ ಜಿಲ್ಲಾ ಮೇಲ್ವಿಚಾರಕ (ಡಿ.ಎಸ್) ಎಸ್.ಎಂ. ಬಣಕಾರ್ ಹಾಗೂ ಈಗಿನ ಶೀತಲ್ ಬಿ. ಹಿರೇಗೌಡರ್‌ಗೆ ಇವ್ಯಾವೂ ಅರ್ಥವಾಗುತ್ತಿಲ್ಲವೆಂದಲ್ಲ, ಬಡರೋಗಿಗಳಾಗಿ ಹಣ ಖರ್ಚು ಮಾಡಬೇಕಾ? ಎಂಬ ಹೊಟ್ಟೆ ಉರಿಯೊಂದಿಗೆ ಇವರಿಗೆ ಬೇಕಾಗಿರುವುದು ಯಾವ ರೂಪದಿಂದಲಾದರೂ ಸರಿ ಅಮೇಧ್ಯ ತಿನ್ನುವ ದಾರಿಯನ್ನು ಹುಡುಕಿಕೊಳ್ಳುವುದು ಮಾತ್ರ- ಹಾಗಾಗಿಯೇ ಬಡರೋಗಿಗಳ ಆರೋಗ್ಯ ರಕ್ಷಣೆಗಾಗಿ ಮೀಸಲಾದ ಹಣವನ್ನು ಇವರು "ಕಾಮಗಾರಿ ಕೆಲಸಕ್ಕೆ" ಬಳಸುತ್ತಿದ್ದಾರೆ.



ಆಸ್ಪತ್ರೆಯ ಸುತ್ತಲಿನ ಕಾಂಪೌಂಡ್ ಗೋಡೆಯನ್ನು ಕಟ್ಟುತ್ತೇವೆಂದು ಗುಂಡಿ ಮಹಾದೇವಪ್ಪ ಛತ್ರದ ಮತ್ತು ಬಾಪೂಜಿ ಆಸ್ಪತ್ರೆಯ ಎದುರಿನ ಗೋಡೆಯ ನೆತ್ತಿಯನ್ನು ಮಾತ್ರ ಕಿತ್ತು, ಮೂರ್ನಾಲ್ಕು ಇಟ್ಟಿಗೆಗಳನ್ನು ಹೇರಿಸಿ ಗಿಲಾವ್ ಮಾಡಲಾಗಿದೆ.

ಆದರೆ ಇಡೀ ಗೋಡೆಯನ್ನು ಕೆಡವಿ ಹೊಸದಾಗಿ ಕಟ್ಟಿಸಿರುವಂತೆ ಬಿಲ್ ಮಾಡಿಕೊಂಡು ಲಕ್ಷಗಟ್ಟಲೆ ಕಮಿಶನ್ ಹೊಡೆಯಲಾಗಿದೆ. ಇನ್ನು ಆಸ್ಪತ್ರೆಯ ಮುಂಭಾಗದ ಗೋಡೆಯನ್ನು ತಳ ಸಮೇತ ತೆಗೆಸಿದ್ದರೂ ತೀರಾ ಕಳಪೆ ಕಾಮಗಾರಿಯನ್ನು ಮಾಡಲಾಗುತ್ತಿದೆ. ಇದನ್ನು ಗಮನಿಸಿದ ನಿವೃತ್ತ ಇಂಜಿನಿಯರ್ ಒಬ್ಬರು "ಬುನಾದಿ ನಿರ್ಮಿಸಲು ಹಳೆಯ ಕಲ್ಲುಗಳನ್ನೇ ಬಳಸಲಾಗುತ್ತಿದೆ, ಹೊಸ ಕಲ್ಲುಗಳಿಂದ ಕಟ್ಟಬೇಕು" ಎಂದು ಮುಂಚಿತವಾಗಿ ಆಡಳಿತ ವರ್ಗಕ್ಕೆ ಅರ್ಜಿಯನ್ನು ಬರೆದಿದ್ದಾರೆ. ಆದರೆ "ಕಾಮಗಾರಿ ಎಂಬ ಕಮಾಯಿ ಕೆಲಸ" ಮಾತ್ರ ನಿರ್ವಿಘ್ನವಾಗಿ ಮುಂದುವರೆಯುತ್ತಲೇ ಇದೆ. 'ಕರ್ನಾಟಕ ಆರೋಗ್ಯ ಪದ್ಧತಿ ಅಭಿವೃದ್ಧಿ ಯೋಜನೆ'ಯ ಎ.ಇ.ಇ. ಕುಮಾರಸ್ವಾಮಿ ಆಸ್ಪತ್ರೆಯ ಮೇಲ್ವಿಚಾರಕ ಅಧಿಕಾರಿಗಳ ಶ್ರೀರಕ್ಷೆಯಿಂದಾಗಿ ಈ ಕಳಪೆ ಕಾಮಗಾರಿಗಳನ್ನು ಮಾಡಿಸುತ್ತಿದ್ದಾನೆ.


ನಿರಂತರ ಕಿಸೆ ತುಂಬಿಸಿಕೊಳ್ಳುವ ಯೋಜನೆ

ಕಾಮಗಾರಿ ಕೆಲಸ ನಿರಂತರವಾದುದಲ್ಲವಾದ್ದರಿಂದ ಕಮಾಯಿಯ ಅನಿಶ್ಚಿತತೆಯನ್ನು ಕಂಡುಕೊಂಡ ಆಸ್ಪತ್ರೆಯ ಮೇಲ್ವಿಚಾರಕರು ನಿರಂತರವಾಗಿ ಕಮಾಯಿ ಹಣವು ಹರಿದುಬರುವಂತೆ ಕುತಂತ್ರ ಯೋಜನೆಯೊಂದನ್ನು ರೂಪಿಸಿಕೊಂಡಿದ್ದಾರೆನ್ನಲಾಗುತ್ತಿದೆ. ಅದೇನೆಂದರೆ : ಹೊರ ಮತ್ತು ಒಳರೋಗಿಗಳಿಂದ ಸಂಗ್ರಹಿಸಲಾಗುತ್ತಿರುವ ಎಲ್ಲ ರೀತಿಯ ಫೀಜುಗಳನ್ನು ಸಂಗ್ರಹಿಸಲು ಖಾಸಗಿ ವ್ಯಕ್ತಿಯೊಬ್ಬನಿಗೆ ಟೆಂಡರ್ ಕೊಡಲು ಹೊರಟಿರುವುದು. ಈ ಜವಾಬ್ದಾರಿ ಪಡೆದುಕೊಂಡ ಖಾಸಗೀ ವ್ಯಕ್ತಿ ಮೂರ್ನಾಲ್ಕು ಕೌಂಟರುಗಳಲ್ಲಿ ಕಂಪ್ಯೂಟರುಗಳು ಮತ್ತು ಸಿಬ್ಬಂದಿಯನ್ನಿಟ್ಟುಕೊಂಡು ಈ ಹಣವನ್ನು ಸಂಗ್ರಹಿಸುವುದು, ಹೀಗೆ ಸಂಗ್ರಹಿಸಿದ ಜನರ ಹಣದಲ್ಲಿ ತಿಂಗಳಿಗೆ ಎರಡು ಲಕ್ಷ ರೂಗಳನ್ನು ಪಡೆದುಕೊಂಡು ಈ ಹಣದಲ್ಲಿ ಒಂದು ಲಕ್ಷ ರೂ.ಗಳನ್ನು ತಲಾ 50 ಸಾವಿರದಂತೆ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಮೇಲ್ವಿಚಾರಕನಿಗೆ ಕಪ್ಪಕಾಣಿಕೆ ಅರ್ಪಿಸಬೇಕೆಂಬುದೇ ಈ ಕುತಂತ್ರಿ ಯೋಜನೆಯ ಒಳಗುಟ್ಟು. ತಮಗೆ ನಿಷ್ಠೆಯಿಂದ ಕಾಣಿಕೆಯೊಪ್ಪಿಸುವವನಿಗೆ ಹಣ ಸಂಗ್ರಹಣೆಯ ಟೆಂಡರ್ ಕೊಡಿಸಿಬಿಟ್ಟರೆ ಜಿಲ್ಲಾಧಿಕಾರಿ ಹಾಗೂ ಸಿ.ಜಿ. ಆಸ್ಪತ್ರೆಯ ಜಿಲ್ಲಾ ಮೇಲ್ವಿಚಾರಕನ ಕಿಸೆಗೆ ಜನರ ಬೆವರಿನ ಹಣವು ಪ್ರತಿ ತಿಂಗಳೂ ನಿರಾತಂಕವಾಗಿ ಸೇರುತ್ತದೆ. ಹಾಗಾಗಿಯೇ ಖಾಸಗಿಯವರಿಗೆ ಈ ಟೆಂಡರನ್ನು ಕೊಟ್ಟು ಕೈ ಬದಲಾಯಿಸಿಕೊಳ್ಳುವ ತರಾತುರಿ ಭರದಿಂದ ಶುರುವಾದಂತಿದೆ. ಈ ವರದಿ ಅಚ್ಚಾಗುವ ಹೊತ್ತಿಗೆ ಅಧಿಕಾರಿಗಳ ಕುತಂತ್ರ ಯಶಸ್ವಿಯಾಗಿಬಿಟ್ಟರೆ ಜನರ ಹಣವನ್ನು ಇಷ್ಟು ನೇರವಾಗಿ ಲೂಟಿ ಹೊಡೆಯಲು ಜಾರಿಯಾದ ಯೋಜನೆ ಮತ್ತೊಂದಿರಲಾರದು. ಒಂದು ವೇಳೆ ಈ ಯೋಜನೆ ಇನ್ನೂ ಜಾರಿಯಾಗದಿದ್ದರೆ ಉನ್ನತ ವೈದ್ಯಕೀಯ ಶಿಕ್ಷಣ ಮಂತ್ರಿ ಆಚಾರ್ಯ ಈ ಬಗ್ಗೆ ಗಮನಹರಿಸಿ ಈ ಯೋಜನೆ ಜಾರಿಯಾಗದಂತೆ ತಡೆಯಬೇಕು.

ಚಿಗಟೇರಿ ಜನರಲ್ ಆಸ್ಪತ್ರೆಯ ಸ್ವಚ್ಛತೆ ಹಾಗೂ ಭದ್ರತೆಯ ಜವಾಬ್ದಾರಿಯನ್ನು ಈಗಾಗಲೇ ಖಾಸಗಿಯವರಿಗೆ ವಹಿಸಿರುವುದರಿಂದ ಈಗಾಗಲೇ ಸಾಕಷ್ಟು ಸಮಸ್ಯೆಗಳು ಸೃಷ್ಟಿಯಾಗಿವೆ. ಹಾಗಿದ್ದಾಗ ರೋಗಿಗಳಿಂದ ಹಣ ಸಂಗ್ರಹಣೆಯ ಜವಾಬ್ದಾರಿಯನ್ನೂ ಖಾಸಗಿಯವರಿಗೆ ವಹಿಸಿದರೆ ಹಣದ ಸುಲಿಗೆ ತೀವ್ರ ಸ್ವರೂಪಕ್ಕೇರುತ್ತದೆ. ಈ ಆಸ್ಪತ್ರೆಯಲ್ಲಿ ಸುಮಾರು 300ರಷ್ಟಿರುವ 'ಡಿ' ದರ್ಜೆಯ ನೌಕರರನ್ನೇ ಹಾಳಿಗೊಬ್ಬರಂತೆ ನೇಮಿಸಿದರೆ ಸಾರ್ವಜನಿಕರ ಹಣವು ಅಧಿಕಾರಿಗಳ ಖಜಾನೆ ಸೇರುವುದು ತಪ್ಪುತ್ತದೆ. ಜಿಲ್ಲಾಧಿಕಾರಿ [illegible] ... ಹಾಗೂ ಜಿಲ್ಲಾ ಮೇಲ್ವಿಚಾರಕ ಶೀತಲ್ ಬಿ. ಹಿರೇಗೌಡರ್ [illegible] ಯೋಜನೆಯನ್ನು [illegible].

-ಚಂದ್ರಶೇಖರ ತೋರಣಘಟ್ಟ

ಬಜೆಟ್: ಬಡವರ ವಾರ್ಷಿಕ ತಿಥಿ!!



[illegible] ಕರ್ಮಾವ ಹುಚ್ಚು ಭರವಸೆ. ಅದಕ್ಕೆ ಏನೇನೋ ಅಧೋಗತಿ ಕಾಯುತ್ತಿರುವ ಈ ದೇಶದ ಮುಕ್ಕಾಲು ಪಾಲು ಜನತೆಯ [illegible] ಬಂದರೆ ಸರ್ಕಾರ ಹಾಗೂ ಮಾಧ್ಯಮಗಳು ಇಲ್ಲದ ಉನ್ಮಾದವನ್ನು ಸೃಷ್ಟಿಸುತ್ತವೆ. 24/7 ಟಿವಿ ಚಾನೆಲ್‌ಗಳು ಬಂದಮೇಲೆ ಬಜೆಟ್ ಭಾಷಣವನ್ನು ನೇರ ಪ್ರಸಾರ ಮಾಡುತ್ತಾ, ಅದರ ಸುತ್ತ ಚರ್ಚೆಗಳನ್ನು ಏರ್ಪಡಿಸುತ್ತಾ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಆ ಪ್ರಸಾರವನ್ನು ಜನ ಆತಂಕದಿಂದ ವೀಕ್ಷಿಸುತ್ತಾರಾದ್ದರಿಂದ ಅದಕ್ಕೆ ಜಾಹೀರಾತುಗಳನ್ನು ಪಡೆಯುತ್ತಾ ಜನರ ಆತಂಕದಿಂದಲೂ ಲಾಭ ಮಾಡುತ್ತಿವೆ.

ಇವೆಲ್ಲವು ಸೃಷ್ಟಿಸುವ ಮಾಹಿತಿ ಉಬ್ಬರದಲ್ಲಿ ಜನರ ಹಿತಾಸಕ್ತಿ ಎಷ್ಟರಮಟ್ಟಿಗೆ ಹರಾಜಾಗಿದೆ ಎಂಬುದು ಸಂಪೂರ್ಣ ಮರೆಯಾಗಿ ಹೋಗುತ್ತದೆ. ಪತ್ರಿಕೆಗಳಲ್ಲಿ ಮತ್ತು ಟಿವಿಗಳಲ್ಲಿ ಈ ಕಾರ್ಪೊರೇಟ್ ವಕ್ತಾರರು ಹಾಕಿಕೊಡುವ ಮಾನದಂಡಗಳೆ ಬಜೆಟ್ಟನ್ನು ವಿಶ್ಲೇಷಿಸುವ ಮಾನದಂಡವಾಗಿ ಬಿಡುತ್ತದೆ. ಅಥವಾ ಬಡಜನತೆಯ ಹಿತಾಸಕ್ತಿ ಎಂದರೆ ಜನರು ಉಪಯೋಗಿಸುವ ವಸ್ತುಗಳ ಮೇಲೆ ತೆರಿಗೆ ಕಡಿಮೆಯಾಗಿದೆಯೋ ಇಲ್ಲವೋ ಎಂಬ ಅಂಶಕ್ಕೆ ಮಾತ್ರ ಕುಬ್ಜಗೊಳಿಸಿ ಜನತೆಯ ಬದುಕಿನ ಮೇಲೆ ದಾಳಿ ನಡೆಸುವ ಇತರ ಅಂಶಗಳತ್ತ ಗಮನವೇ ಹೋಗದಂತೆ ಮಾಡಲಾಗುತ್ತದೆ. ಹೀಗಾಗಿ ಮೊದಲು ಬಜೆಟ್ಟಿನ ಸುತ್ತಾ ಮಾಧ್ಯಮಗಳು ಹೊದಿಸಿರುವ ಮಖಮಲ್ ಹೊದಿಕೆಯನ್ನು ಸರಿಸಬೇಕಾಗುತ್ತದೆ.

ಬಜೆಟ್ಟೆಂದರೆ ಹೊಸ ಆರ್ಥಿಕ ನೀತಿಯಲ್ಲ

ಯಾವುದೇ ಬಜೆಟ್ ಮಂಡನೆಯಾದ ತಕ್ಷಣ ರಾಜಕೀಯ ಪಕ್ಷಗಳು ಅದು ರೈತ ಪರ ಬಜೆಟ್ ಎಂತಲೋ, ಶಿಕ್ಷಣ ಪರ ಬಜೆಟ್ ಎಂತಲೋ ಬಣ್ಣಿಸುತ್ತವೆ. ಆದರೆ ಅದೇ ಜನರೇ ಸರ್ಕಾರದ ಆರ್ಥಿಕ ನೀತಿಗಳನ್ನು ಅವರೆಗೆ ರೈತ ವಿರೋಧಿ ಎಂದೋ ಬಡವರ ವಿರೋಧಿ ಎಂದೋ, ವಿರೋಧಿಸಿರುತ್ತಾರೆ. ಹಾಗಿದ್ದಲ್ಲಿ ಬಜೆಟ್ ಎಂಬುದು ತನ್ನಂತೆ ತಾನೆ ಒಂದು ಹೊಸ ಆರ್ಥಿಕ ನೀತಿಯೇ? ಖಂಡಿತಾ ಅಲ್ಲ. ಬಜೆಟ್ಟೆಂದರೆ ಸರ್ಕಾರದ ಈಗಾಗಲೇ ಘೋಷಿತವಾಗಿರುವ ಆರ್ಥಿಕ ನೀತಿಯನ್ನು ಜಾರಿಗೆ ತರುವ ಸಾಧನವಷ್ಟೆ. ಹೀಗಾಗಿ ಆರ್ಥಿಕ ನೀತಿಗಳೆ ರೈತ ವಿರೋಧಿ ಇದ್ದಾಗ, ಬಡವರ ವಿರೋಧಿ ಬಂಡವಾಳಶಾಹಿ ಮತ್ತು ವಿದೇಶಿ ಹೂಡಿಕೆದಾರರ ಪರ ಇದ್ದಾಗ ಬಜೆಟ್ ಮಾತ್ರ ರೈತ ಪರವೋ, ಬಡವರ ಪರವೋ ಇರುತ್ತದೆ ಎಂದು ಭಾವಿಸುವುದು ಮೂರ್ಖತನ.

ಹಿಂದಿಗಿಂತ ಹೆಚ್ಚು ಹಣ ಎಂಬುದರ ಮರ್ಮವೇನು?

ಬಜೆಟ್ ಮಂಡನೆಯಾದ ತಕ್ಷಣ ಯಾವ್ಯಾವ ಕ್ಷೇತ್ರಕ್ಕೆ ಎಷ್ಟೆಷ್ಟು ಎಂಬ ಹೋಲಿಕೆ ಪ್ರಾರಂಭವಾಗುತ್ತದೆ. ವಾಸ್ತವವೆಂದರೆ ಬರೀ ಅಂಕಿಅಂಶಗಳನ್ನು ನೋಡಿದರೆ ಅತ್ಯಂತ ಅಪರೂಪದ ಪ್ರಕರಣಗಳಲ್ಲಿ ಮಾತ್ರ ಹಿಂದಿನ ವರ್ಷಕ್ಕಿಂತ ಹಣವನ್ನು ಕಡಿಮೆ ಒದಗಿಸಲಾಗಿರುತ್ತದೆ. ಹೀಗಾಗಿ ಕೃಷಿಗೋ, ಶಿಕ್ಷಣಕ್ಕೋ ಹಿಂದಿನ ವರ್ಷಕ್ಕಿಂತ ಹೆಚ್ಚಿನ ಬಜೆಟ್ಟನ್ನು ನೀಡಿದ ತಕ್ಷಣ ಅದನ್ನು ಪ್ರಗತಿಪರವೆಂದು ವಾದಿಸುವ ವಾಡಿಕೆಯಿದೆ. ಆದರೆ ವಾಸ್ತವದಲ್ಲಿ ಯಾವುದೇ ಏರಿಕೆ ಹಿಂದಿನ ವರ್ಷಕ್ಕೆ ಹೋಲಿಸಿದಲ್ಲಿ ನಿಜವಾದ ಏರಿಕೆಯನ್ನು ತೋರಿಸುವುದಿಲ್ಲ. ಏಕೆಂದರೆ ಎಲ್ಲಾ ಬೆಲೆಗಳು ಹಿಂದಿನ ವರ್ಷಕ್ಕಿಂತ ಏರಿರುವುದರಿಂದ ಅಸಲಿನಲ್ಲಿ ನಿಜಕ್ಕೂ ಏರಿಕೆ ಎಷ್ಟಾಗಿದೆಯೆಂಬುದನ್ನು ಅರ್ಥ ಮಾಡಿಕೊಳ್ಳಲು ಈ ಹಣದುಬ್ಬರ ದಂಶವನ್ನು ಗಮನಕ್ಕೆ ತೆಗೆದುಕೊಳ್ಳಬೇಕು.

ಉದಾಹರಣೆಗೆ, ಕೃಷಿ ಮತ್ತು ಇನ್ನಿತರ ಚಟುವಟಿಕೆಗಳಿಗೆ ಹೋದ ವರ್ಷ 7391ಕೋಟಿಯನ್ನು ಒದಗಿಸಲಾಗಿತ್ತು. ಈ ವರ್ಷ 8558 ಕೋಟಿಯನ್ನು ಒದಗಿಸಲಾಗಿದೆ. ಅಂದರೆ 1167 ಕೋಟಿ ರೂಪಾಯಿ ಹೆಚ್ಚಳ. ಅಂದರೆ ಹೋದ ವರ್ಷಕ್ಕಿಂತ ಶೇ.15 ರಷ್ಟು ಹೆಚ್ಚಳ. ಆದರೆ ಈ ವರ್ಷ ಹಣದುಬ್ಬರ ದರವನ್ನು ಸರ್ಕಾರವೇ ಶೇ. 7ರಷ್ಟೆಂದು ಘೋಷಿಸಿದೆ. ಅಂದರೆ ಒಂದು ಸರಕನ್ನು ಕೊಂಡುಕೊಳ್ಳಲು ಹೋದ ವರ್ಷ ಕೊಡುತ್ತಿದ್ದ ಬೆಲೆಗಿಂತ ಶೇ.7ರಷ್ಟು ಜಾಸ್ತಿ ಕೊಡಬೇಕೆಂದು ಅದರ ಅರ್ಥ. ಹೀಗಾಗಿ ಎಲ್ಲಾ ಕ್ಷೇತ್ರಗಳಲ್ಲೂ ಏನು ಹೆಚ್ಚುವರಿ ಹಣ ಎಂದು ಘೋಷಿಸಲಾಗಿದೆಯೋ ಅದರಲ್ಲಿ ಶೇ. 7ರಷ್ಟು ಹಣದುಬ್ಬರವನ್ನು ಕಳೆದರೆ ಮಾತ್ರ ವಾಸ್ತವವಾಗಿ ಎಷ್ಟು ಹೆಚ್ಚುವರಿ ಎಂದು ಅರ್ಥವಾಗುತ್ತದೆ. ಮೇಲಿನ ಉದಾಹರಣೆಯಲ್ಲಿ ಕೃಷಿ ಚಟುವಟಿಕೆ ಕ್ಷೇತ್ರಕ್ಕೆ ಶೇ.15ರಷ್ಟು ಏರಿಕೆ ಎಂದು ತೋರಿದರೂ ಅದರಲ್ಲಿ ಶೆ.7ರಷ್ಟು ಹಣದುಬ್ಬರವನ್ನು ಕಳೆದರೆ ವಾಸ್ತವ ಏರಿಕೆ ಕೇವಲ ಶೆ. 7ರಷ್ಟು ಮಾತ್ರ. ಅಂದರೆ ಏರಿಕೆಯಾಗಿರುವುದು 1167 ಕೋಟಿಯಲ್ಲ, ಬದಲಿಗೆ 583ಕೋಟಿ ಮಾತ್ರ.

ಅದೇರೀತಿ ಗ್ರಾಮೀಣ ಅಭಿವೃದ್ಧಿಗೆ ಹೋದ ವರ್ಷ 18,268 ಕೋಟಿ ಕೊಡಲಾಗಿತ್ತು. ಈ ವರ್ಷ 20,342 ಕೋಟಿ ನೀಡಲಾಗಿದೆ. ಅಂದರೆ .ಹೋದ ವರ್ಷಕ್ಕಿಂತ ಶೆ. 11 (2074ಕೋಟಿ) ರಷ್ಟು ಏರಿಕೆ. ಇದರಲ್ಲಿ ಶೇ. 7ರಷ್ಟು ಹಣದುಬ್ಬರ ತೆಗೆದರೆ ವಾಸ್ತವವಾಗಿ ನೀಡಿರುವುದು ಕೇವಲ ಶೇ. 4ರ ಏರಿಕೆ ಮಾತ್ರ..ಅಂದರೆ ಏರಿಕೆಯಾಗಿರುವುದು 2074 ಕೋಟಿಯಲ್ಲ, ಬದಲಿಗೆ 730ಕೋಟಿ ಮಾತ್ರ!

ನಿಸರ್ಗದ ಹೆಣ್ಣು ಸೀತೆ



ನಮ್ಮ ರಾಮಾಯಣದ ಓದಿನಲ್ಲಿ ನಾವು ಸೀತಾ ಲಕ್ಷ್ಮಣರ ಪ್ರಸಂಗಗಳನ್ನು ಗಮನಿಸಿದ್ದೇವೆ. ಸೀತೆಯ ಲಕ್ಷ್ಮಣನ ಬಗೆಗಿನ ಪಕ್ಷಪಾತ ಒಂದು ಗಂಭೀರವಾದ ಕಾಮನೆಯ ಆಯಾಮದ್ದು. ರಾಮಾಯಣದ ಅನೇಕ ಸಂಕಷ್ಟದ ಪ್ರಸಂಗಗಳಲ್ಲಿ ಸೀತೆ ಲಕ್ಷ್ಮಣನನ್ನು ನೆನೆಯುವುದು, ಲಕ್ಷ್ಮಣನು ತಾನೇ ಮುಂದಾಳಾಗಿ ಅವಳನ್ನು ಕಾಯುವುದು, ರಕ್ಷಿಸುವುದು, ಲಕ್ಷ್ಮಣ ಸೀತಾರಾಮರ ಸಂಬಂಧಗಳಲ್ಲಿ ರಾಯಭಾರಿಯಾಗಿಯೂ ಸಂವಾಹಕನಾಗಿಯೂ ಇರುವುದು ಒಂದು ಸೀತಾ ಲಕ್ಷ್ಮಣರ ಅನುಬಂಧವಿಶೇಷವೂ ಆಗಿದೆ. ಹಾಗಿರುವುದರಿಂದಲೇ ಆ ಗುಪ್ತ ಸತ್ಯ ರಾಮಾಯಣದ ತಲೆಮೆರೆಗಳಲ್ಲಿ ಹೊರಬೀಳುತ್ತದೆ- ಕಾಡಿನ ಜಿಂಕೆಯು ಹಾಡುತ್ತಾ 'ಲಕ್ಷ್ಮಣಾ, ಸೀತಾ' ಎನ್ನುವ ನಿಸರ್ಗದ [illegible]ಕೇಳಿಸುತ್ತದೆ.

ಇಲ್ಲಿ 'ಪಟದ ರಾಮಾಯಣ'ದ ಜಾನಪದ ಪ್ರಜ್ಞೆಯಲ್ಲಿ ಸೀತೆ ತನ್ನ ಮನದಲ್ಲಿ ಹುದುಗಿ ಚಿತ್ರವಾಗಿ ಹೊರಬಿದ್ದ 'ಮನದನ್ನ'ನ ಸಾವನ್ನು ತನ್ನ ಇನಿಯನಾದ ರಾಮನಿಂದ ಇಚ್ಛಿಸುವುದಿಲ್ಲ; ತನ್ನ ಇಂಗಿತದ ಮೊಟ್ಟ ಮೊದಲ 'ಮನದನ್ನ'ನಾಗಿದ್ದ ಲಕ್ಷ್ಮಣನಿಂದ ಅಪೇಕ್ಷಿಸುತ್ತಾಳೆ; ಹಾಗೆ ರಾವಣನ ಸಾವು ಆಗುವುದಾದರೆ ಲಕ್ಷ್ಮಣನಿಂದ ಮಾತ್ರ ಆಗಲಿ ಎನ್ನುವಲ್ಲಿ ತನ್ನ ಪ್ರೇಮದ ಅಗ್ರ ಪೂಜೆಯನ್ನು ಲಕ್ಷ್ಮಣನಿಗೆ ಸಲ್ಲಿಸುತ್ತಿದ್ದಾಳೆ. ನಾವು ರಾಮಾಯಣದಲ್ಲಿ ರಾಮನ ಶತ್ರು ರಾವಣನಾಗಿರುವುದನ್ನೂ ರಾವಣನ ವಧೆ ರಾಮನಿಂದಲೇ ಆಗುವದನ್ನೂ ನೆನೆದಾಗ ಇಲ್ಲಿ ಗಿರಿಯಮ್ಮನ ರಾಮಾಯಣದಲ್ಲಿ ರಾವಣನ ವಧೆಯನ್ನು ಸೀತೆ, ತನ್ನ ಅಪೇಕ್ಷೆಯಂತೆ ಲಕ್ಷ್ಮಣನಿಂದಲೇ ಮಾಡಿಸುವುದು ಗಮನೀಯವೂ, ಗಂಭೀರವೂ ಆದ ವಿಷಯವಾಗಿದೆ.

ಇನ್ನು ಸೀತೆ ರಾವಣನಿಗೆ ಜೀವಕೊಟ್ಟ ಮೇಲೆ ರಾವಣ ಕುಣಿಯುತ್ತಾನೆ; 'ಛಂದಾಗಿ ಸೀರೆಯ ಮುಸುಕಿನಲ್ಲಿ' ಸೇರಿ ಸೀರೆಯ 'ತೋಳ ಎಡೆಗೆ' 'ಬಂದೆರಗು'ತ್ತಾನೆ. 'ಸೀರೆಯ ಮುಸುಕು' 'ಸೆರಗು' ಹೇಗೆ ಹೆಣ್ಣಿನ ಸತೀತ್ವದ ಸಂಕೇತವೆಂದು ನೆನೆಯುವುದು ಇಲ್ಲಿ ಪ್ರಸ್ತುತ. ನಮ್ಮಲ್ಲಿ ಹೆಣ್ಣು 'ಸೆರಗು ಹಾಕುತ್ತಾಳೆ' ಎಂದರೆ ತನ್ನ ಮಾನವನ್ನು, ಸತೀತ್ವವನ್ನು ಹಾದರಗೊಳಿಸುತ್ತಿದ್ದಾಳೆ ಎಂದರ್ಥ. ರಾವಣನು ಸೀತೆಯ 'ತೋಳೆಡೆಗೆ' 'ಸೀರೆಯ ಮುಸುಕಿನಲ್ಲಿ' 'ಬಂದೆರಗು'ವುದು ಸೀತಾರಾವಣರ ಸಮಾಗಮವನ್ನು ಪೂರ್ಣಗೊಳಿಸುತ್ತದೆ. ಅಲ್ಲದೆ ಸೀತೆ 'ಉರಿ'ಯಲ್ಲಿ 'ಶರಧಿ'ಯಲ್ಲಿ 'ಅಡಗ'ದ 'ಮುಣು'ಗದ ರಾವಣನನ್ನು 'ಹಾಸಿಗೆಯ ಕೆಳಗೆ ಹಿಡಿದಿಟ್ಟು ಮಲಗು'ವ ವಿಚಿತ್ರವಾದ ಬಚ್ಚಿಡುವಿಕೆ ಸೀತಾರಾವಣರ ಸಮಾಗಮವನ್ನು ಪ್ರಬಲವಾಗಿ ಪುಷ್ಟೀಕರಿಸುತ್ತದೆ.

ರಾವಣನು ಬೇಟೆಯಿಂದ ಹಿಂತಿರುಗಿ ಬಂದಾಗ ಸೀತೆಯ 'ಚಿಂತೆ', ತಪ್ಪಿತಸ್ಥ ಮನೋಭಾವ, ಸಹಜವಾದದ್ದೇ. ರಾಮನು ಗಂಡನಾದ ತನಗೆ ನ್ಯಾಯವಾಗಿ ಸೇರಿದ, 'ಮಂಚದ ಮೇಲೆ.... ಕುಳಿತೊಡನೆ ಮಂಚ ಮುರಿದು ಬೀಳು'ವುದು ತನ್ನ 'ಪತಿ'ತನದ ಅಸ್ತಿತ್ವದ ಭಗ್ನತೆಯನ್ನು, ಅಂದರೆ, 'ತಂದೆಯಕಾಲದ ಹಿಂದೆ ದೊಡ್ಡ ಸಿಂಹಾರಿ ತುಂಡಾ'ಗುವುದು ರಾಮನಿಗೆ ವಂಶಪಾರಂಪರ್ಯವಾಗಿ ಬಂದ ರಘುವಂಶದ 'ಯಜಮಾನ್ಯ'ದ, 'ಸಿಂಹ'ದಂತಹ ಗಂಡಸುತನದ ಪತನವನ್ನು ವ್ಯಂಜಿಸುತ್ತದೆ. ಮತ್ತೆ 'ಪಟ ಎದ್ದು ಕುಣಿಯುತ್ತದೆ.' ರಾಮ ದೂರುತ್ತಾನೆ. 'ನಾ ಮಲಗುವ ಪಟ್ಟ ಮಂಚದ ಮ್ಯಾಲೆ ಬಿಂಬವ ಬರೆದು ಭೋಗಿಸಿದ್ಯಾ!?' ಸೀತೆ ಸುಳ್ಳು ಹೇಳುತ್ತಾಳೆ: 'ರಾಮರೆ, ತಾಟಕಿ ಇಂದು ಮೋಸವ ಮಾಡಿ ನನ್ನ ಛಂದಾದ ಪಟವ ಬರೆದು ತಂದುಬಿಟ್ಟಳು ನನ್ನ ಮ್ಯಾಲೆ.' ರಾಮನೆನ್ನುತ್ತಾ 'ನಾಡೊಳಗೆ ಪತಿವ್ರತೆಯೆಂದು. ಪ್ರಾಣವಲ್ಲಭೆ ನೀನೆ ಗಟಿಯೆಂದು ನಂಬದೆ ರಾವಣನಿಗೆ ಮರುಳಾಗೋದರಿಯೇ.' 'ಲಕ್ಷ್ಮಣ ಪಟವನ್ನು ಹರಿದು ಹಾಕುತ್ತಾನೆ. ರಾವಣ ಸೀತೆಯ ಪರತ್ತಿನಂತೆ ಲಕ್ಷ್ಮಣನ ಕೈಯಿಂದಲೇ ಸಾಯುತ್ತಾನೆ. ಆದರೆ ಆಶ್ಚರ್ಯವೂ ಕುತೂಹಲಕಾರಿಯೂ ಆದ ವಿಷಯವೇನೆಂದರೆ 'ಹರಿದು ಹಾಕಿದಕ್ಕೆ ಶ್ರೀರಾಮ ಕೋಪಿಸಿದ'. ಏಕೆ? ತನ್ನ ದಾಂಪತ್ಯವನ್ನು ಕೆಡಿಸಿ ತನ್ನ ಸ್ಥಾನದಲ್ಲಿ ನಿಂತಿದ್ದ ರಾವಣನನ್ನು ತಾನು ಕೊಂದು ಮತ್ತೆ ತನ್ನ ಪತಿಯ ಅಸ್ತಿತ್ವವನ್ನು ಸ್ಥಾಪಿಸಬೇಕಾಗಿದ್ದ ರಾಮನಿಗೆ, ಲಕ್ಷ್ಮಣ ಆ ಕೆಲಸವನ್ನು ಮಾಡಿ, ತನ್ನ ಸ್ಥಾನದಲ್ಲಿ ನಿಂತಿದ್ದಾನೆ ಎಂದು ರಾಮನಿಗೆ ಕೋಪವೋ? ಇನ್ನು ರಾಮನಿಗೆ ಉಳಿದಿರುವ ಪ್ರತೀಕಾರ, ಈ ವಂಚನೆಗೆ, ಮೋಸಕ್ಕೆ ಕಾರಣಳಾದ ಸೀತೆಯ ಕೊಲೆ. ಅದನ್ನು ರಾಮನೇ, ತನ್ನ ಗಂಡನನ್ನು ವಂಚಿಸಿದವಳನ್ನು ತಾನೇ ಕೊಲೆ ಮಾಡುವುದು ತಕ್ಕುದಾದರೂ, ರಾಮನು ಲಕ್ಷ್ಮಣನನ್ನು ಆ ಕೆಲಸಕ್ಕೆ ನೇಮಿಸುವುದು ರಾಮನೇ, ಸೀತೆಯ ಮೇಲೆ ಲಕ್ಷ್ಮಣನ ಸ್ವಾಮ್ಯವನ್ನು ಸ್ಥಾಪಿಸುವ ಧ್ವನಿಯನ್ನು ಸೂಚಿಸುತ್ತದೆ. ಲಕ್ಷ್ಮಣನಾದರೋ ಕೊಲ್ಲದೆ 'ಗುರುತು' ಮಾತ್ರ ತರುತ್ತಾನೆ; ರಾಮ ಗುರುತು ನೋಡಿ ದುಃಖಿಸುತ್ತಾನೆ. ಕೊನೆಯಲ್ಲಿ ರಾಮನ ಮತ್ತು ಲವಕುಶರ ಭೇಟಿಯಾಗಿ, ರಾಮನು ಸೀತೆಯೊಡನೆ ಲವಕುಶರೊಡನೆ ಅಯೋಧ್ಯೆಗೆ ಹಿಂತಿರುಗುತ್ತಾನೆ.

ಇಲ್ಲಿನ ಒಂದೆರಡು ಸೂಕ್ಷ್ಮಗಳನ್ನು ಗಮನಿಸುವ: ಸೀತೆ ರಾವಣನನ್ನು ಕಾಡಿನಲ್ಲಿ ನೋಡುತ್ತಾಳೆ: ಕಾಡಿನಲ್ಲಿ ಗರ್ಭವತಿಯಾಗುತ್ತಾಳೆ; ಕಾಡಿನಲ್ಲಿ ಹೆರುತ್ತಾಳೆ; ರಾಮನಿಗೆ ದುಃಸ್ವಪ್ನವು ಕಾಡಿನಲ್ಲಾಗುತ್ತದೆ. ಒಂದು ರೀತಿಯಲ್ಲಿ ಸೀತೆಯ ಕಥೆ. ಕಾಡಿನಲ್ಲಿ ನಡೆಯುವ ನೈಸರ್ಗಿಕ ಕಥೆ ನಿಸರ್ಗದಲ್ಲಿ ಹುಟ್ಟಿದ "ಭೂದೇವಿಯ ಮಗಳು" ನಿಸರ್ಗದಲ್ಲಿ ರಾವಣನನ್ನು "ಕೂಡಿ", ನಿಸರ್ಗದಲ್ಲೇ ಗರ್ಭವತಿಯೆಂದು ವಸಿಷ್ಠರಿಗೆ ಗೋಚರಿಸಿ, ನಿಸರ್ಗದಲ್ಲೇ ಗರ್ಭ ಹೊತ್ತು ನಿಸರ್ಗದಲ್ಲೇ ನಿಸರ್ಗದ ಹೆಸರಿನ, "ಲವ"-"ಕುಶ" ಎಂದರೆ ದರ್ಭೆ ಎಂಬ ಅರ್ಥದ, ಮಕ್ಕಳನ್ನು ಹೆರುತ್ತಾಳೆ. ವಾಲ್ಮೀಕಿ ರಾಮಾಯಣದಲ್ಲಂತೂ ಸೀತೆ ಕೊನೆಗೆ ನಿಸರ್ಗವನ್ನೇ ಸೇರುತ್ತಾಳೆ-ತೆರೆದ ಭೂಮಿಯ ಬಾಯಿಗೆ ಬಿದ್ದು. ಒಂದು ವಿಶಿಷ್ಟ ರೀತಿಯಲ್ಲಿ ನಿಸರ್ಗದ ಹೆಣ್ಣಾದ ಸೀತೆಯನ್ನು ಅನೈಸರ್ಗಿಕವಾಗಿ, ವರಕ್ಕೆ ಹುಟ್ಟಿದ ಅನೈಸರ್ಗಿಕ ಗಂಡಾದ ರಾಮನು ಸೀತೆಯನ್ನು ಹೆಂಡತಿಯಾಗಿ ಪಡೆದು, ಅವಳೊಡನೆ ನೈಸರ್ಗಿಕವಾಗಿ ಬಾಳಲಾರದೆ, ಅವಳನ್ನು ನಿಸರ್ಗಕ್ಕೆ ಕರೆದುಕೊಂಡು ಹೋಗಿ, ಅಲ್ಲಿನ ನೈಸರ್ಗಿಕ ವ್ಯಾಪಾರಗಳಿಗೆ ಅವಳನ್ನು ಅಳವಡಿಸಿ, ಕೊನೆಗೆ ಅವಳನ್ನು ನಿಸರ್ಗಕ್ಕೆ ಅಟ್ಟಿ ತಾನು ಏಕಾಂಗಿಯಾಗಿ ಅಯೋಧ್ಯೆಗೆ.

ಕೃಷಿಗೆ ಹೆಚ್ಚು ಹಣ ನೀಡಲಾಗಿದೆ.. ಆದರೆ ರೈತ ಪರ ಬಜೆಟ್ಟಲ್ಲ..!

ಬಜೆಟ್ಟುಗಳ ಬಗ್ಗೆ ಇರುವ ಮತ್ತೊಂದು ಮಿಥ್ಯೆ ಏನೆಂದರೆ ಕೃಷಿ ಕ್ಷೇತ್ರಕ್ಕೆ ಹೆಚ್ಚು ಹಣ ನೀಡಿದ್ದರೆ ತಕ್ಷಣವೇ ಅದನ್ನು ರೈತ ಪರ ಬಜೆಟ್ಟೆಂದೂ, ಶಿಕ್ಷಣಕ್ಕೆ ಹಿಂದೆಂದೂ ಇಲ್ಲದಷ್ಟು ಹಣ ನೀಡಿದ್ದರೆ ಅದು ಬಡ ವಿದ್ಯಾರ್ಥಿಗಳ ಪರ ಬಜೆಟ್ಟೆಂದೂ ವಿಶ್ಲೇಷಿಸುವುದು. ಇದು ಮೇಲ್‌ಸ್ತರದ ವಿಶ್ಲೇಷಣೆ ಮಾತ್ರವಲ್ಲ, ಬಡಜನತೆಯನ್ನು ಉದ್ದೇಶಪೂರ್ವಕವಾಗಿ ದಾರಿ ತಪ್ಪಿಸುವ ವಿಷಯವೂ ಆಗಿದೆ. ಏಕೆಂದರೆ ಯಾವ ಕ್ಷೇತ್ರಕ್ಕೆ ಎಷ್ಟೆಷ್ಟು ಹಣ ಕೊಟ್ಟಿದ್ದಾರೆ ಎಂಬುದಕ್ಕಿಂತಲೂ ಯಾವ ಕ್ಷೇತ್ರದಲ್ಲಿ ಯಾವ ವರ್ಗಕ್ಕೆ ಮತ್ತು ಯಾವ ಬಗೆಯ ಅಭಿವೃದ್ಧಿಗೆ ಹೆಚ್ಚು ಹಣ ನೀಡಲಾಗಿದೆ ಎಂಬುದು ತುಂಬಾ ಮುಖ್ಯವಾದದ್ದು.

ಉದಾಹರಣೆಗೆ ಕೃಷಿಗೆ ಈ ಬಾರಿ ಬ್ಯಾಂಕುಗಳಿಂದ ,25,000 ಕೋಟಿ ರೂ.ವನ್ನು ಕೇವಲ ಸಾಲ ನೀಡಿಕೆಗೆಂದೇ ನೀಡಲಾಗಿದೆ. ಅದರಲ್ಲಿಯೂ ಟ್ರ್ಯಾಕ್ಟರ್ ಖರೀದಿ, ಕೋಲ್ಡ್ ಸ್ಟೋರೇಜ್ ಇತ್ಯಾದಿಗಳ ಮೇಲೆ ನಿರ್ದಿಷ್ಟ ಪ್ರದೇಶದಲ್ಲಿ ನಿರ್ದಿಷ್ಟ ಬಗೆಯ ರಫ್ತು ಬೆಳೆಯನ್ನು ಉದ್ದೇಶಿಸಿ ನೀಡಲಾಗಿದೆಯೇ ವಿನಃ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಸಣ್ಣ ಮತ್ತು ಅತಿ ಸಣ್ಣ ರೈತರ ಬದುಕಿಗೆ ಆಸರೆ ಆಗಲೆಂದಲ್ಲ.

ಅದೇ ರೀತಿ ಗ್ರಾಮೀಣ ಸೌಕರ್ಯಗಳ ಅಭಿವೃದ್ಧಿಗೆ ಅದರಲ್ಲೂ ವಿಶೇಷವಾಗಿ ಗ್ರಾಮೀಣ ರಸ್ತೆ ಸಾರಿಗೆ ಸೌಕರ್ಯಗಳ ಅಭಿವೃದ್ಧಿಗೆ ನೀಡುತ್ತಿದ್ದ ಹಣವನ್ನು 9,819 ಕೋಟಿಯಿಂದ 71,589 ಕೋಟಿಗೆ ಏರಿಸಲಾಗಿದೆ. ಹಾಗೆಂದ ಮಾತ್ರಕ್ಕೆ ಇದು ಗ್ರಾಮೀಣ ಅಭಿವೃದ್ಧಿ ಪರ ಮತ್ತು ಕೃಷಿ ಪರ ಬಜೆಟ್ಟೇ ಅಲ್ಲ. ಏಕೆಂದರೆ ಇಷ್ಟೆಲ್ಲಾ ಹಣ ಖರ್ಚಾಗುತ್ತಿರುವುದು ಗ್ರಾಮಗಳಲ್ಲಿ ರಸ್ತೆ ಸಂಚಾರ ಕಲ್ಪಿಸುವುದಕ್ಕಲ್ಲ. ಒಂದೆರಡು ಕೋಟಿ ಅದಕ್ಕೂ ಖರ್ಚಾಗಬಹುದು. ಅಲ್ಲಕ್ಕಿಂತ ಹೆಚ್ಚಾಗಿ ಅದರ ಪ್ರಧಾನ ಪಾಲು ವೆಚ್ಚವಾಗುವುದು ಈಗ ಭಾರತದಲ್ಲಿ ದೊಡ್ಡ ರೀತಿಯಲ್ಲಿ ಬರುತ್ತಿರುವ ಕಾರ್ಪೊರೇಟ್ ಕೃಷಿಗೆ ಪೂರಕವಾದ ಸೌಕರ್ಯಗಳನ್ನು ಕಲ್ಪಿಸುವ ಸಲುವಾಗಿ. ಅದನ್ನು ಅರ್ಥ ಮಾಡಿಕೊಳ್ಳಲು 71,589 ಕೋಟಿ ರೂಪಾಯಿ ವೆಚ್ಚಕ್ಕೆ ಹಾಕಿರುವ ಯೋಜನೆಗಳೇನೆಂದು ಗಮನಿಸಬೇಕು.

ಅದರ ಬಗ್ಗೆ ಬಜೆಟ್ಟಿನಲ್ಲೇ ಒಂದು ಸಮಗ್ರ ಕೃಷಿ ಯೋಜನೆಯನ್ನು ಪ್ರಕಟಿಸುವುದಾಗಿ ಸರ್ಕಾರ ಪ್ರಕಟಿಸಿದೆ. ಇದರ ಕುರುಹನ್ನು ಸನ್ಮಾನ್ಯ ಪ್ರಧಾನಿಗಳು ಪ್ರತಿ ವರ್ಷ ಸ್ಪಷ್ಟವಾಗಿ ನೀಡುತ್ತಲೇ ಇದ್ದಾರೆ. ಸಣ್ಣ ಹಾಗೂ ಅತಿ ಸಣ್ಣ ರೈತರು ಕೃಷಿಯಿಂದ ಹೊರಬರಬೇಕು. ಮತ್ತು ಕಾರ್ಪೊರೇಟ್ ಕೃಷಿ ಮತ್ತು ಕಾಂಟ್ರ್ಯಾಕ್ಟ್ ಕೃಷಿಗೆ ಹೆಚ್ಚಿನ ಒತ್ತನ್ನು ನೀಡಬೇಕು. ಅದಕ್ಕಾಗಿ ಇಡೀ ಕೃಷಿ ಮತ್ತೊಂದು ಹಸಿರುಕ್ರಾಂತಿಗೆ ಸಜ್ಜಾಗಬೇಕು. ಇದೇ ನಮ್ಮ ಹೊಸ ಕೃಷಿ ನೀತಿ. ಬಜೆಟ್ಟು ಕೂಡಾ ಇದಕ್ಕೆ ಪೂರಕವಾದ ಯೋಜನೆಗಳನ್ನು ಹಾಕಿದೆ ಮತ್ತು ಅದಕ್ಕೆ ಬೇಕಾದ ಹಣವನ್ನು ಕೊಟ್ಟಿದೆ ಅಷ್ಟೆ!! ಆದ್ದರಿಂದ ಇದು ಅಬ್ಬಬ್ಬಾ ಎಂದರೆ ಕಾರ್ಪೊರೇಟ್ ಕೃಷಿ ಪರ ಬಜೆಟ್ಟೆಂದು ಕರೆಸಿಕೊಳ್ಳಲ್ಪಡಬಹುದಷ್ಟೆ!



ಶಿಕ್ಷಣಕ್ಕೆ ಹಣ, ಬಡ ವಿದ್ಯಾರ್ಥಿಗಳ ಕ್ಷೇಮಕ್ಕಲ್ಲ!!

ಅದೇರೀತಿ ಶಿಕ್ಷಣಕ್ಕೆ ಈ ಹಿಂದೆಂದೂ ಇಲ್ಲದಷ್ಟು ಹಣವನ್ನು ನೀಡಲಾಗಿದೆ. ಒಟ್ಟಾರೆಯಾಗಿ 23,142ಕೋಟಿ ರೂಪಾಯಿಯನ್ನು ನೀಡಲಾಗಿದೆ. ಆದರೆ ಶಿಕ್ಷಣದಲ್ಲಿ ಯಾವ ಬಗೆಯ ಮತ್ತು ಯಾರ ಬೆಳವಣಿಗೆಯನ್ನು ಬಯಸಿ ಈ ಹೆಚ್ಚುವರಿಯನ್ನು ನೀಡಲಾಗಿದೆ ಎಂಬುದನ್ನು ವಿಶ್ಲೇಷಿಸದೆ ಇದರ ಹಿಂದಿನ ಮೋಸ ಅರ್ಥವಾಗುವುದಿಲ್ಲ. ಉತ್ತರ ಪ್ರದೇಶ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಬಿಸಿಯೂಟದ ಸೌಲಭ್ಯವನ್ನು 10ನೇ ತರಗತಿಯವರೆಗೆ ವಿಸ್ತರಿಸಲಾಗಿದೆ. ಮತ್ತು 16 ಕೋಟಿ ವಿದ್ಯಾರ್ಥಿಗಳಿರುವ ಈ ದೇಶದಲ್ಲಿ 1 ಲಕ್ಷ ವಿದ್ಯಾರ್ಥಿಗಳಿಗೆ ವರ್ಷಕ್ಕೆ 6000 ರೂಪಾಯಿ ವಿದ್ಯಾರ್ಥಿ ವೇತನ ನೀಡುವ ಯೋಜನೆಯನ್ನು ಅತ್ಯಂತ ಹೆಗ್ಗಳಿಕೆಯಿಂದ ಘೋಷಿಸಲಾಗಿದೆ.

ಇವೆರಡು ಯೋಜನೆಗಳು ಎಷ್ಟು ಲಂಪಟ ಜನಪ್ರಿಯತೆಯಿಂದ ಕೂಡಿರುವುದು ಮತ್ತು ಎಷ್ಟು ನೆಪ ಮಾತ್ರದ್ದು ಎಂಬುದು ನೋಡಿದ ತಕ್ಷಣವೇ ಅರ್ಥವಾಗುವಷ್ಟು ಸ್ಪಷ್ಟವಾಗಿರುವುದರಿಂದ ಅದರ ವಿವರಣೆಯ ಅಗತ್ಯವಿಲ್ಲ. ಪ್ರಶ್ನೆ ಇರುವುದು ಶಿಕ್ಷಣ ಕ್ಷೇತ್ರದಲ್ಲಿ ಆಗಿರುವ ಹೆಚ್ಚಳ ಏನನ್ನು ಗುರಿಯಾಗಿಟ್ಟುಕೊಂಡಿದೆ ಎಂಬುದು. ವಾಸ್ತವವಾಗಿ ಶಿಕ್ಷಣ ಕ್ಷೇತ್ರದಲ್ಲಿ — ಅದರಲ್ಲೂ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ — ವಿದೇಶಿ ಬಂಡವಾಳ ತರುವುದು ಸರ್ಕಾರದ ಒಂದು ಗುರಿಯಾಗಿದೆ. ಭಾರತವನ್ನು ಒಂದು ನಾಲೆಡ್ಜ್ ಸೊಸೈಟಿಯನ್ನಾಗಿ ಪರಿವರ್ತಿಸುವುದು ಇದರ ಗುರಿ. ಅಂದರೆ ಭಾರತ ಸಮಾಜದ ಎಲ್ಲಾ ಸಂದಿಗೊಂದಿಗಳಲ್ಲೂ ಐಟಿ ಕ್ಷೇತ್ರಕ್ಕೆ ಮಾರುಕಟ್ಟೆ ಒದಗಿಸುವುದು ಮತ್ತು ಅದನ್ನು ನಡೆಸಲು ಬೇಕಾದ ಐಟಿಯ ಎಬಿಸಿಡಿ ಬಲ್ಲ ಕೂಲಿಗಳನ್ನು ಸಿದ್ಧಪಡಿಸುವುದು ಈ ಮಹತ್ತರ ಯೋಜನೆಯ ಉದ್ದೇಶವಾಗಿದೆ. ಹೀಗಾಗಿಯೇ ಈ ಬಾರಿಯ ಒತ್ತು ಇರುವುದು ಸಾಕ್ಷರತೆಗಿಂತ ಜಾಸ್ತಿ ಕಂಪ್ಯೂಟರ್ ಸಾಕ್ಷರತೆಯನ್ನು ಹೆಚ್ಚಿಸುವ ಕಡೆಗೆ ಮತ್ತು ಪ್ರಾಥಮಿಕ ಕ್ಷೇತ್ರಕ್ಕಿಂತ ಐಟಿಐ ಇನ್ನಿತ್ಯಾದಿ ಮಾಧ್ಯಮಿಕ ಕ್ಷೇತ್ರದ ಶಿಕ್ಷಣದಲ್ಲಿ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್ ಕೂಲಿಗಳನ್ನು ತಯಾರಿಸುವ ಕಡೆಗೆ!

ಇದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಶಿಕ್ಷಣ ನೀತಿಗೆ ತಕ್ಕ ಹಾಗೇ ಇದೆ. ಮತ್ತು ಆ ಶಿಕ್ಷಣ ನೀತಿ ಬಡ ವಿದ್ಯಾರ್ಥಿಗಳ ಸಂಕ್ಷೇಮದ ಬದಲಿಗೆ ವಿದೇಶಿ ಬಂಡವಾಳಿಗರ ಹಿತಾಸಕ್ತಿ ಕಾಯುವ ಆರ್ಥಿಕ ನೀತಿಗೆ ತಕ್ಕ ಹಾಗಿದೆ...

ಆದ್ದರಿಂದಲೇ ಈ ಬಜೆಟ್ಟು ಶಿಕ್ಷಣಕ್ಕೆ ಹೆಚ್ಚು ಹಣ ಕೊಟ್ಟ ತಕ್ಷಣ ಬಡ ವಿದ್ಯಾರ್ಥಿಗಳ ಪರವಾದ ಬಜೆಟ್ಟಲ್ಲ. ಅದೇ ರೀತಿ ಕೃಷಿ ಕ್ಷೇತ್ರಕ್ಕೆ ಹೆಚ್ಚು ಹಣ ಕೊಟ ಮಾತ್ರಕ್ಕೆ ರೈತ ಪರ ಬಜೆಟ್ಟಲ್ಲ.

ಭಾರತದ ಸಂವಿಧಾನಕ್ಕೆ ಬದ್ಧವಾದ ಬಜೆಟ್ಟಲ್ಲ

ಹಾಗೆ ನೋಡಿದಲ್ಲಿ ಈ ಬಜೆಟ್ಟು ಜನಪರವೇ ಅಲ್ಲವೇ ಎಂದು ವಿಶ್ಲೇಷಣೆ ಮಾಡುವ ಅಗತ್ಯವೇ ಇಲ್ಲ. ಏಕೆಂದರೆ 2002 ರ ಫೆಬ್ರವರಿಯಲ್ಲಿ ಭಾರತ ಸಂಸತ್ತು ವಿತ್ತೀಯ ಜವಾಬ್ದಾರಿ ಮತ್ತು ಬಜೆಟ್ ನಿರ್ವಹಣೆ ಕಾಯಿದೆ (FRBM) ಎಂಬ ಕಾಯಿದೆಯನ್ನು ಸರ್ವ ಸಮ್ಮತಿಯಿಂದ ಪಾಸು ಮಾಡಿದೆ. ಅದರ ಪ್ರಕಾರ ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ ಸರ್ಕಾರದ ಖರ್ಚು ಕಡಿಮೆ ಮಾಡಿ ಸರ್ಕಾರದ ಆದಾಯ ಜಾಸ್ತಿ ಮಾಡಿಕೊಳ್ಳಬೇಕು. ಈ ಬಜೆಟ್ಟು ತನ್ನ ಪ್ರಥಮ ಆದ್ಯತೆಯನ್ನು ಈ ಸಿದ್ಧಾಂತಕ್ಕೆ ಘೋಷಿಸಿದೆ. ಆದ್ದರಿಂದಲೇ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಶ್ರೀಮಂತರಿಗೆ ಹೆಚ್ಚಿಗೆ ತೆರಿಗೆ ಹಾಕಿ ಬಡವರಿಗೆ ಕಡಿಮೆ ತೆರಿಗೆ ಹಾಕುವ ಹಳೆಯ ಪದ್ಧತಿಯನ್ನು ಬಿಟ್ಟು VAT ಎಂಬ ಬಡವರಿಂದಲೇ ಹೆಚ್ಚಿಗೆ ಸುಲಿಯುವ ತೆರಿಗೆ ಪದ್ಧತಿಯನ್ನು ಆಶ್ರಯಿಸಿವೆ.

ಇದರಿಂದಾಗಿ ಈ ವರ್ಷ ಈ ದೇಶದ ಬಡಜನತೆ 90,000 ಕೋಟಿ ರೂಪಾಯಿ ಹೆಚ್ಚಿಗೆ ತೆರಿಗೆ ಕಟ್ಟಿದ್ದಾರೆ. ಇದಲ್ಲದೆ ಮುಂದೆ ಅಂದರೆ 2010ರಿಂದ VAT ಗಿಂತಲೂ ಕ್ರೂರವಾದ GST ಎಂಬ ಹೊಸ ತೆರಿಗೆ ಪದ್ಧತಿಯನ್ನು ಜಾರಿಗೆ ತಂದು ಬಡಜನತೆಯನ್ನು ಇನ್ನಷ್ಟು ಸುಲಿಯುವ ಇರಾದೆಯನ್ನು ಸರ್ಕಾರ ವ್ಯಕ್ತಪಡಿಸಿದೆ. ಆದ್ದರಿಂದಲೇ ಸರ್ಕಾರ ಪೆಟ್ರೋಲ್ ಬೆಲೆ ವಿದೇಶದಲ್ಲಿ ಇಳಿಮುಖವಾದರೂ ಇಲ್ಲಿ ಇಳಿಯದಂತೆ ನೋಡಿಕೊಂಡಿದೆ.

ಸಾರಾಂಶದಲ್ಲಿ ಇಷ್ಟೇ. ಆರ್ಥಿಕ ನೀತಿ ಬದಲಾಗದೆ ಬಜೆಟ್ಟಿನಲ್ಲಿ ಮಾತ್ರ ಜನಪರತೆಯನ್ನು ನಿರೀಕ್ಷಿಸುವುದು ಮುಗ್ಧತನವಲ್ಲ ಮುಠ್ಠಾಳತನ.

–ಶಿವಸುಂದರ್

ಗರಕ್ಕೆ ಬರುವ ನಾಗರಿಕನ ಕಥೆ ರಾಮಾಯಣ ಕಥೆಯೆಂದು ತೋರುತ್ತದೆ.

ಅದೇನೇ ಇರಲಿ, ನಾವು ವಾಲ್ಮೀಕಿ ರಾಮಾಯಣದಲ್ಲಿ ಕಾವ್ಯದ ಸಾಕ್ಷದಲ್ಲಿ ಕಂಡುಕೊಂಡ ಸೀತಾರಾವಣರ ಗುಪ್ತಸಂಯೋಗ ಜಾನಪದದ ಮುಗ್ಧ ಮುಕ್ತ ಪ್ರಜ್ಞೆಗೆ ಹೇಗೆ ಬೋಧೆಯಾಗಿದೆ; ಹೇಗೆ ವಾಲ್ಮೀಕಿ ರಾಮಾಯಣದ ಇಂಗಿತ ಜನಸಾಮಾನ್ಯರಿಗೆ ಇನ್‌ಸ್ಟಿಂಕ್ಟಿವ್ (instinctive) ಆಗಿ ಲಭಿಸಿದೆ; ಹೇಗೆ ಭಾರತೀಯ ನಿರಕ್ಷರಸ್ಥ ಅನಾಮಧೇಯ, ರಾಮಾಯಣದ ಓದನ್ನು ರಾತ್ರಿಯೆಲ್ಲಾ ಕೇಳಿ ಬೆಳಗಿನ ಬೆಳಕಿನ ತಿಳಿವಿನಲ್ಲಿ "ರಾಮ ಸೀತೆಗೆ ಏನಾಗಬೇಕು?" ಎಂದು ಕೇಳುವ ಪ್ರಾಮಾಣಿಕನಾಗಿದ್ದಾನೆ; ಹೇಗೆ ಅವನು ಸೀತೆಯ ಬಗೆಗಿನ ರಾಮನ ವರ್ತನೆಯನ್ನು ಕೂಲಂಕಷವಾಗಿ ಕಾಣುತ್ತಲೇ ಸೀತಾರಾವಣರ ನೈಸರ್ಗಿಕ ಸಂವೇದನೆಗಳನ್ನು, ಸಹಜ ಸಂಯೋಗವನ್ನು ಗ್ರಹಿಸಬಲ್ಲ ಸಹೃದಯೀ ಕೇಳುಗನಾಗಿದ್ದಾನೆ- ಅದೀಗ ನಾವು ಜಾನಪದ ರಾಮಾಯಣದ ಜನಸಾಮಾನ್ಯೆ ಹೇಳವನಕಟ್ಟೆ ಗಿರಿಯಮ್ಮನ "ಪಟದ ರಾಮಾಯಣ"ದಲ್ಲಿ ಕಂಡುಕೊಳ್ಳುವ ಸತ್ಯಾಂಶ. ಜನಸಾಮಾನ್ಯಳೂ, ಅದರಲ್ಲೂ ಹೆಣ್ಣಾದ ಹೇಳವನಕಟ್ಟೆ ಗಿರಿಯಮ್ಮ ವಾಲ್ಮೀಕಿ ರಾಮಾಯಣದ ಸೀತೆಯ ಇಂಗಿತವನ್ನು ತನ್ನ ಸಹಜ ಸಂವೇದನೆಯ ಪ್ರಾಮಾಣಿಕತೆಯಲ್ಲೇ ಅರಿತುಕೊಂಡಿದ್ದಾಳೆ.

ಬರಹಗಳನ್ನೂ ಕವನಗಳನ್ನೂ ಕಥೆಗಳನ್ನೂ ಬರೆದಾಗಲೆಲ್ಲಾ ತಪ್ಪದೇ ಓದುತ್ತಲೇ ಬಂದಿರುವ, ಹೆಣ್ಣು ಬರಹಗಾರರೊಬ್ಬರು 'ರಾಮಾಯಣದ ಸೀತಾಯಣ'ವನ್ನು 'ವಿಪರೀತ ಓದು' ಎನ್ನುತ್ತಲೂ, ಅದು ಸೀತೆಗೂ ಹೆಣ್ಣುಮಕ್ಕಳೆಲ್ಲರಿಗೂ ಮಾಡಿದ ಅಪಚಾರ ಅವಮಾನವೆಂದು ನನ್ನ ಮಿತ್ರರೊಬ್ಬರಿಗೆ ಬರೆದದ್ದನ್ನು ನಾನು ಓದಿದಾಗ ನನಗೆ ತುಂಬಾ ನೋವಿನಿಂದ ಅನಿಸಿದ್ದು: ಹೇಗೆ ಅಭ್ಯಾಸರೂಢಿ 'ನಾಲ್ಕು ಜನ ಏನೆನ್ನುತ್ತಾರೆ' ಎಂಬುದು, ಮೂಢ ನಂಬಿಕೆ, ಅಪ್ಪ ಹಾಕಿದ ಆಲದಮರ, ಪರಿಸೆಗುಂಟೆ ಗೋವಿಂದಾ ಇವು ಎಷ್ಟು ಅಭೇದ್ಯವಾದುವು ಎಂಬುದು. ನೊಂದು ನೊಂದು ನುಲಿಯುತ್ತಿರುವ ಈ ನಾಡಿನ ಹತಭಾಗಿನಿಯರೂ ಬೆಳಕನ್ನು ಕಾಣುವ ಆಸಕ್ತಿಯನ್ನೂ ಕಳೆದುಕೊಂಡು ಪರಿಸೆಗುಂಟೆ ಗೋವಿಂದಾ ಎನ್ನುತ್ತಾ ನೋಯುತ್ತಿರುವುದು ಅತ್ಯಂತ ದಾರುಣವಾದುದು. ಆ ದಲಿತ ಲೇಖಕಿ ಹೇಳವನಕಟ್ಟೆಯ ಗಿರಿಯಮ್ಮನಂತಹ ಮಗುತನವನ್ನು ಮುಗ್ಧತೆ-ಮುಕ್ತತೆಗಳನ್ನು ಹತ್ತಿಕ್ಕಿಕೊಳ್ಳುತ್ತಿದ್ದಾಳಲ್ಲಾ ಎಂಬುದು ವಿಷಾದದ ಸಂಗತಿ.

ಬಟ್ಟೆಯಿಲ್ಲದ ಮೆರವಣಿಗೆ ಹೋಗುತ್ತಿರುವ ರಾಜನನ್ನು ಕಂಡು ಭ್ರಮೆಗೊಂಡ ಜನರು ಆಹಾ ಓಹೋ ಎನ್ನುತ್ತಿರಲು ಮುಗ್ಧವಾದ



ಡಾ. ಪ್ರೋ. ಲಂಕೆ ರಾಮಮೂರ್ತಿಯವರ

2 ಸೀತಾಯಣ

ದುರಂತವೇನೆಂದರೆ ನಾವು ನಮ್ಮ ಓದುಬರಹದ ಪಂಡಿತ್ಯದ ಪ್ರತಿಷ್ಠೆಯಲ್ಲಿ ನಮ್ಮ ಗಿರಿಯಮ್ಮನಂತಹ, ಮಗುತನವನ್ನು, ಮುಗ್ಧತೆ-ಮುಕ್ತತೆಗಳನ್ನು ಕಳೆದುಕೊಂಡು ಹೇಳವನಕಟ್ಟೆಯ ಹೇಳವರಾಗಿದ್ದೇವೆ ಎಂಬುದು. ಈ ದುರಂತದಲ್ಲಿ ಇನ್ನೂ ಹೆಚ್ಚಿನ ದುಃಖವಾಗುವ ಸಂಗತಿಯೇನೆಂದರೆ ಸೀತೆಯ ಕಣ್ಣೀರಿನ ಕಥೆಯನ್ನು ರಾಮಾಯಣದುದ್ದಕ್ಕೂ ಕಂಡುಂಡ ಅನೇಕ ಹೆಂಗಸರೂ ಸೀತೆಯ ಒಳಗುದಿಯ ಬೇಗೆಯನ್ನು ಅರಿಯದವರೂ, ಅರಿಯಲು ಒಲ್ಲದವರೂ ಆಗಿರುವುದು. ನಾನು ದಲಿತ ಬರಹಗಾರರಲ್ಲಿ ಬಹಳ ಮೆಚ್ಚಿಕೊಂಡಿರುವುದು ಅವರ ಮಗುವೊಂದು ಸಹಜವಾಗಿ "ರಾಜನಿಗೆ ಬಟ್ಟೆಯಿಲ್ಲ" ('The emperor has no clothes') ಎಂದು ಚಪ್ಪಾಳೆಯಿಕ್ಕಿತು. ಆ ಮಗುವಿನ ಮುಗ್ಧತೆ-ಮುಕ್ತತೆಗಳನ್ನುಳಿಸಿಕೊಂಡು ರಾಮಾಯಣವನ್ನು ಓದಿದ ಸಾಹಿತಿ ಸಹೃದಯ ಎಂಟನೆಯ ಶತಮಾನದ ಭವಭೂತಿ, ಹದಿನೆಂಟನೆಯ ಶತಮಾನದ ಜಾನಪದ ಕವಯಿತ್ರಿ ಹೇಳವನಕಟ್ಟೆ ಗಿರಿಯಮ್ಮ ಮತ್ತು ರಾಮ ಸೀತೆಗೇನಾಗಬೇಕೆಂಬ ಸರ್ವಕಾಲದ ಸಮಕಾಲೀನ ಅಜ್ಞಾತ ಕೇಳುಗ, ಆ ಮಗುತನದ ಮುಗ್ಧತೇ ಮುಕ್ತತೇ ನಮ್ಮ ಓದಿನ ಮಾರ್ಗದರ್ಶಕರು, ಸತ್ಯಾನ್ವೇಷಿಗಳು, ದಾರ್ಶನಿಕರು, ದ್ರಷ್ಟಾರರು.

(ಮುಂದುವರೆಯುತ್ತದೆ)

Statement about ownership and other particulars of **'Ranjane Bodhane Prachodane Lankesh'** Weekly, Bangalore as required under Rule 8 of the Registration of Newspapers (Central) Rules, 1956.

FORM - IV

(See Rule 8)

1.	Place of Publication	:	Bangalore
2.	Periodicity of Publication	:	Weekly
3.	Printer's Name Whether Citizen of India? Address	:	Gauri Lankesh Yes 1st Floor, No. 9, E.A.T. Street Basavanagudi, Banglaore -560 004
4.	Publisher's Name Whether Citizen of India? Address	:	Gauri Lankesh Yes 1st Floor, No. 9, E.A.T. Street Basavanagudi, Banglaore -560 004
5.	Editor's Name Whether Citizen of India? Address	:	Gauri Lankesh Yes No. 9, E.A.T. Street Basavanagudi, Banglaore -560 004

I, Gauri Lankesh, hereby declare that the particulars given above are true to the best of my knowledge and belief.

Date : 8.3.2007

Sd/-
GAURI LANKESH

ಕರ್ನಾಟಕಕ್ಕೆ ನ್ಯಾಯ ಬೇಕಾದರೆ ಸಂಸದರು ಸಾಯಲಿ!

ಕಾವೇರಿ ಚಳವಳಿ ವಿಭಿನ್ನ ರೂಪಗಳನ್ನು ಪಡೆಯುತ್ತಿದ್ದು ಪ್ರತಿ ದಿನವೂ ನಿತ್ಯನೂತನ ಹೇಳಿಕೆಗಳು ಬರುತ್ತಿವೆ. ಯಾವುದು ಸಾಧು, ಯಾವುದು ಸಾಧು ಅದುದಲ್ಲ ಎಂಬುದಕ್ಕಿಂತಲೂ ಯಾರ ಬಾಯಿಂದ ಈ ಅಮೃತ ವಾಕ್ಯ ಉದುರಿತು ಎಂಬುದು ಸುದ್ದಿ ಮಾಧ್ಯಮದವರಿಗೆ ಮುಖ್ಯವಾದುದು ಎಂಬುದು ಖಚಿತ. ಆದರೂ ರಾಜ್ಯಮಟ್ಟದ ಹೆಸರಿನ ಪತ್ರಿಕೆಗಳೆಲ್ಲವೂ ಸ್ಥಳೀಯ ಪತ್ರಿಕೆಗಳೇ ಆಗಿರುವುದರಿಂದ ಒಂದು ಜಿಲ್ಲೆಯಲ್ಲಿ ನಡೆದ ಘಟನೆ ಮತ್ತೊಂದು ಜಿಲ್ಲೆಯವರಿಗೆ ತಿಳಿಯುವುದು ಕಷ್ಟಸಾಧ್ಯ. ಚಳವಳಿಯ ಸಂದರ್ಭದಲ್ಲಿ ಕೆಲವು ಆಕರ್ಷಣೀಯ ಚಿತ್ರಗಳನ್ನು ಸೆರೆಹಿಡಿಯಲು ಕ್ಯಾಮೆರಾಗಳು ತೆರಳಿರುವುದರಿಂದ ಘಟಾನುಘಟಿ ವ್ಯಕ್ತಿಗಳ ಮುಕ್ತ ಫಲಕಗಳು ವಿದ್ಯುನ್ಮಾನ ಮಾಧ್ಯಮಗಳಿಂದಲೂ ಮರೆಯಾಗುವ ಸಾಧ್ಯತೆಗಳಿವೆ.

'ರಕ್ತ ಕೊಟ್ಟೇವು ನೀರು ಬಿಡೆವು', 'ಕಾವೇರಿಗಾಗಿ ಬಲಿದಾನಕ್ಕೂ ಸಿದ್ಧ', 'ಕಾರ್ನಾಡ್ ಹಿಡಿಯಿರಿ, ಓಡಾಡಿಸಿ ಬಡಿಯಿರಿ' ಇಂತಹ ಹೇಳಿಕೆಗಳು ಕ್ಲೀಷೆ ಅನ್ನಿಸತೊಡಗಿವೆ. ಇವರ ಮಾತುಗಳನ್ನು ನಂಬಿದರೆ ಮುಂದೆ ಆಗುವ ಪರಿಣಾಮಗಳನ್ನು ಊಹಿಸಬಹುದು..... ರಕ್ತ ಕೊಟ್ಟೇವು ನೀರು ಬಿಡೆವು ಎಂಬ ವೀರ ಪ್ರತಿಜ್ಞೆ ಮಾಡಿದವರನ್ನು ಹಂಗೇ ಆಗಲಿ ರಕ್ತನ ಕೊಡಿ ಅಂತ ಏನಾದರೂ ಒತ್ತಾಯ ತಂದರೆ ನಾವು ಅನಿಮಿಕ್ ಕನ್ರಿ ಅಂತ ಹೇಳಿ ಅಲ್ಲಿಂದ ಜಾರಿಕೊಳ್ಳುವ ಸಂಭವವೇ ಹೆಚ್ಚು, ಕಾವೇರಿಗಾಗಿ ಬಲಿದಾನ ಮಾಡಲು ತಯಾರಿದೀರಲ್ಲ ಹಂಗಾದ್ರೂ ಮಾಡಿರಿ ಅಂತ ಬಲವಂತ ಮಾಡಿದರೆ ಹೀಗೆ ಒತ್ತಾಯಿಸಿದವರೇ ಅವರಿಗೆ ಬಲಿಯಾಗಬೇಕಾಗಬಹುದು. ಪ್ರತಿಷ್ಠಿತರು ಅಪ್ಪಣೆ ಕೊಡಿಸಿದರು ಅಂತ ಗಿರೀಶ್ ಕಾರ್ನಾಡರನ್ನು ಹಿಡಿದು ತದುಕಲು ಮುಂದಾದರೆ ಹಾಳಾದ ಈ ದೇಶದಲ್ಲಿ ಕಾನೂನು ಅಂತ ಒಂದು ಇದೆ. ಕಂಬಿ ಎಣಿಸಬೇಕಲ್ಲ ಎಂಬ ಭಯ ಕಾಡುತ್ತೆ....

ಇಂತಹ ಹೇಳಿಕೆಗಳು ಎಲ್ಲಾ ಕಡೆಯೂ ಕೇಳಿ ಬರುತ್ತಿರುವುದರಿಂದ ಮಾಧ್ಯಮಗಳಲ್ಲಿ ತಪ್ಪದೆ ವರದಿಯಾಗಿರುತ್ತದೆ. ಸ್ಥಳೀಯ ಪತ್ರಿಕೆಗಳಲ್ಲಿ ಮಾತ್ರ ಪ್ರಕಟವಾಗಿ ರಾಜ್ಯದ ಜನರನ್ನು ತಲುಪಲು ಆಗದ ಘಟಾನುಘಟಿಗಳ ವ್ಯಕ್ತಿಗಳ ಅಮೃತವಾಕ್ಯಗಳಿಗೆ ಪ್ರಚಾರ ಮಾಡುವ ಉದ್ದೇಶದ ಪ್ರಯತ್ನ ಇಲ್ಲಿದೆ.

ವಿಭಿನ್ನ ರೀತಿಯ ಚಳವಳಿ ಮಾಡಬೇಕೆನ್ನುವವರಿಗೆ ಕಾವೇರಿ ನ್ಯಾಯಮಂಡಳಿಯ ಅಂತಿಮತೀರ್ಪು ಒಂದು ಸುವರ್ಣಾವಕಾಶ. ಕಲಿಗಳು ಕವಿಗಳಲ್ಲದವರಿಂದ ಕಾವ್ಯಗೋಷ್ಠಿ. ಅವರು ಪಠಿಸಿರಬಹುದಾದ ಕವನಗಳು ಹೇಗಿರಬಹುದು ಎಂಬ ಊಹೆಗಾಗಿ ಇವು:

ಒಂದು :
ಯಾಕರಿದೆ ಪೂರ್ವಕೆ
ಓ ಕಾವೇರಿ
ಹರಿಬಾರದಿತ್ತೆ ಪಶ್ಚಿಮಕೆ
ಇತ್ತಲ್ಲ ಹತ್ತಿರವೆ
ಅರಬ್ಬೀಸಮುದ್ರ!
ಏಕೆ ತಬ್ಬಿದೆ
ಬಂಗಾಳಕೊಲ್ಲಿ?

ಎರಡು :
ನ್ಯಾಯಮಂಡಳಿಯ ಐತೀರ್ಪು
ನೋಡಿ
ನೊಂದುನುಡಿದಳು ಕಾವೇರಿ
ಇದು ನನ್ನ ಸಾವೇ ಸರಿ!

ಮೂರು :
ಕಾವೇರಿ
ನೀನು ಬರಿಯ ನೀರಲ್ಲ
ನಮ್ಮೆಲ್ಲರ ತಾಯಿ!

ಇಂತಹ ಕವನಗಳ ಮಹಾಪೂರವೇ ಹರಿದಿರಬಹುದು. ಒಟ್ಟಿನಲ್ಲಿ ಕಾವೇರಿ, ನೀರು, ತಾಯಿ, ರೈತ ಇಂತಹ ಪದಪುಂಜಗಳಿದ್ದರೆ ಸರಿ!

ಮಂಡ್ಯ ನಗರದ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಲ್ಲಿ ಇಂತಹ ಒಂದು ಕವಿಗೋಷ್ಠಿ. ಪುಂಖಾನುಪುಂಖವಾಗಿ ಕವಿವರ್ಯರುಗಳ ಬಾಯಿಂದ ಅಮೃತಧಾರೆ ಹರಿದು ಬರುತ್ತಿತ್ತು. ಕನ್ನಡ ಸಾಹಿತ್ಯ ಲೋಕದ ದಿಗ್ಗಜರೊಬ್ಬರ ಅಧ್ಯಕ್ಷತೆ, ಅಧ್ಯಕ್ಷರು ಅಂತ ಇದ್ದ ಮೇಲೆ ಅಧ್ಯಕ್ಷ ಭಾಷಣವೂ ಇರಲೇ ಬೇಕಲ್ಲ, ಅವರ ಅಮೃತ ವಾಣಿ ಸಾರಾಂಶ ಇದು:

ಹೀಗೆ ಚಳವಳಿ ಮಾಡಿದರೆ ಕರ್ನಾಟಕಕ್ಕೆ ನ್ಯಾಯ ದೊರೆಯುವುದಿಲ್ಲ.

ಹಾಗಾದರೇನು ಮಾಡಬೇಕು? ನ್ಯಾಯಾಲಯಗಳಲ್ಲಿ ಹೋರಾಡಬೇಕೆ? ರಾಜಕೀಯವಾಗಿ ಸಂಸತ್ತಿನಲ್ಲಿ ದನಿ ಎತ್ತಬೇಕೆ?

ಇದಾವುದರಿಂದಲೂ ನ್ಯಾಯ ದೊರೆಯುವುದಿಲ್ಲವಂತೆ

ಎಂದರೆ ಕರ್ನಾಟಕಕ್ಕೆ ನ್ಯಾಯ ಸಿಗುವುದೇ ಇಲ್ಲ ಎಂದೈ?

ಇಲ್ಲವಂತೆ. ಕರ್ನಾಟಕಕ್ಕೆ ನ್ಯಾಯ ಸಿಗಲೇ ಬೇಕು ಎಂದಾದರೆ ಸಂಸದರು ಒಂದು ಮಾಡಬೇಕು.

ಏನು ಮಾಡಬೇಕು ಸಂಸದರು?

ಆತ್ಮಾಹುತಿ ಮಾಡಿಕೊಳ್ಳಬೇಕು!

ಎಲ್ಲ ಸಂಸದರೂ ಹೀಗೆ ಮಾಡಬೇಕೆ?

ಎಲ್ಲರೂ ಅಲ್ಲ, ಯಾರಾದರೊಬ್ಬ ಸಂಸದ ಮಾಡಿಕೊಂಡರೆ ಸಾಕು!

ನಮ್ಮ ಸಾಂಸ್ಕೃತಿಕ ದಿಗ್ಗಜರ ಗುರಿ ಯಾವ ಪಾಪಿ ಸಂಸದರ ಮೇಲಿತ್ತೋ ತಿಳಿದುಬಂದಿಲ್ಲ, ಆಯಿತು. ಯಾರೋ ಒಬ್ಬ ಸಂಸದ ಹರಕೆಯ ಕುರಿ ಆದ ಎಂದೇ ಭಾವಿಸೋಣ. ಆಗ ಕರ್ನಾಟಕಕ್ಕೆ ಸಿಗುವುದೆ ನ್ಯಾಯ?

ಖಂಡಿತವಾಗಿ! ಭಾಷಾವಾರು ಪ್ರಾಂತ್ಯ ರಚನೆ ಯಾದದ್ದು ಏಕೆ? ಪೊಟ್ಟಿ ಶ್ರೀರಾಮುಲು ಆತ್ಮಾಹುತಿ ಮಾಡಿಕೊಂಡಿದ್ದಕ್ಕೆತಾನೆ!

ಕಾಲ ಬದಲಾಗಿದೆ. ಪೊಟ್ಟಿ ಶ್ರೀರಾಮುಲು ಆತ್ಮಾಹುತಿ ಮಾಡಿಕೊಂಡಾಗ ದೇಶಕ್ಕೆ ಸ್ವಾತಂತ್ರ್ಯ ಬಂದ ಹೊಸತು, ಸತ್ಯ ಆದರ್ಶಗಳಿಗೆ ಇನ್ನೂ ಸಾವು ಬಂದಿರಲಿಲ್ಲ, ಅವರ ಆತ್ಮಾಹುತಿ ಸತ್ಫಲ ನೀಡಿತು. ಈಗ ಅಂತಹವುಗಳಿಗೆ ಕಿಲುಬು ಕಾಸಿನ ಕಿಮ್ಮತ್ತೂ ಇಲ್ಲ, ಒಬ್ಬ ಸಂಸದ ಸತ್ತರೆ ಆತನ ಸ್ಥಾನಕ್ಕೆ ತಾನು ಬರಬಹುದಲ್ಲ ಅಂತ ಆಸೆ ಪಡುವ ಜನರೇ ಬಹುಮಂದಿ. ಇಂತಹ ಪರಿಸ್ಥಿತಿಯಲ್ಲಿ ಸ್ಪಂದಿಸುವುದೆ ಸರ್ಕಾರ ಎಂಬುದರ ಬಗ್ಗೆ ಈ ಸಾಹಿತಿಗಳ ನಿಲುವು ಏನು ಎಂಬುದು ತಿಳಿದುಬಂದಿಲ್ಲ.

ಅಣಕ

ಇದು ಹಾಗಿರಲಿ. ಹಿರಿಯ ಸಾಹಿತಿಗಳು ಸಭೆಯ ಭಾವನೆ ನೋಡಿ ಮಾತನಾಡುವುದು ಅವರ ಅಭ್ಯಾಸ. ಅವರ ಮುಕ್ತಫಲಕಗಳನ್ನು ತಮ್ಮ ಮನದಾಳದಲ್ಲಿ ಮೂಡಿಸಿಕೊಳ್ಳದೆ ಕೆಲವು ಕುಹಕಿಗಳು.... ಕೆಲಸಕ್ಕೆ ಬಾರದ ಸಂಸದರು ಆತ್ಮಾಹುತಿ ಮಾಡಿಕೊಳ್ಳುವುದಕ್ಕಿಂತ ಈ ಮಹಾನ್ ಸಾಹಿತಿಗಳೇ ಅದನ್ನು ಮಾಡಿಕೊಂಡು ಕರ್ನಾಟಕಕ್ಕೆ ನ್ಯಾಯ ದೊರಕಿಸಬಹುದಲ್ಲಾ,



ಹುತಾತ್ಮರಾಗಬಹುದಲ್ಲಾ.... ಎಂದೆಲ್ಲ ಕೇಳುತ್ತಾ ಇದಾರಲ್ಲಾ....

ನಮ್ಮ ಮುಖ್ಯಮಂತ್ರಿಗಳೇ ಸರಿ. ಕಾವೇರಿ ಸಮಸ್ಯೆ ಕುರಿತು ತುಟಿ ಎರಡು ಮಾಡಲ್ಲ. ಸರ್ವಪಕ್ಷಗಳ ಸಭೆ ಕರೀತಾರೆ. ಯಾರು ಯಾರೋ ಏನು ಏನೋ ಮಾತನಾಡುತ್ತಾರೆ. ಇವರು ಘನಗಂಭೀರವಾಗಿ ಮುಖ ಗಂಟುಹಾಕಿಕೊಂಡು ಕುಳಿತಿರುತ್ತಾರೆ. ತೀರ್ಮಾನ? ಸರ್ಕಾರದ ನಿಲುವು? ಪ್ರಕಟಿಸೋಲ್ಲ! ಸರ್ವಪಕ್ಷಗಳ ಸಭೆಯ ಹಿಂದಿನ ದಿನವೇ ಸೂಚನೆ ನೀಡಿರುತ್ತಾರೆ ಹಿರಿಯ ಸಾಹಿತಿಗಳೊಡನೆ ಸಮಾಲೋಚಿಸಿ ಸರ್ಕಾರ ಒಂದು ನಿಲುವು ತಾಳುತ್ತೆ ಅಂತ! ಅಂದರೆ ಸರ್ವಪಕ್ಷಗಳ ಸಭೆ ನಾಮ್‌ಕವಾಸ್ತೆ ಅಂತ ಆಯಿತು. ಹಿರಿಯ ಸಾಹಿತಿಗಳ ಸಭೆಯನ್ನಾದರೂ ಕರೆದರಾ? ಅದೂ ಇಲ್ಲ, ಒಂದು ವೇಳೆ ಕರೆದರು ಅನ್ನಿ ತೀರ್ಮಾನ ತೆಗೆದುಕೊಳ್ಳುತ್ತಾ ಸರ್ಕಾರ? ಉಹುಂ. ಅದರ ನಂತರ ಮಠಾಧೀಶರು ಕಾವೇರಿ ನ್ಯಾಯಮಂಡಳಿ ತೀರ್ಪಿನ ವಿರುದ್ಧ ಹೋರಾಟಕ್ಕಿಳಿದಿರುವುದರಿಂದ ಅವರೊಡನೆ ಸಮಾಲೋಚಿಸಿ ಸರ್ಕಾರದ ನಿಲುವು ಪ್ರಕಟಿಸುತ್ತೇನೆ ಅಂತಾರೆ! ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯ ಇಲ್ಲ! ಸರ್ಕಾರ ತನ್ನ ನಿರ್ಧಾರ ಪ್ರಕಟಿಸೋದು ಇಲ್ಲ!

ಇಂತಹ ಸ್ಥಿತಿಪ್ರಜ್ಞ ಸರ್ಕಾರದ ವಕ್ತಾರ ಎಂ.ಪಿ. ಪ್ರಕಾಶ್ ದೆಹಲಿಯಲ್ಲಿ ನಡೆದ ಸಂಸದರ ಸಭೆಗೆ ಹಾಜರಾಗಿದ್ದರಂತೆ. ಅಲ್ಲಿ ಕರ್ನಾಟಕ ಕುರಿತಂತೆ ಇತರ ರಾಜ್ಯಗಳಲ್ಲಿ ಒಳ್ಳೆಯ ಅಭಿಪ್ರಾಯ ಇಲ್ಲ, ಅದಕ್ಕಾಗಿ ಕಾವೇರಿ ನ್ಯಾಯಮಂಡಳಿ ಮಾಡಿರುವ ಅನ್ಯಾಯ ಕುರಿತು ಎಲ್ಲ ಭಾಷೆಯ ಪತ್ರಿಕೆಗಳಲ್ಲಿ ಜಾಹಿರಾತು ನೀಡಿ ಎಂಬ ಸಲಹೆ ಬಂತಂತೆ. ಅದಕ್ಕೆ ಪ್ರಕಾಶರು ಕೂಡಲೇ ಸ್ಪಂದಿಸಿದರಂತೆ. ಇದಕ್ಕಾಗಿ ನಾಲ್ಕು ಐದು ಕೋಟಿ ಖರ್ಚು ತಗುಲಬಹುದಾದರೂ ಸುಲಭದ ಕೆಲಸ ನೋಡಿ ಅದಕ್ಕೆ!

ಒಂದು ಸಂದೇಹ. ನಾನು ಸುಮಾರು ವರ್ಷಗಳಿಂದ ಪತ್ರಿಕೆ ಓದುತ್ತಿದ್ದೇನೆ. ಯಾವತ್ತೂ ಕುತೂಹಲದಿಂದ ಜಾಹಿರಾತು ಓದಿದ ನೆನಪಿಲ್ಲ. ಥಳಕು ಬಳುಕಿನ ಬೆಡಗಿ ಚಿತ್ರ ಇದ್ದರೆ ಹಾಗೇ ಕಣ್ಣು ಹಾಯಿಸಬಹುದು. ಆದುದರಿಂದ ಪ್ರಕಾಶರಿಗೊಂದು ಸಲಹೆ. ಹಳೆಯ ಸಿನೆಮಾಗಳಲ್ಲಿ ಮಳೆಯಲ್ಲಿ ತೋಯಿಸಿಯೋ, ಜಲಪಾತದ ಅಡಿ ನಿಲ್ಲಿಸಿಯೋ, ಇಲ್ಲ ನದಿಯಲ್ಲಿ ಈಜಿಸಿಯೋ ನಾಯಕಿಯ ಒದ್ದೆ ಬಟ್ಟೆ ಮೈಗೆ ಅಂಟಿ ಕೊಂಡು ನೋಡುಗರಿಗೆ ರೋಮಾಂಚನ ಉಂಟುಮಾಡುತ್ತಿದ್ದರಲ್ಲ.... ಅದೇ ರೀತಿ ಕಾವೇರಿ ನೀರನ್ನು ಸುಂದರ ಯುವತಿ ಸುರಿದುಕೊಳ್ಳುವ ಹಾಗೆ; ಹೀಗೆ ಸುರಿದ ನೀರಿನಿಂದ ತೆಳುವಾದ ಸೀರೆ ಮೈಗೆ ಅಂಟಿ ಕೊಂಡ ಹಾಗೆ; ಇರುವ ಫೋಟೋ ಹಾಕಿ ಜಾಹಿರಾತು ನೀಡಿದರೆ ಜೆಸ್ ದೇಶ್ ಮೇ ಕಾವೇರಿ ಬಹತೀಹೈ ಪರಿಣಾಮಕಾರಿ ಆಗಬಹುದು.

ಅಲ್ಲ, ಹೀಗೆ ಮಾಡುವುದರ ಬದಲು ಕಾವೇರಿ ವಿಷಯಗಳನ್ನು ಸಣ್ಣ ಪುಸ್ತಕರೂಪದಲ್ಲಿ ಪ್ರಕಟಿಸಿ ಈಗಾಗಲೇ ವಿವಿಧ ರಾಜ್ಯಗಳಲ್ಲಿ ಹೆಸರು ಮಾಡಿರುವ ಕನ್ನಡ ಸಂಘಟನೆಗಳ ಮೂಲಕ ಹಂಚಿಸಬಾರದೆ? ಮಾಡಬಹುದು. ಆದರೆ ಇದೆಲ್ಲ ತರಲೆ ತಾಪತ್ರಯದ ಕೆಲಸ. ಜಾಹಿರಾತು ಅಂದ್ರೆ ಎಷ್ಟು ಸುಲಭ ಅಲ್ಲವಾ?

-ಎಚ್.ಎಲ್. ಕೇಶವಮೂರ್ತಿ

ಲಂಕೇಶರ ಆಶಯಗಳನ್ನು ಉಳಿಸಿರುವ 'ಲಂಕೇಶ್'

ಲಂಕೇಶ್ ಪತ್ರಿಕೆ ಓದು, ಬುದ್ಧಿ ಬೆಳೆಯುತ್ತದೆ ಎಂದ ಸ್ನೇಹಿತರೊಬ್ಬರ ಸಲಹೆ ಮೇರೆಗೆ ಪ್ರಾರಂಭವಾದ ಲಂಕೇಶ್ ಪತ್ರಿಕೆ ಓದುವ ಯಾತ್ರೆ ಇಂದಿಗೂ 'ಲಂಕೇಶ್' ರೂಪದಲ್ಲಿ ಮುಂದುವರೆಯುತ್ತಿದೆ. ಪ್ರತಿವಾರ ಲಂಕೇಶ್‌ಗಾಗಿ ಕಾಯುತ್ತಿದ್ದ ನಾವು ಒಂದುವಾರ ಪತ್ರಿಕೆ ಸಿಗಲಿಲ್ಲವೆಂದರೆ ಏನೋ ಕಳೆದುಕೊಂಡ ಅನುಭವ. ಓದುವ ವಿಚಾರದಲ್ಲಿ ಲಂಕೇಶ್ ಆಗಬೇಕು ನಮಗೆ ಬೇರ‍್ಯಾವ ಪತ್ರಿಕೆ ಊಹುಂ.

ತುಂಬಾ ಬೇಸರವಾಗಿದ್ದು ಲಂಕೇಶ್ ಪತ್ರಿಕೆಯಿಂದ ಸಂಪಾದಕಿ ಗೌರಿ ಲಂಕೇಶ್ ನಿರ್ಗಮಿಸಿದಾಗ ಛೆ ಹೀಗಾಗ ಬಾರದಿತ್ತು ಎಂದುಕೊಂಡ ನಮಗೆ ಗೌರಿ ಮೇಡಂ ಸಂಪಾದಕರಿಂದ 'ಲಂಕೇಶ್' ಎಂಬ ಮತ್ತೊಂದು ಪತ್ರಿಕೆ ಹೊರಬರುತ್ತದೆ ಎಂದಾಗ ತುಂಬಾ ಖುಷಿಯಾಯ್ತು. ಹಾಗೆ ಮಾರುಕಟ್ಟೆಯಲ್ಲಿ 'ಲಂಕೇಶ್' ಮರುಹುಟ್ಟು ಎಂಬ ಮುಖಪುಟದೊಂದಿಗೆ ಹೊರಬಂದ ಪತ್ರಿಕೆ ಮೇಷ್ಟ್ರು ಕಾಲದ ಪತ್ರಿಕೆಯೂ ನೆನಪಾಗಿದ್ದು ಸುಳ್ಳಲ್ಲ.

ನಮ್ಮೆಲ್ಲರ ಪತ್ರಿಕೆ 2ನೇ ಹುಟ್ಟುಹಬ್ಬ ಆಚರಿಸುತ್ತಿದೆ ಎಂದರೆ ಅದು ತುಂಬಾ ಖುಷಿಯ ಮಾನವಪರ ಜೀವಪರ ದನಿಯ ಹುಟ್ಟುಹಬ್ಬವೆಂದೇ ಅರ್ಥದಿಂದ ಸಡಗರ ಆಚರಿಸೋಣ. 'ಲಂಕೇಶ್'ಗೆ ಶುಭವಾಗಲಿ.

-ಸುಲೈಮಾನ್ ಮತ್ತು ಬಾಬು, ಸುರಾಯಪಟ್ಟಣ

ಹೊಗ ತೆಗ ಳಿಕೆ

ಬಲಾಢ್ಯರಾಗಿರುವ ಭ್ರಷ್ಟರು ಹಾಗು ಶೋಷಕರುಗಳ ವಿರುದ್ಧ ಸಮರ ಸಾರಿದುದರ ಜೊತೆಗೆ ಜನರಲ್ಲಿ ವೈಚಾರಿಕತೆಯನ್ನು ಜಾಗೃತಗೊಳಿಸಲು ಕಾರಣಕರ್ತರಾದ ಲಂಕೇಶರು ನಮ್ಮಿಂದ ದೂರಾದಾಗ ಒಂದು ರೀತಿಯ ಶೂನ್ಯತಾಭಾವ ಮನಸ್ಸಿಗೆ ಆವರಿಸಿತ್ತು. ಬಳಿಕ ಲಂಕೇಶ್ ಪತ್ರಿಕೆ ಇಬ್ಭಾಗವಾದಾಗಲೂ ಕೂಡ ಅದರ ಅಭಿಮಾನಿಗಳಾಗಿರುವ ನನ್ನಂಥವರನ್ನು ಬಹುವಾಗಿ ಕಾಡಿತ್ತು. ಆದರೆ ಈ ನಿರಾಶೆಗಳೇನೇ ಇದ್ದರೂ ಅವೆಲ್ಲ ಕೇವಲ ತಾತ್ಕಾಲಿಕ ಎಂಬಂತೆ ತಮ್ಮ ಲಂಕೇಶ್ ತನ್ನ ಮೂಲ ಖದರನ್ನು ಉಳಿಸಿಕೊಂಡು ಮುಂದುವರೆಯುತ್ತಿರುವುದು ಸಂತೋಷದ ಸಂಗತಿಯಾಗಿದೆ. ಇದೀಗ ವಾರ್ಷಿಕೋತ್ಸವವನ್ನ ಆಚರಿಸಲು ಸಜ್ಜಾಗಿರುವ ಪ್ರೀತಿಯ 'ಲಂಕೇಶ್'ಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು.

ಮೊನ್ನೆ ಅನಿರೀಕ್ಷಿತವಾಗಿ ಬಂದ ನಿಮ್ಮ ಫೋನ್ ಕರೆ ನನ್ನನ್ನು ನಿಜಕ್ಕೂ ಬೆಚ್ಚಿ ಬೀಳಿಸಿತ್ತು, ಒಬ್ಬ ಸಾಮಾನ್ಯ ಓದುಗನಾದ ನನ್ನನ್ನು ಖುದ್ದಾಗಿ ಕರೆ ಮಾಡಿ ಮಾತಾಡಿಸಿದ್ದಕ್ಕಾಗಿ ಹಾಗು ನನ್ನ ಹಲವು ಪತ್ರಗಳನ್ನು ಯಥಾವತ್ತಾಗಿ (ಸೆನ್ಸಾರ್ ಮಾಡದೇ, ಪ್ರತ್ಯೇಕವಾಗಿ ಪ್ರಕಟಿಸಿರುವುದಕ್ಕಾಗಿ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ.

-ರವಿ ಪುತ್ತೂರ,
ದಕ್ಷಿಣ ಕನ್ನಡ

ಗುಂಡಾ ಮೂಡಿಸಿದ ಹೆಮ್ಮೆ

ನಾವು ಚಿಕ್ಕಂದಿನಲ್ಲಿ ಪುಣೆಯಲ್ಲಿದ್ದಾಗ ನನ್ನ ತಂದೆಯ ಹೆಸರು ಗುಂಡಪ್ಪ ಎಂದು ಹೇಳಲು ಮುಜುಗರವಾಗುತ್ತಿತ್ತು. ಕಾರಣ ಮರಾಠಿಯಲ್ಲೂ ಗುಂಡಾ ಎಂದರೆ ಕೇಡಿ ಎಂದರ್ಥ. ಆದರೆ ಈಗ ಹೆಚ್ಚಿನ ಜನರಿಗೆ ಪರಿಚಯವಿರದಿದ್ದ ನಮ್ಮ ದೇಶದ ಒಂದು ಚಿಕ್ಕ ಸ್ವಾತಂತ್ರ್ಯ ಹೋರಾಟದ ಹಿನ್ನೆಲೆ ಈ ಹೆಸರಿಗೆ ಇದೆ ಹಾಗೂ ಭಾರತದ ಇತರ ಭಾಷೆಗೆ ಇಲ್ಲಿಂದಲೇ ಈ ಶಬ್ದ ಹೋಯಿತು ಎಂದರಿತು ಅಭಿಮಾನವೆನಿಸಿತು. ಎಲ್ಲಿಯೋ ಹುದುಗಿದ್ದ ಕಾಲನ ರೋಡ್‌ರೋಲರ್ ಅಡಿ ಸಿಕ್ಕಿ ಸವೆದೇ ಹೋಗಿದ್ದ ಅರ್ಥಾತ್ ಕುರೂಪಗೊಂಡಿದ್ದ ಸ್ವಾತಂತ್ರ್ಯ ಹೋರಾಟದ ಒಂದು ಚಿಕ್ಕ ನೈಜ ಪುಟ ಮತ್ತೆ ತೆರೆದುಕೊಟ್ಟ ಪ್ರವೀಣ್ ಶೆಟ್ಟರಿಗೆ ಧನ್ಯವಾದಗಳು (ಲಂಕೇಶ್ 28.2.07). ಜೊತೆಗೆ ಈ ಲೇಖಕರನ್ನು ನಾವು ಮರೆತುಬಿಟ್ಟಿದ್ದೆವು. ಕರಾವಳಿಯ ಸಂಜೆ ಪತ್ರಿಕೆಗಳ ಮುಖಾಂತರ ದೂರದ ಹೈದರಾಬಾದಿನಿಂದಲೂ ಕೋಮುವಾದಿ ಹಿಂದೂ ಹಾಗೂ ಮತಾಂಧ ಮುಸ್ಲಿಮ್ ಇಬ್ಬರನ್ನೂ ಒಂದೇ ಲೇಖನಿಯಿಂದ ಚಚ್ಚುತ್ತಾ, ಎಲ್ಲಾ ದಲಿತರು ಸಾರಾಸಗಟಾಗಿ ಹಿಂದೂ ಧರ್ಮವನ್ನು ತೊರೆಯಬೇಕೆಂದು ವಾದಿಸುತ್ತಾ ತಮ್ಮ ತೀವ್ರವಾದಿ ಲೇಖನಗಳಿಂದಾಗಿ ಎಲ್ಲಾ ದಿಕ್ಕಿನಿಂದ ವೈಮನಸ್ಸು ಗಳಿಸಿದ್ದ ಈ ಲೇಖಕರು ಹೆಸರು ಬದಲಾಯಿಸಿಕೊಂಡಿದ್ದಾರೋ ಅಥವಾ ವರ್ಗವಾಗಿ ಹುಟ್ಟೂರಿಗೆ ಬಂದ ಮೇಲೆ ಒತ್ತಡಕ್ಕೆ ಸಿಲುಕಿ ಪಲಾಯನವಾದಿಗಳಾದರೋ ಎಂಬ ಸಂಶಯ ಉಂಟಾಗಿತ್ತು, ಈಗ ಒಂದು ಅತಿ ಅಪರೂಪದ ಸಂಗತಿ ಹೇಳಿ ತಮ್ಮ ಇರುವನ್ನು ತೋರಿಸಿದ್ದಾರೆ.

-ಬಿ.ಎಸ್. ಮಲ್ಲಿಕಾ, ಮಂಗಳೂರು

ಜನುಮದ ಜೋಡಿ ಮಾಡಿದ ಚಮತ್ಕಾರ



'ಜನುಮದ ಜೋಡಿ' ಚಿತ್ರಕ್ಕೆ ಚೆನ್ನಾಗಿ ನಟಿಸಬಲ್ಲ ನಾಯಕಿ ಬೇಕು ಎಂಬುದು ನಮ್ಮ ಮನೆಯವರೆಲ್ಲರ ಅಭಿಪ್ರಾಯವಾಗಿತ್ತು. ಆಗ "ಯಾಕೆ ಶಿಲ್ಪಾಳನ್ನು ಹಾಕ ಬಾರದು? ಆಕೆ ರಿಯಲಿಸ್ಟಿಕ್ ಆಗಿ ನಟಿಸುತ್ತಾಳೆ, ಮುದ್ದುಮುದ್ದಾಗಿ ಕಾಣಿಸುತ್ತಾಳೆ" ಎಂದು ಸಜೆಸ್ಟ್ ಮಾಡಿದ್ದೇ ನನ್ನ ಪತ್ನಿ ಗೀತಾ.

ಆಗ ಈ ವಿಷಯವನ್ನು ನಾನು ಅಮ್ಮನ ಗಮನಕ್ಕೆ ತಂದೆ. "ನೋಡಮ್ಮಾ, ಶಿಲ್ಪಾ ಎಂಬ ಹುಡುಗಿ ಚೆನ್ನಾಗಿದ್ದಾಳೆ. ಆಕೆ ಈಗ ಸಾಯಿಕುಮಾರ್ ಜೊತೆ ನಾಯಕಿಯಾಗಿ ನಟಿಸುತ್ತಿದ್ದಾಳೆ. ನಮ್ಮ ಸಿನಿಮಾಕ್ಕೆ ಹಾಕಿದ್ರೆ ಚೆನ್ನಾಗಿರುತ್ತೆ" ಎಂದು ಹೇಳಿದಾಗ "ಹಾಗಾದರೆ ಅವಳನ್ನು ಕರೆಸು" ಎಂದು ಅಮ್ಮ ಹೇಳಿದರು.

ರವಿ ಕೊಟ್ಟಾರ್ಕರ್‌ರವರ ಚಿತ್ರದ ಕೊನೆಯ ದಿನವದು. ಮರುದಿನ ಶಿಲ್ಪಾ ಮತ್ತು ಅವಳ ತಾಯಿ ತಿರುವನಂತಪುರಕ್ಕೆ ಹೊರಟುನಿಂತಿದ್ದರು. ಶೂಟಿಂಗ್ ಪ್ಯಾಕಪ್ ಆದ ನಂತರ ನಮ್ಮ ಮ್ಯಾನೇಜರ್ ಶಿಲ್ಪಾಳಿಗೆ ಫೋನ್ ಮಾಡಿ ವಿಷಯ ತಿಳಿಸಿ ಮನೆಗೆ ಬರಬೇಕೆಂದು ಹೇಳಿದಾಗ ಆಕೆಗೆ ಶಾಕ್ ಆಯಿತು. "ಹೇಗಾದರೂ ಮಾಡಿ ನನಗೆ ದಯ ವಿಟ್ಟು ಈ ಅವಕಾಶ ಕೊಡಿಸಿ ಶಿವಣ್ಣಾ ಪ್ಲೀಸ್...." ಎಂದು ಶಿಲ್ಪಾ ಮತ್ತು ಆಕೆಯ ತಾಯಿ ನನಗೆ ಫೋನ್ ಮಾಡಿದರು. "ಅದೆಲ್ಲಾ ನನ್ನ ಅಪ್ಪಾಜಿ ಮತ್ತು ಅಮ್ಮನ ನಿರ್ಣಯ. ನೀವು ಮನೆಗೆ ಬನ್ನಿ, ನಿಮಗೊಳ್ಳೆಯದಾಗುತ್ತೆ" ಎಂದಷ್ಟೇ ನಾನು ಹೇಳಿದೆ.

ಮರುದಿನ ಬೆಳಗ್ಗೆ ಅವರಿಬ್ಬರು ನಮ್ಮ ಮನೆಗೆ ಬಂದರು. ಶಿಲ್ಪಾ ಗೇಟ್ ತೆಗೆದು ಇನ್ನೂ ಒಂದು ಕಾಲು ಒಳಗಿಟ್ಟಿಲ್ಲ, ಅಷ್ಟೊತ್ತಿಗೆ ಒಳಗಡೆ ಕೊಠಡಿಯಲ್ಲಿ ಕುಳಿತುಕೊಂಡಿದ್ದ ಅಪ್ಪಾಜಿ ಆಕೆಯನ್ನು ನೋಡಿ "ಆಕೆ ಓಕೆ ಕಣೋ ಓಕೆ" ಎಂದು ಹೇಳಿದರು. ನನಗೆ ನಿಜಕ್ಕೂ ಆಶ್ಚರ್ಯವಾಗಿತ್ತು. ಈ ರೀತಿ ಅದೆಷ್ಟೋ ವಿಷಯಗಳನ್ನು ಅಪ್ಪಾಜಿ ಒಂದೇ ಕ್ಷಣದಲ್ಲಿ ನಿರ್ಧರಿಸಿದ ಹಲವಾರು ಉದಾಹರಣೆಗಳಿವೆ. ಅಂತಹ ವಿಚಿತ್ರವಾದ ಶಕ್ತಿಯೊಂದು ಅವರಲ್ಲಿತ್ತು. ಬೇರೆ ನಿರ್ಮಾಪಕರುಗಳು ನಾಯಕಿಯರನ್ನು ಆಯ್ಕೆ ಮಾಡುವ ರೀತಿಯನ್ನು ನಾನು ನೋಡಿದ್ದೇನೆ. ಆದರೆ ನನ್ನ ಅಪ್ಪಾಜಿ ಮತ್ತು ವರದಪ್ಪ ಅವರ ಜೊತೆ ಮಾತನಾಡುವ ಮೊದಲೇ ಕ್ಷಣಾರ್ಧದಲ್ಲಿ ಒಂದು ನಿರ್ಧಾರವನ್ನು ತೆಗೆದುಕೊಳ್ಳುತ್ತಿದ್ದರು. ಹೀಗೆ ಅವರು ತೆಗೆದುಕೊಂಡ ನಿರ್ಧಾರ ಯಾವತ್ತೂ ಕೈಕೊಟ್ಟದ್ದೇ ಇಲ್ಲ.

ಶಿಲ್ಪಾಳ ಆಯ್ಕೆಯ ಬಗ್ಗೆ ನನಗೆ ತುಂಬಾ ಸಂತೋಷ ವಾಗಿದ್ದು ಎರಡು ಕಾರಣಗಳಿಗಾಗಿ. ಆಕೆ ಸಾಯಿ ಕುಮಾರ್ ಜೊತೆ ನಾಯಕಿಯಾಗಿ ನಟಿಸುತ್ತಿದ್ದರೂ ಆಕೆಯನ್ನು ಆಯ್ಕೆ ಮಾಡಿದ್ದು ನನ್ನ ಪತ್ನಿ ಗೀತಾ. ಅದನ್ನು ಕ್ಷಣಮಾತ್ರದಲ್ಲಿ ಅನುಮೋದಿಸಿದ್ದು ಅಪ್ಪಾಜಿ. ಬೇರೆ ನಾಯಕರ ಜೊತೆ ನಟಿಸಿದ ನಾಯಕಿಯನ್ನು ನಮ್ಮ ಸಂಸ್ಥೆಯ ಚಿತ್ರಕ್ಕೆ ಯಾಕೆ ಬಳಸಬೇಕು ಎಂಬಿತ್ಯಾದಿ ವಿಷಯಗಳು ನಮ್ಮ ಮನೆಯವರಿಗೆ ಅಡ್ಡಿಯಾಗಲೇ ಇಲ್ಲ. ಹೀಗೆ ನನ್ನ ಕೆರಿಯರ್‌ನಲ್ಲಿ ನನ್ನ ಪತ್ನಿ, ಅಪ್ಪಾಜಿ, ಅಪ್ಪಣ್ಣ, ಅಮ್ಮ ಇವರೆಲ್ಲರ ಕೊಡುಗೆಯನ್ನು ನಾನು ಮರೆಯಲು ಸಾಧ್ಯವಿಲ್ಲ.

ಆದರೆ ಶಿಲ್ಪಾ ಮನೆಗೆ ಬಂದನಂತರ ಅವರನ್ನು ಅಪ್ಪಾಜಿ ಆಗಲೇ ಆಯ್ಕೆ ಮಾಡಿರುವ ವಿಷಯವನ್ನು ನಾವು ಹೇಳಲಿಲ್ಲ. ಅವರೊಂದಿಗೆ ಲೋಕಾಭಿರಾಮವಾಗಿ ಮಾತನಾಡಿದ ನಂತರ ಊಟ ಮಾಡಿ ಎಂದು ಅಪ್ಪಾಜಿ ಹೇಳಿದರು. ಆದರೆ ಅವರಿಬ್ಬರೂ ಫುಲ್ ಟೆನ್ಷನ್‌ನಲ್ಲಿದ್ದರು. ಊಟ ಮಾಡಿದ ನಂತರವೇ ಅಪ್ಪಾಜಿ ನಮ್ಮ ಆಯ್ಕೆಯನ್ನು ಅವರಿಗೆ ಹೇಳಿದ್ದು. ಹೀಗೆ ಹೇಳಿದ ತಕ್ಷಣ ಶಿಲ್ಪಾಳ ತಾಯಿಯಂತೂ ಅಲ್ಲೇ ಅತ್ತುಬಿಟ್ಟರು. ನೀವು ಊಟಕ್ಕೆ ಕುಳಿತುಕೊಳ್ಳಿ ಎಂದಾಗಲೇ ನಾವು ಆಯ್ಕೆಯಾಗಿರಬಹು ದೆಂದು ಭಾವಿಸಿದ್ದೆವು ಎಂದು ಆನಂತರ ಭಾವುಕರಾಗಿ ನುಡಿದರು.

ನಾವು ಚಿತ್ರೀಕರಣಕ್ಕೆ ರೆಡಿಯಾದೆವು. ನಿರ್ದೇಶಕ ನಾಗಾಭರಣ ಫುಲ್ ಸ್ಕ್ರಿಪ್ಟ್‌ಅನ್ನು ನನ್ನ ಕೈಗೆ ನೀಡಿದರು. ಲೊಕೇಷನ್‌ಗಳನ್ನು ಆಯ್ಕೆ ಮಾಡಿದರು. "ಅದನ್ನು ನೋಡಲು ಹೋಗುತ್ತೀರಾ?" ಎಂದು ಕೇಳಿದರು. "ಇಲ್ಲ ನೀವು ಏನು ನೋಡಿದ್ದೀರೋ ಅದನ್ನೇ ಫೈನಲೈಸ್ ಮಾಡಿ. ನಾನು ಮುಖಕ್ಕೆ ಬಣ್ಣ ಹಚ್ಚಿ ನೀವು ಹೇಳಿದ ಹಾಗೆ ನಟಿಸಲು ತಯಾರಾಗಿದ್ದೇನೆ. ನನ್ನನ್ನು ನೀವು ಯಾವ ಥರ ಬೇಕಾದರೂ ಬಳಸಬಹುದು" ಎಂದು ಹೇಳಿದೆ.

ಚಿತ್ರೀಕರಣಕ್ಕೆ ನಾವೆಲ್ಲರೂ ಬಸ್‌ನಲ್ಲೇ ಹೋಗುವು ದೆಂದು ನಿರ್ಧರಿಸಿದೆವು. "ಯಾರಿಗೂ ಕಾರುಗಳನ್ನು ಬಳಸಲು ಅವಕಾಶವಿಲ್ಲ, ನೀನು ಕೂಡಾ ಬಸ್‌ನಲ್ಲೇ ಹೋಗ ಬೇಕು" ಎಂದು ಅಪ್ಪಾಜಿ ಮತ್ತು ಅಮ್ಮ ಆದೇಶ ನೀಡಿದರು. "ಯಾರಾ ದರು ಕಲಾವಿದರು ಕಾರು ಬೇಕೇ ಬೇಕೆಂದಲ್ಲಿ ಅವರಿಗೆ ಕಾರಿನ ವ್ಯವಸ್ಥೆ ಮಾಡಿ" ಎಂದು ಅಪ್ಪಾಜಿ ಹೇಳಿದರು.



ಇದನ್ನು ಮುಖ್ಯಮಂತ್ರಿ ಚಂದ್ರು ಅವರ ಗಮನಕ್ಕೆ ತಂದಾಗ "ಛೇಛೇಛೇ, ಇಲ್ಲಪ್ಪಾ ನಮ್ ಶಿವೂನೇ ಬಸ್ನಲ್ಲಿ ಬರುವಾಗ ನನಗ್ಯಾಕೆ ಕಾರು?" ಎಂದರು ಅವರು. ಹೀಗಾಗಿ ನಾವೆ ಲ್ಲರೂ ಪಿಕ್‌ನಿಕ್ ತರ ನಿತ್ಯವೂ ಎರಡು ಬಸ್‌ಗಳಲ್ಲಿ ಶೂಟಿಂಗ್‌ಗೆ ಹೋಗು ತ್ತಿದ್ದೆವು. ಅಪ್ಪಾಜಿ ಬಸ್‌ನಲ್ಲಿ ಹಿರಿಯ ಕಲಾವಿದರು ಪ್ರಯಾಣಿಸುತ್ತಿದ್ದರೆ, ನನ್ನ ಬಸ್‌ನಲ್ಲಿ ಮಂಡ್ಯ ರಮೇಶ್, ಅರುಣ್ ಸಾಗರ್ ಮೊದಲಾದವರು ಬರುತ್ತಿದ್ದರು. ನಿತ್ಯವೂ ನಮಗೆ ಪಿಕ್‌ನಿಕ್‌ಗೆ ಹೋಗಿಬಂದ ಅನುಭವವಾಗುತ್ತಿತ್ತೇ ವಿನಃ ಎಂದೂ ಪ್ರಯಾಸವಾಗಲೇ ಇಲ್ಲ.

ಈ ಮಧ್ಯೆ ಈ ಚಿತ್ರದಲ್ಲಿ ನಾನು ಅನಿರೀಕ್ಷಿತವಾಗಿ ಒಂದು ಹಾಡನ್ನು ಹಾಡುವಂತಾಯಿತು. ಇದಕ್ಕೆ ಮುಖ್ಯ ಕಾರಣ ಸಂಗೀತ ನಿರ್ದೇಶಕ ವಿ. ಮನೋಹರ್. "ನೀವೊಂದು ಹಾಡು ಹೇಳಬೇಕು ಶಿವಣ್ಣ" ಎಂದು ಅವರು ಹೇಳಿದಾಗ "ಛೇ ಛೇ ನಾನು ಹಾಡೋದುಂಟೇ? ಬೇಡ, ಬೇಡ" ಎಂದು ಅವರ ಆಹ್ವಾನವನ್ನು ತಿರಸ್ಕರಿಸಿದೆ. "ಇಲ್ಲ ಈ ಹಾಡು ತುಂಬಾ ಸಿಂಪಲ್ ಆಗಿದೆ. ನೀವು ಹಾಡಬಹುದು" ಎಂದ ಮನೋಹರ್ "ಮಣಿ ಮಣಿ ಮಣಿ ಮಣಿಗೊಂದು ದಾರ...." ಎಂದು ಎರಡು ವಾಕ್ಯಗಳನ್ನು ಹಾಡಿ ತೋರಿಸಿದರು. ಕೊನೆಗೆ ನಾನು ಒಪ್ಪಿಕೊಂಡೆ.

ಚಾಮುಂಡೇಶ್ವರಿ ಸ್ಟುಡಿಯೋದಲ್ಲಿ 11 ಗಂಟೆಗೆ ಹಾಡಿನ ರೆಕಾರ್ಡಿಂಗ್ ಫಿಕ್ಸ್ ಆಯಿತು. ವರದಪ್ಪನವರು ಅಷ್ಟೊತ್ತಿಗೆ ಬಂದಿದ್ದರು. ನಾನು 11ಕ್ಕೆ ಸರಿಯಾಗಿ ಬಂದೆ. "ಅಪ್ಪಾಜಿ ಬರ್ತಾರಂತೆ, ಅಷ್ಟೊತ್ತಿಗೆ ಹಾಡಿ ಮುಗಿಸಿಬಿಡು. ಅವರು ಬಂದಮೇಲೆ ಅವರೊಮ್ಮೆ ಕೇಳಲಿ" ಎಂದರು ವರದಪ್ಪ ಮತ್ತು ನಾಗಾಭರಣ.

ನಾನು "ಮಣಿ ಮಣಿ ಮಣಿ...." ಎಂದು ಹಾಡುತ್ತಾ ಹೋದೆ. ಇಪ್ಪತ್ತೇ ನಿಮಿಷದಲ್ಲಿ ಹಾಡನ್ನು ಮುಗಿಸಿಬಿಟ್ಟೆ. ಆಗೋಯ್ತು ಎಂದು ಹೊರ ಬಂದು ಅಪ್ಪಾಜಿ ಬರುವ ಮುನ್ನ ಹತ್ತಿರದಲ್ಲೇ ಟೀ ಕುಡಿಯಲು ಹೋದೆ. ಆಗ ಬಂದ ಅಪ್ಪಾಜಿ "ಎಲ್ಲಯ್ಯಾ ಅವ್ನು.... ಶುರು ಮಾಡಿದ್ನಾ?" ಎಂದು ಪ್ರೀತಿಯಿಂದ ಪ್ರಶ್ನಿಸಿದ್ದಾರೆ. "ಅವ್ನು ಮುಗ್ಸಿಬಿಟ್ಟಾ ಅಣ್ಣಾ..." ಎಂದು ನಾಗಾಭರಣ ಹೇಳಿದಾಗ "ಹೆಂಗಯ್ಯಾ ಮುಗ್ಸಿಬಿಟ್ಟ? ಏನಯ್ಯಾ ಮುಗ್ಸಿಬಿಟ್ಟಾ ಅಂದ್ರೆ? ನಾನೇ ಒಂದೂವರೆ ಗಂಟೆ ತೊಗೋತೀನಿ. ಏನಯ್ಯಾ ಅವ್ನು.... ಹಾಕ್ರಯ್ಯಾ ಕೇಳೋಣ. ಅವ್ನು ಹ್ಯಾಗೆ ಹಾಡಿದಾನೆ ಅಂತ ನೋಡೋಣ" ಎಂದು ಅಪ್ಪಾಜಿ ಅಬ್ಬರಿಸಿದರಂತೆ.

ಹಾಡು ಕೇಳಿದ ನಂತರ ಅಪ್ಪಾಜಿ ಒಂದುಕ್ಷಣ ಮೌನವಾದರಂತೆ. ಆನಂತರ "ನೋಡಯ್ಯಾ ಆ ಬಡ್ಡೀಮಗ, ಎಷ್ಟು ಒಳ್ಳೆ ಶರೀರ ಇಟ್ಕೊಂಡಿದಾನೆ ಅವ್ನು. ಇಪ್ಪತ್ತೇ ನಿಮಿಷದಲ್ಲೇ ಎಷ್ಟು ಚೆನ್ನಾಗಿ ಹಾಡ್ಬಿಟ್ಟಿದ್ದಾನೆ. ಆತನ ತಾತನ ಬುದ್ಧಿ ಅವನಿಗೂ ಬಂದಿದೆ. ಎಲ್ಲ ಒಳಗಡೆ ಇಟ್ಟಿರುತ್ತಾನೆ. ಒಂದೊಂದಾಗಿ ನಾವೇ ಬಿಚ್ಚಬೇಕು..... ಹೇಗಿದೆ ನೋಡಿ ಅವನ ಶರೀರ" ಎಂದು ವರ್ಣನೆ ಮಾಡುತ್ತಾ ಕುಳಿತರಂತೆ.

ಇಲ್ಲಿ ನಾನು ಗಮನಿಸಿದ್ದ ಒಂದನ್ನು ನಿಮಗೆ ಹೇಳಲೇಬೇಕು. ಅಪ್ಪಾಜಿ ನನ್ನನ್ನು ಹೊಗಳುವಾಗ ಎಂದೂ ತಮ್ಮೊಂದಿಗೆ ಹೋಲಿಸಿಕೊಳ್ಳುತ್ತಿರಲಿಲ್ಲ, ಬದಲಿಗೆ ತಮ್ಮ ಅಪ್ಪಾಜಿ — ಅಂದರೆ ನನ್ನ ತಾತನಿಗೆ — ಹೋಲಿಸುತ್ತಿದ್ದರು. ಸ್ವತಃ ಅವರೇ ಸೂಪರ್ ಸ್ಟಾರ್ ಆದರೂ ಅವರಿಗೆ ಹೋಲಿಸಿಕೊಳ್ಳದೆ ತಾತನಿಗೆ ಹೋಲಿಸುವ ಮುಖಾಂತರ ಅವರ ತಂದೆಯ ಮೇಲಿನ ಪ್ರೀತಿ ಮತ್ತು ಗೌರವವನ್ನು ಸಾಬೀತುಪಡಿಸುತ್ತಿದ್ದರು. ತಂದೆ-ತಾಯಿಯನ್ನು ಮಕ್ಕಳು ಹೇಗೆ ಗೌರವಿಸಬೇಕು ಎಂಬ ಮುಂತ್ರವನ್ನು ಅವರು ನಮಗೆ ಕಲಿಸಿದ್ದು ಹೀಗೆ.


ಈ ಚಿತ್ರದ ಆಡಿಯೋ ಕ್ಯಾಸೆಟ್ ಬಿಡುಗಡೆ ಯಾಯಿತು. ನಾನು ಹೋದಲ್ಲೆಲ್ಲಾ ಮಕ್ಕಳು ನನಗೆ ಮುತ್ತಿಗೆ ಹಾಕಿ "ಮಣಿ ಮಣಿ ಮಣಿ..." ಎಂದು ಹಾಡಲು ಶುರು ಮಾಡುತ್ತಿದ್ದರು. ಎಷ್ಟೋ ಕಡೆ ನನ್ನನ್ನು ಮಣೀ ಅಂಕಲ್ ಎಂದೇ ಮಕ್ಕಳು ಕರೆಯಲು ಶುರು ಮಾಡಿದರು. 'ಓಂ' ಚಿತ್ರ ರಿಲೀಸ್ ಆದಾಗ ಸತ್ಯ ಎಂದು ಕರೆಯುತ್ತಿದ್ದ ಅಭಿಮಾನಿಗಳು ಒಂದೆಡೆಯಾದರೆ, 'ಜನುಮದ ಜೋಡಿ' ಬಿಡುಗಡೆಯಾದಾಗ ಮಣಿ ಅಂಕಲ್ ಎಂದು ಕರೆಯುವ ಈ ಮಕ್ಕಳು ಇನ್ನೊಂದೆಡೆ. ಹೀಗೆ ನಾನು ಎಲ್ಲ ತರಹದ ಜನರ ಪ್ರೀತಿ ಪಡೆಯು ವಂತಾಯಿತು.

ಇದೇ ಸಂದರ್ಭದಲ್ಲಿ ಶಾಸ್ತ್ರಿ ಹಾಡಿದ "ಕ್ವಾರಣ್ಯ ನೀಡವ್ವಾ ಕೋಡುಗಲ್ಲ ಮಾದೇವನಿಗೇ...." ಹಾಡು ಕೂಡಾ ಮಾರುಕಟ್ಟೆಯಲ್ಲಿ ಸೂಪರ್‌ಹಿಟ್ ಆಯಿತು. ಈ ಹಾಡು ಎಷ್ಟು ಸೂಪರ್‌ಹಿಟ್ ಆಯಿತೆಂದರೆ ಬೆಂಗಳೂರಿನ ಲೈವ್ ಬ್ಯಾಂಡ್‌ಗಳಲ್ಲಿ, ಪಬ್‌ಗಳಲ್ಲಿ ಈ ಹಾಡನ್ನು ಒತ್ತಾಯ ಮಾಡಿ ಹಾಕಿಸುತ್ತಿದ್ದರು. ಆ ವರ್ಷದ ಹೊಸ ವರ್ಷದ ಸಮಾರಂಭದಲ್ಲಿ ಬಹುತೇಕ ಎಲ್ಲ ಕಡೆ ಈ ಹಾಡಿಗೆ ಬೇಡಿಕೆ ಇತ್ತು. ಹೀಗೆ 'ಜನುಮದ ಜೋಡಿ' ಚಿತ್ರ ಬಿಡುಗಡೆಯಾಗುವ ಮೊದಲೇ ಹಾಡಿನಿಂದಾಗಿ ಎಲ್ಲಿಲ್ಲದ ಪ್ರಚಾರ ಗಿಟ್ಟಿಸಿತ್ತು.

ಈ ಚಿತ್ರದ ಕ್ಯಾಸೆಟ್ ಹಕ್ಕನ್ನು ನನ್ನ ಭಾವ ಮಧು ಬಂಗಾರಪ್ಪ ಖರೀದಿಸಿದ್ದರು. ಅವರು ಅನೇಕ ಸಂದರ್ಭನ

ನಿರೂಪಣೆ: ಸದಾಶಿವ ಶೆಣೈ

43



ಹ್ಯಾಟ್ರಿಕ್ ಹೀರೋನ ಹಾರ್ಟ್ ಬೀಟ್!

ಗಳಲ್ಲಿ ಹೇಳಿದ್ದನ್ನು ನಾನಿಲ್ಲಿ ನಿಮಗೂ ಹೇಳುತ್ತೇನೆ. ಈ ಕ್ಯಾಸೆಟ್ ಖರೀದಿಸುವ ಮೊದಲು ಅವರ ಆಕಾಶ್ ಆಡಿಯೋ ಸಂಸ್ಥೆ ನಷ್ಟದಲ್ಲಿತ್ತು. ಇದನ್ನು ಖರೀದಿಸಿದ ಒಂದೇ ವಾರಕ್ಕೆ ಅವರ ನಷ್ಟ ಕಳೆದು ಅವರು ಲಾಭ ಗಳಿಸಿದರು. 50 ಲಕ್ಷ ಕ್ಯಾಸೆಟ್‌ಗಳು, ಹತ್ತು ಲಕ್ಷ ಸಿ.ಡಿಗಳು ಕಳ್ಳೇಪುರಿ ಥರಾ ಮಾರಾಟವಾದವು. ಎಲ್ಲಿ ನೋಡಿದರಲ್ಲಿ 'ಜನುಮದ ಜೋಡಿ'ಯ ಹಾಡುಗಳು ಕರ್ನಾಟಕದ ಮೂಲೆ ಮೂಲೆಯಲ್ಲಿ ಪ್ರತಿಧ್ವನಿಸುತ್ತಿತ್ತು.

ಚಿತ್ರ ಬಿಡುಗಡೆಯಾಗಿದ್ದೇ ತಡ ಎಲ್ಲೆಡೆ ಒಂದೇ ತರಹದ ರಿಪೋರ್ಟ್ ಬರಲಾರಂಭಿಸಿತು. ಕನ್ನಡ ಚಿತ್ರ ಬಿಡುಗಡೆಯಾಗದ ಅನೇಕಾನೇಕ ಕೇಂದ್ರಗಳಲ್ಲಿ ಕೂಡಾ ಹಂಚಿಕೆದಾರರು ಈ ಚಿತ್ರವನ್ನು ಕೇಳಿ ಹಾಕಿಸಿಕೊಂಡರು. ಈ ಚಿತ್ರದ ದಾಖಲೆಯನ್ನು ನಮ್ಮ ಮನೆಯವರಾರೂ ಎಂದೂ ಮರೆಯಲು ಸಾಧ್ಯವೇ ಇಲ್ಲ. ಅಷ್ಟೇ ಅಲ್ಲ ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ಮತ್ತೊಂದು ಚಿತ್ರ ಈ ತರಹದ ದಾಖಲೆ ಮಾಡುವ ಸಾಧ್ಯತೆಯೂ ಕಡಿಮೆ.

ಸುಮಾರು 70 ಕೇಂದ್ರಗಳಲ್ಲಿ ಇದು ಶತದಿನೋತ್ಸವ ಆಚರಿಸಿತು. 45 ರಿಂದ 50 ಕೇಂದ್ರಗಳಲ್ಲಿ ಸಿಲ್ವರ್ ಜ್ಯೂಬಿಲಿ ಸಂಭ್ರಮವನ್ನು ಕಂಡಿತು. ನಾಲ್ಕು ಕೇಂದ್ರಗಳಲ್ಲಿ ಈ ಚಿತ್ರ ಒಂದು ವರ್ಷ ಕಾಲ ತುಂಬಿದ ಪ್ರದರ್ಶನ ಕಂಡಿತು. ಸುಮಾರು ಇಪ್ಪತ್ತೈದು ಸಿ ಸೆಂಟರ್‌ಗಳಲ್ಲಿ ಕೂಡಾ ಇದು ನೂರು ದಿನ ಓಡಿತು. ಅಪ್ಪಾಜಿ ಮತ್ತು ಅಮ್ಮ ಈ ಚಿತ್ರದ ಬಗ್ಗೆ ವ್ಯಾಖ್ಯಾನಿಸಿದ್ದನ್ನು ನಾನು ನಿಮಗೆ ಹೇಳಲೇಬೇಕು....

(ಮುಂದುವರೆಯುವುದು)

ಈಗ ಹಿಂಗಾರು ಮಳೆ!

'ಮುಂಗಾರು ಮಳೆ' ನಿಲ್ಲುವ ಮೊದಲೇ ಇನ್ನೊಂದು ಮಳೆ ಪ್ರಾರಂಭವಾಗಿದೆ. 'ಮುಂಗಾರು ಮಳೆ'ಯ ಹಲವು ತಂತ್ರಜ್ಞರು ಜೊತೆಗೂಡಿ ಮುಂದಿನವಾರ ಹೊಸ ಚಿತ್ರವನ್ನು ಆರಂಭಿಸಲಿದ್ದಾರೆ. ಇತ್ತೀಚಿಗೆ 'ಸಿಕ್ಸರ್' ಚಿತ್ರದಲ್ಲಿ ನಟಿಸಿದ್ದ ದೇವರಾಜ್ ಅವರ ಪುತ್ರ ಪ್ರಜ್ವಲ್ ಮತ್ತು 'ಖುಷಿ' ಚಿತ್ರದಲ್ಲಿ ನಟಿಸಿದ್ದ ತರುಣ್ ಈ ಚಿತ್ರದ ನಾಯಕ ನಟರು. ಅಂದರೆ ಇದೂ ಕೂಡ ಯೌವ್ವನಕ್ಕೆ ಕಾಲಿಡುವ ಹುಡುಗರ ಕತೆಯೆಂದು ಸುಲಭವಾಗಿ ನಿರ್ಧರಿಸಬಹುದು. ಅಂದಹಾಗೆ 'ಮುಂಗಾರು ಮಳೆ'ಯ ಛಾಯಾಗ್ರಾಹಕ ಕೃಷ್ಣ, ಕತೆಗಾರ ಪ್ರೀತಂ, ಸಂಭಾಷಣೆ ಬರೆದ ರಂಗನಾಥ್ ಈ ಚಿತ್ರದಲ್ಲಿ ಕೆಲಸ ನಿರ್ವಹಿಸಲಿದ್ದಾರೆ. ಆದರೆ ಯೋಗರಾಜ್ ಭಟ್ ಸ್ಥಾನಕ್ಕೆ ಈಗಾಗಲೇ ನೃತ್ಯ ನಿರ್ದೇಶಕರಾಗಿ ಹೆಸರು ಮಾಡಿರುವ ಹರ್ಷ ಬಂದಿದ್ದಾರೆ.

ಈ ಚಿತ್ರವನ್ನು ಹಿಂಗಾರು ಮಳೆ ಎಂದು ಭಾವಿಸಬಹುದೇ?

ಕೋಡ್ಲು ಕೂಡಿದ 25

ಐವರು ಮಹಿಳೆಯರು ಜೊತೆಗೂಡಿ ನಿರ್ಮಿಸಿರುವ, ಕೋಡ್ಲು ರಾಮಕೃಷ್ಣ ನಿರ್ದೇಶಿಸಿರುವ 'ತಮಾಷೆಗಾಗಿ' ಚಿತ್ರ ಸದ್ಯದಲ್ಲೇ ತೆರೆಕಾಣಲಿದೆ. ಅನಿರುದ್ಧ್ ಮತ್ತು 'ಚಿತ್ರ' ಖ್ಯಾತಿಯ ರೇಖಾ ಮುಖ್ಯ ಪಾತ್ರದಲ್ಲಿರುವ ಈ ಚಿತ್ರ ಹೊಟ್ಟೆ ಹುಣ್ಣಾಗುವಷ್ಟು ನಗಿಸಲಿದೆ ಎಂಬುದು ಕೋಡ್ಲುರವರ ಆತ್ಮವಿಶ್ವಾಸದ ಮಾತು.



ಅಂದಹಾಗೆ, ಕೋಡ್ಲು ರಾಮಕೃಷ್ಣ ಚಿತ್ರರಂಗಕ್ಕೆ ಕಾಲಿಟ್ಟು 25 ವರ್ಷಗಳಾಗಿರುವುದರಿಂದ 'ಕೋಡ್ಲು-25' ಎಂಬ ಸಮಾರಂಭವೊಂದು ಸದ್ಯದಲ್ಲೇ ನಡೆಯಲಿದೆ. ಸುಮಾರು 14 ಕಾದಂಬರಿ ಆಧಾರಿತ ಚಿತ್ರಗಳನ್ನು ನೀಡಿರುವ ಕೋಡ್ಲು ನಾಗತಿಹಳ್ಳಿ ಚಂದ್ರಶೇಖರ್‌ರಂತಹ ಬರಹಗಾರರನ್ನು ಚಿತ್ರರಂಗಕ್ಕೆ ತಂದವರು. 'ಕೋಡ್ಲು-25' ಸಮಾರಂಭದಲ್ಲಿ ಚಿತ್ರರಂಗಕ್ಕೆ ಕೋಡ್ಲುರವರ ಕೊಡುಗೆಗಳನ್ನು ಕೊಂಡಾಡುವವರೇ ಹೆಚ್ಚಿರುತ್ತಾರೆಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಅದೆಲ್ಲ ಏನೇ ಇರಲಿ, ಹನ್ನೆರಡೇ ವರ್ಷಗಳಲ್ಲಿ 50 ಸಿನಿಮಾ ಮಾಡಿದ ಸಾಯಿಪ್ರಕಾಶ್ ಅವರಂತಹ ನಿರ್ದೇಶಕರಿಗೆ ಹೋಲಿಸಿದರೆ ಕೋಡ್ಲು ನಮಗೆ ನಿಜಕ್ಕೂ ಮಣ್ಣಿನ ವಾಸನೆಯುಳ್ಳ ನಿರ್ದೇಶಕನಾಗಿ ಕಾಣಿಸುತ್ತಾರೆ. 'ತಮಾಷೆಗಾಗಿ' ಚಿತ್ರದ ಹಿನ್ನೆಲೆಯಲ್ಲಿ ಇದನ್ನೆಲ್ಲ ಹೇಳುತ್ತಿದ್ದರೂ 'ಕೋಡ್ಲು-25' ಮಾತ್ರ ತಮಾಷೆಗಾಗಿ ಹೇಳುತ್ತಿಲ್ಲ.

ಗುರು-ಶಿಷ್ಯನ ಜುಗಲ್ ಬಂಧಿ





ಗುರು-ಶಿಷ್ಯ ಜೋಡಿಯೊಂದು ಯಶಸ್ವಿ ಜುಗಲ್‌ಬಂಧಿ ಆಡುತ್ತಿರುವುದು ಗಾಂಧಿನಗರದವರ ಮೆಚ್ಚುಗೆ ಪಡೆದಿದೆ. ಈ ಜೋಡಿ ಬೇರೆ ಯಾರೂ ಅಲ್ಲ, 'ಮುಂಗಾರು ಮಳೆ'ಯ ಯೋಗರಾಜ್ ಭಟ್ ಮತ್ತು 'ದುನಿಯಾ'ದ ಸೂರಿ.

ಯೋಗರಾಜ್ ಭಟ್ ನಿರ್ದೇಶನದ 'ಮಣಿ' ಮತ್ತು 'ರಂಗ ಎಸ್ಸೆಸ್ಸೆಲ್ಸಿ' ಚಿತ್ರಗಳಿಗೆ ಸೂರಿ ಸಂಭಾಷಣೆಯನ್ನು ಬರೆದಿದ್ದರು. "ನಾನು ಯೋಗರಾಜ್ ಭಟ್ ಅವರ ಶಿಷ್ಯ" ಎಂದು ಸ್ವತಃ ಸೂರಿ ಆಗ ಇದೀ ಗಾಂಧಿನಗರದಲ್ಲಿ ಹೇಳಿಕೊಂಡಿದ್ದರು. ಸೂರಿ ಪಾಲಿಗೆ 'ದುನಿಯಾ' ಮೊದಲ ನಿರ್ದೇಶನದ ಚಿತ್ರ. ಈಗ ಇವರಿಬ್ಬರ ಚಿತ್ರಗಳು ಬಾಕ್ಸಾಫೀಸಿನಲ್ಲಿ ಗೆದ್ದಿರುವುದರಿಂದ ಗಾಂಧಿನಗರದ ಚಿತ್ರಪ್ರೇಮಿಗಳು ಇವರಿಬ್ಬರ ಬಗ್ಗೆ ಗಂಟೆಗಟ್ಟಲೆ ಹರಟೆ ಕೊಚ್ಚುತ್ತಿದ್ದಾರೆ.

ಹಿಂದೊಂದು ಕಾಲವಿತ್ತು, ಒಬ್ಬ ಅಸೋಸಿಯೇಟ್ ನಿರ್ದೇಶಕ ಕನಿಷ್ಠ ಹತ್ತು-ಹನ್ನೆರಡು ವರ್ಷ ಬೇರೆ ಬೇರೆ ನಿರ್ದೇಶಕರ ಬಳಿ ಕೆಲಸವನ್ನು ಕಲಿಯುತ್ತಿದ್ದರು. ಹೀಗಾಗಿ ಅವರು ನಿರ್ದೇಶನಕ್ಕೆ ಇಳಿಯುವಾಗ ಅವರ ಗುರುಗಳು ಬಹುತೇಕ ರಿಟೈರ್ಡ್ ಆಗುತ್ತಿದ್ದರು. ಆದರೆ ಈಗಿನ ಜಮಾನಾದ ಹುಡುಗರು ಸಖತ್ ಫಾಸ್ಟ್. ಒಂದೆರಡು ಚಿತ್ರಕ್ಕೇ ಸ್ವತಂತ್ರ ನಿರ್ದೇಶನ ಮಾಡಲು ಹೊರಡುತ್ತಾರೆ. ಅದಕ್ಕೆ ಈ ಸೂರಿಯೇ ಸಾಕ್ಷಿ.



'ಮುಂಗಾರು ಮಳೆ' ಹೀರೋ ಗಣೇಶ್ ಗ್ಯಾಂಗಿನಿಂದ ಬಂದಿರುವ ಲೇಟೆಸ್ಟ್ ಸುದ್ದಿಗಳು ಹೀಗಿವೆ:

ಮೊದಲನೆ ಸುದ್ದಿ ಏನೆಂದರೆ, ಗಣೇಶ್ ತನ್ನ ಪರೋಕ್ಷ ಗುರು ಕ್ರೇಜಿ ಸ್ಟಾರ್ ರವಿಚಂದ್ರನ್ ತರಹ ಚಿತ್ರಗಳ ಕಾಂಟ್ರಾಕ್ಟ್ ಪಡೆಯಲು ಹೊರಟಿದ್ದಾನಂತೆ. ಆತನಿಗೆ ಎರಡು ಕೋಟಿ ರೂಪಾಯಿಗಳನ್ನು ನೀಡಿದರೆ ಸಾಕು, ಆತನೇ ಕಥೆ ಬರೆದು, ನಾಯಕಿಯನ್ನು ಆಯ್ಕೆ ಮಾಡಿ, ಅದನ್ನು ತಾನೇ ನಿರ್ದೇಶಿಸಿ, ಅದರ ಇತರೇ ಜವಾಬ್ದಾರಿಗಳನ್ನು ತಾನೇ ಹೊತ್ತು ಸಿನಿಮಾವನ್ನು ಸಂಪೂರ್ಣ ಮಾಡಿಕೊಡುತ್ತಾನಂತೆ.

ಇನ್ನೊಂದು ಸುದ್ದಿಯೇನೆಂದರೆ, ಗಣೇಶ್ ಸಂಭಾವನೆ ದಿನದಿಂದ ದಿನಕ್ಕೆ ಏಕ್‌ದಂ ಏರುತ್ತಿದೆಯಂತೆ. ಈಗ ಆತ ಮಾಮೂಲಿ ನಿರ್ಮಾಪಕರಿಗೆ ಗಗನಕುಸುಮವಾಗುತ್ತಿದ್ದಾನೆ ಎಂದು ಆತನ ಕಾಲ್‌ಶೀಟ್ ಸಿಗದ ನಿರ್ಮಾಪಕರು ಸುದ್ದಿ ಹಬ್ಬಿಸಿದ್ದಾರೆ.

ಮತ್ತೊಂದು ಸುದ್ದಿ ಏನೆಂದರೆ ತನ್ನ ಗೆಳೆಯ ನಾಗಶೇಖರ್‌ನಿಗೆ ಗಣೇಶ್ ಕಾಲ್‌ಶೀಟ್ ನೀಡಿದ್ದಾನಂತೆ. ಈ ನಾಗಶೇಖರ್ ಬೇರೆ ಯಾರೂ ಅಲ್ಲ, ಈ ಹಿಂದೆ ಗಣೇಶ್ ನಟಿಸಿರುವ ಚಿತ್ರಗಳಲ್ಲಿ ಗುಂಪಿನಲ್ಲಿ ಗೋವಿಂದನಾಗಿ ಕಾಣಿಸಿದಾತ. ಈಗ ಗಣೇಶ್ ಹೀರೋ ಆದರೆ, ನಾಗಶೇಖರ್ ನಿರ್ದೇಶಕನಾಗಲು ಹೊರಟಿದ್ದಾನೆ.

ಮೊನ್ನೆ ಮೊನ್ನೆ ತನಕ ಕಾಮಿಡಿ ಟೈಮ್ ಗಣೇಶ್ ಎಂದು ಕರೆಸಿಕೊಳ್ಳುತ್ತಿದ್ದ ಈ ಹುಡುಗ ಈಗ ಗಾಂಧಿನಗರದ ದೊಡ್ಡ ದೊಡ್ಡ ನಿರ್ಮಾಪಕರ ನಿದ್ದೆಯನ್ನೇ ಕೆಡಿಸುವಷ್ಟು ಎತ್ತರಕ್ಕೆ ಬೆಳೆಯುತ್ತಿದ್ದಾನೆ. ಈ ಗಣೇಶನ ಬೆಳವಣಿಗೆ ನೋಡಿ ಕೆಲವು ನಾಯಕನಟರು ಕೂಡಾ ದಿಗಿಲುಗೊಂಡಿದ್ದಾರೆ. ಇದನ್ನು ಗಣೇಶನ ಮಹಾತ್ಮೆ ಎಂದು ಕರೆಯಬಹುದೇ?!

ಗಣೇಶನ ಮಹಾತ್ಮೆ !




ಸ್ಯಾರಿಯಲ್ಲೂ ಡೈಸಿ ಸ್ಪೈಸಿ!

ಡೈಸಿ ಎಂಬ ಸ್ಪೈಸಿ ನಟಿ ಮುಂದಿನ ವಾರ ಪತ್ರಿಕಾಗೋಷ್ಠಿಯನ್ನು ಕರೆದಿದ್ದಾಳೆ. ಯಾವ ಕಾರಣಕ್ಕೆ ಆಕೆ ಪತ್ರಿಕಾಗೋಷ್ಠಿ ಕರೆಯುತ್ತಿರಬಹುದು? ನಮಗೆ ಬಲ್ಲ ಮೂಲಗಳು ತಿಳಿಸಿದ್ದೇನೆಂದರೆ: ರಮೇಶ್ ನಿರ್ದೇಶನದ 'ಸತ್ಯವಾನ್ ಸಾವಿತ್ರಿ' ಚಿತ್ರದಲ್ಲಿ ಡೈಸಿ ಮೈತುಂಬ ಸೀರೆ ಉಟ್ಟು ನಟಿಸುತ್ತಿದ್ದಾಳಂತೆ. ಆಕೆಯ ಎದುರು ಜೆನ್ನಿಫರ್ ಎಂಬ ಬಳುಕುವ ಬಳ್ಳಿ ಪಕ್ಕಾ ಮಾಡ್ ಡ್ರೆಸ್‌ಗಳಲ್ಲಿ ಕಾಣಿಸಿಕೊಂಡಿದ್ದಾಳಂತೆ. ಹೀಗಾಗಿ ಇನ್ನು ಮುಂದೆ ಬರೀ ಸೀರೆ ಉಡುವ ಪಾತ್ರಗಳೇ ತನ್ನ ಪಾಲಿಗೆ ದೊರಕಬಹುದು ಎಂಬ ಭಯ ಕೊಡಗಿನ ಈ ಬೆಡಗಿಯನ್ನು ಕಾಡುತ್ತಿದೆಯಂತೆ. ಆ ಕಾರಣಕ್ಕೆ ಮುಂಬೈಯಲ್ಲಿ ಖ್ಯಾತ ಛಾಯಾಗ್ರಾಹಕರಿಂದ ಪಡ್ಡೆ ಹುಡುಗರ ನಿದ್ದೆಗೆಡಿಸುವಂತಹ ಭಂಗಿಗಳಲ್ಲಿ ಫೋಟೋಗಳನ್ನು ತೆಗೆಸಿಕೊಂಡಿದ್ದಾಳಂತೆ. ಇದನ್ನೆಲ್ಲ ಪತ್ರಕರ್ತರಿಗೆ ಹೋಲ್‌ಸೇಲ್ ಆಗಿ ಹಂಚಲೆಂದೇ ಪತ್ರಿಕಾಗೋಷ್ಠಿಯನ್ನು ಕರೆದಿದ್ದಾಳಂತೆ.

ಎಷ್ಟಾದರೂ ಈಕೆ ಇತ್ತೀಚೆಗೆ ಬೆಂಗಳೂರಿಗಿಂತ ಮುಂಬೈನಲ್ಲೇ ಹೆಚ್ಚು ಕಾಲವನ್ನು ಕಳೆದ ನಟಿಯಲ್ಲವೇ? ಹೀಗಾಗಿ ಬಾಲಿವುಡ್ ಶೈಲಿಯಲ್ಲೇ ಸ್ಕ್ಯಾಂಡಲ್‌ವುಡ್ಡಿನಲ್ಲೂ ಪ್ರಚಾರ ಆರಂಭಿಸಲು ಹೊರಟಿದ್ದಾಳೆ.

ಆದರೆ ಈ ಹುಡುಗಿ ಸ್ಯಾರಿಯಲ್ಲೂ ಸ್ಪೈಸಿಯಾಗಿರುತ್ತಾಳೆ ಎಂಬುದರ ಬಗ್ಗೆ ಪಡ್ಡೆಗಳಿಗೆ ಯಾವ ಅನುಮಾನವೂ ಇಲ್ಲವಂತೆ.



ಪುನೀತ್‌ಗೂ ಹೊಸಬರ ಕಾವು?

"ವರ್ಷಕ್ಕೊಂದು ಚಿತ್ರ" ಎಂಬ ತಮ್ಮ ಸಿದ್ಧಾಂತಕ್ಕೆ ಪುನೀತ್ ರಾಜ್‌ಕುಮಾರ್ ತಿಲಾಂಜಲಿ ಇಟ್ಟಿದ್ದಾರೆ. ಇದೇ ವಾರ ಪ್ರಕಾಶ್ ನಿರ್ದೇಶನದ 'ಮಿಲನ' ಚಿತ್ರ ಆರಂಭವಾಗುತ್ತಿದ್ದರೆ, ಸದ್ಯದಲ್ಲೇ ದಿ. ರಾಜೇಂದ್ರಬಾಬು ನಿರ್ದೇಶನದ ಮತ್ತೊಂದು ಚಿತ್ರವೂ ಸೆಟ್ಟೇರುತ್ತಿದೆ. ಜೊತೆಜೊತೆಗೆ ತಯಾರಾಗುತ್ತಿರುವ ಈ ಎರಡೂ ಚಿತ್ರಗಳಲ್ಲಿ ಪುನೀತ್ ನಟಿಸಲಿದ್ದಾರೆ.

ಈ ತನಕ ಪುನೀತ್ ಒಂದು ಚಿತ್ರ ಬಿಡುಗಡೆಯಾದ ಆರು ತಿಂಗಳುಗಳ ನಂತರ ಹೊಸ ಚಿತ್ರಕ್ಕೆ ಸಹಿ ಹಾಕುವ ಸಂಪ್ರದಾಯವನ್ನು ಪಾಲಿಸಿಕೊಂಡುಬಂದಿದ್ದರು. ಈಗ ಒಮ್ಮೆಲೇ ಎರಡೆರಡು ಚಿತಗಳಲ್ಲಿ ನಟಿಸುತ್ತಿರುವ ಹಿಂದಿನ ಉದ್ದೇಶವೇನು? ಹೊಸಬರ ಆಗಮನ ಮತ್ತು ಯಶಸ್ಸಿನ ಕಾವು ಪುನೀತ್‌ಗೂ ತಟ್ಟಿರಬಹುದೇ?

ಲಂಕೇಶ್-72

ಕಾರ್ಯಕ್ರಮಕ್ಕೆ ಸ್ವಾಗತ

ಲಂಕೇಶ್ ವಾರಪತ್ರಿಕೆಯ 2ನೇ ವಾರ್ಷಿಕೋತ್ಸವ **ಗೈಡ್** ಮಾಸಿಕದ 1ನೇ ವಾರ್ಷಿಕೋತ್ಸವ

ಮುಖ್ಯ ಅತಿಥಿ : ಸಾರಾ ಅಬೂಬಕರ್

ಪುಸ್ತಕ ಬಿಡುಗಡೆ : ಕಿ.ರಂ.ನಾಗರಾಜರಿಂದ

ಪಿ.ಲಂಕೇಶರ 'ನೀಲು ಕಾವ್ಯ'

ಕೆ. ಮರುಳಸಿದ್ಧಪ್ಪನವರಿಂದ

ಖುಷ್ವಂತ್ ಸಿಂಗ್‌ರ

'ಟ್ರೈನ್ ಟು ಪಾಕಿಸ್ತಾನ್'

ಅನು: ಡಾ. ಎಂ.ಬಿ. ರಾಮಮೂರ್ತಿ

ಅಧ್ಯಕ್ಷತೆ : ಡಾ. ಜಿ. ರಾಮಕೃಷ್ಣ

ಚಿತ್ರಾ ಪಾಳೇಕರ್ ಅವರಿಗೆ

'ಲಂಕೇಶ್ ಚಿತ್ರ ಪ್ರಶಸ್ತಿ' ಪ್ರಧಾನ

ಮತ್ತು ಅವರ ನಿರ್ದೇಶನದ

'ಮಾತಿ ಮಾಯ್'

ಮರಾಠಿ ಚಿತ್ರ ಪ್ರದರ್ಶನ

ಮಾರ್ಚ್ 8, 2007

ಸಮಯ: ಸಂಜೆ 4ಕ್ಕೆ, ಚಿತ್ರ ಪ್ರದರ್ಶನ 6ಕ್ಕೆ

ಸ್ಥಳ : ರವೀಂದ್ರ ಕಲಾಕ್ಷೇತ್ರ, ಬೆಂಗಳೂರು

ನಿಮ್ಮ ಆಗಮನದ ನಿರೀಕ್ಷೆಯಲ್ಲಿ: ಲಂಕೇಶ್ ಮತ್ತು ಗೈಡ್ ಬಳಗ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44